ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಅಕ್ಟೋಬರ್ 07, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 145 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999

## ರಿಸರ್ವ್ ಬ್ಯಾಂಕ್ ಬಡ್ಡಿ ದರ ಯಥಾಸ್ಥಿತಿ

ಮುಂಬೈ, ಅ. 6 - ರಿಸರ್ವ್ ಬ್ಯಾಂಕ್ ಬಡ್ಡಿ ದರ ನೀತಿಯನ್ನು ಯಥಾಸ್ಥಿತಿಯಲ್ಲಿ ಮುಂದುವರೆಸಿದೆ.

ಹಣದುಬ್ಬರದ ಪ್ರಮುಖ ತೊಡಕು ಮುಂದುವರೆದಿದೆ. ಆದರೆ, ಈ ಪರಿಸ್ಥಿತಿಯನ್ನು ಬಾಂಡ್‌ಗಳ ಮಾರಾಟದ ಮೂಲಕ ನಿಭಾಯಿಸಲಾಗುವುದು ಎಂದು ರಿಸರ್ವ್ ಬ್ಯಾಂಕ್ ತಿಳಿಸಿತ್ತು.

ರಿಸರ್ವ್ ಬ್ಯಾಂಕ್ ಹಣಕಾಸು ನೀತಿ ಸಮಿತಿಯು ಸರ್ವ ಸಮ್ಮತಿಯಿಂದ ರೆಪೋ ದರವನ್ನು ಶೇ.6.50ರ ಮಟ್ಟದಲ್ಲಿ ಮುಂದುವರೆಸಲು ನಿರ್ಧರಿಸಿದೆ.

## ಸಿಕ್ಕಿಂ ಜಲಪ್ರವಾಹ : ವರದಿಗಳಿಗೆ ನಿರ್ಲಕ್ಷ್ಯ

ನವದೆಹಲಿ, ಅ. 6 - ಸಿಕ್ಕಿಂನ ಟೀಸ್ಟಾ ನದಿಗೆ ನಿರ್ಮಿಸಲಾಗಿರುವ ಬಹುತೇಕ ಜಲ ವಿದ್ಯುತ್ ಯೋಜನೆಗಳು ಅವಘಡ ತರುವಂತಿವೆ ಎಂದು 2015ರಲ್ಲಿ ಕೇಂದ್ರ ಜಲ ಆಯೋಗ ನೀಡಿದ ವರದಿ ಈಗ ಚರ್ಚೆಗೆ ಕಾರಣವಾಗಿದೆ.

ಕಳೆದ ಅಕ್ಟೋಬರ್ 4ರಂದು ಟೀಸ್ಟಾ ನದಿ ಬಯಲಿನಲ್ಲಿ ಉಂಟಾದ ಕ್ಷಿಪ್ರ ಪ್ರವಾಹ ತೀವ್ರ ಅನಾಹುತಕ್ಕೆ ಕಾರಣವಾಗಿದೆ. ಕನಿಷ್ಠ 22 ಜನ ಮೃತಪಟ್ಟಿದ್ದಾರೆ ಮತ್ತು 103 ಜನ ಕಣ್ಮರೆಯಾಗಿದ್ದಾರೆ.

ಟೀಸ್ಟಾ ನದಿ ಬಯಲಿನಲ್ಲಿ ಜಲ ವಿದ್ಯುತ್ ಯೋಜನೆಗಳು ಅಪಾಯ ತರುವಂತಿವೆ ಎಂದು ಈ ಹಿಂದೆ ನಡೆಸಲಾದ ಅಧ್ಯಯನಗಳು ತಿಳಿಸಿದ್ದವು. ಅದರಲ್ಲೂ 2015ರ ವರದಿ ಈ ಬಗ್ಗೆ ಸ್ಪಷ್ಟ ಎಚ್ಚರಿಕೆಯನ್ನು ನೀಡಿತ್ತು. (2ನೇ ಪುಟಕ್ಕೆ)



## ಡಿ.23, 24ರಂದು ವೀರಶೈವ ಮಹಾ ಅಧಿವೇಶನ

### ಮಹಾಸಭಾದ ರಾಷ್ಟ್ರೀಯ ಮಹಾ ಪ್ರಧಾನ ಕಾರ್ಯದರ್ಶಿ ಭೀಮಣ್ಣ ಖಂಡ್ರೆ

ದಾವಣಗೆರೆ, ಅ. 6- ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಮಹಾಸಭಾದ 24ನೇ ಮಹಾ ಅಧಿವೇಶನವನ್ನು ಬರುವ ಡಿಸೆಂಬರ್ 23 ಹಾಗೂ 24ರಂದು ನಗರದ ಎಂ.ಬಿ.ಎ. ಕಾಲೇಜು ಮೈದಾನದಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದು ಮಹಾಸಭಾದ ರಾಷ್ಟ್ರೀಯ ಮಹಾ ಪ್ರಧಾನ ಕಾರ್ಯದರ್ಶಿ ಭೀಮಣ್ಣ ಖಂಡ್ರೆ ಹೇಳಿದರು.

ನಗರದ ಎಂ.ಬಿ.ಎ. ಕಾಲೇಜು ಸಭಾಂಗಣದಲ್ಲಿ ಮಹಾ ಅಧಿವೇಶನ ನಡೆಸುವ ಕುರಿತು ನಡೆದ ಪೂರ್ವಭಾವಿ ಸಭೆಯ ನಂತರ ಪತ್ರಿಕಾಗೋಷ್ಠಿ ನಡೆಸಿ ಅವರು ಮಾಹಿತಿ ನೀಡಿದರು.

ಪ್ರತಿ ಐದು ವರ್ಷಗಳಿಗೊಮ್ಮೆಮಹಾ ಅಧಿವೇಶನ ನಡೆಸಲಾಗುತ್ತದೆ. ಕಳೆದ ವರ್ಷವೇ ದಾವಣಗೆರೆಯಲ್ಲಿ ಅಧಿವೇಶನ ನಡೆಸಲು ಉದ್ದೇಶಿಸಲಾಗಿತ್ತು. ಆದರೆ ಕೊರೊನಾ, ಸಾರ್ವತ್ರಿಕ ಚುನಾವಣೆ ಮತ್ತಿತರೆ ಕಾರಣಗಳಿಂದಾಗಿ ಅನಿವಾರ್ಯವಾಗಿ ಮುಂದೂಡಲಾಗಿತ್ತು ಎಂದು ಹೇಳಿದರು.

ಅಧಿವೇಶನವನ್ನು ಮೂರು ದಿನಗಳ ಕಾಲ ನಡೆಸಲಾಗುತ್ತಿತ್ತು. ಆದರೆ ಈ ವರ್ಷ ರಾಜ್ಯದಲ್ಲಿ ಮಳೆ ಇಲ್ಲದೆ ಬರಗಾಲ ಬಂದಿರುವುದರಿಂದ ಎರಡು ದಿನಗಳು ನಡೆಸಲು ತೀರ್ಮಾನಿಸಲಾಗಿದೆ. ವೇದಿಕೆ, ಹಣಕಾಸು, ದಾಸೋಹ, ಮೆರವಣಿಗೆ, ಸಾರಿಗೆ ಸೇರಿದಂತೆ ವಿವಿಧ ಸಮಿತಿಗಳ ರಚನೆ ಮಾಡಲಾಗುವುದು. ಸ್ಮರಣ ಸಂಚಿಕೆಯನ್ನೂ ಹೊರ ತರಲಾಗುವುದು ಎಂದರು.

**ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆಯಲ್ಲಿ ನಡೆದ ಮಹಾ ಅಧಿವೇಶನದ ಪೂರ್ವಭಾವಿ ಸಭೆ**

ಅಧಿವೇಶನದಲ್ಲಿ ಮಹಿಳಾ ಗೋಷ್ಠಿ, ರೈತ ಗೋಷ್ಠಿ, ಯುವ ಗೋಷ್ಠಿಗಳನ್ನು ನಡೆಸಲು ಉದ್ದೇಶಿಸಲಾಗಿದೆ. ವೀರಶೈವ ಲಿಂಗಾಯತ ಸಮುದಾಯದ ಸವಾಲು ಕುರಿತು ಚರ್ಚೆ ನಡೆಯಲಿದೆ. ಅಧಿವೇಶನದಲ್ಲಿ ಕೆಲವು ನಿರ್ಣಯಗಳನ್ನು ಅಂಗೀಕಾರ ಮಾಡಿ, ಗೊತ್ತುವಳಿ ಮಂಡನೆ ಮಾಡುತ್ತೇವೆ. ಇದನ್ನು ರಾಜ್ಯ ಸರ್ಕಾರಕ್ಕೆ ನೀಡುತ್ತೇವೆ. ಈ ಹಿಂದೆ ನಡೆದ ಮಹಾ ಅಧಿವೇಶನಗಳಲ್ಲಿ ತೆಗೆದುಕೊಂಡ ನಿರ್ಣಯಗಳ ಪೈಕಿ ಕೆಲವು ಅನುಷ್ಠಾನಕ್ಕೆ ಬಂದಿದ್ದರೆ, ಮತ್ತೆ ಕೆಲವು ಅನುಷ್ಠಾನಕ್ಕೆ ಬಂದಿಲ್ಲ. ಈ ಕುರಿತಂತೆಯೂ ಅಧಿವೇಶನದಲ್ಲಿ ಪ್ರಸ್ತಾಪಿಸಲಾಗುವುದು ಎಂದರು.

ಇದೊಂದು ಐತಿಹಾಸಿಕ ಅಧಿವೇಶನವಾಗಿದ್ದು, ಅಧಿವೇಶನದಲ್ಲಿ ಸಮಸ್ತ ವೀರಶೈವ ಲಿಂಗಾಯತ ಮಠಾಧೀಶರು, ಜನಪ್ರತಿನಿಧಿಗಳನ್ನು ಪಕ್ಷಾತೀತವಾಗಿ ಆಹ್ವಾನಿಸಲಾಗುವುದು. ಕರ್ನಾಟಕವಷ್ಟೇ ಅಲ್ಲದೆ, ಹೊರ ರಾಜ್ಯ, ಹೊರ ದೇಶಗಳಿಂದಲೂ ಸಮುದಾಯದ ಜನತೆ ಮಹಾ ಅಧಿವೇಶನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಸಮುದಾಯದ ಅಧಿಕಾರಿಗಳಿಗೆ ಅನ್ಯಾಯವಾದ ವಿಷಯ ಕುರಿತು ಇಂದು ನಡೆದ ಪೂರ್ವಭಾವಿ ಸಭೆಯಲ್ಲಿ ಯಾವುದೇ ಚರ್ಚೆಯಾಗಿಲ್ಲ ಎಂದು ಸ್ಪಷ್ಟಪಡಿಸಿದ ಖಂಡ್ರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಎಲ್ಲಾ ಜಾತಿ, (3ನೇ ಪುಟಕ್ಕೆ)

## ಹೊಸ ಬಾರ್‌ಗಳಿಗೆ ಅವಕಾಶ ಇಲ್ಲ



ಬೆಂಗಳೂರು, ಅ.6 - ರಾಜ್ಯದಲ್ಲಿ ಹೊಸದಾಗಿ ಮದ್ಯದಂಗಡಿ ತೆರೆಯಲು ಅವಕಾಶ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಪ್ರಸಕ್ತ ವರ್ಷ ಅಬಕಾರಿ ಬಾಬ್ತಿನಲ್ಲಿ 35 ಸಾವಿರ ಕೋಟಿ ರೂ. ಸಂಗ್ರಹಿಸುವ ಗುರಿ ಹೊಂದಲಾಗಿದೆ. ಹಾಗಾಗಿ ಮದ್ಯದಂಗಡಿ ಹೊಸದಾಗಿ ತೆರೆಯಲು ಅವಕಾಶ ನೀಡಿ, ಸಾರ್ವಜನಿಕರಿಗೆ ಮುಜುಗರ ಉಂಟು ಮಾಡುವುದಿಲ್ಲ ಎಂದು ಹೇಳಿದರು.

ಈಗಾಗಲೇ ಮುಂಗಡ ಪತ್ರದಲ್ಲಿ ವಿವಿಧ ಮಾದರಿಯ ಮದ್ಯದ ಮೇಲೆ ಅನಿವಾರ್ಯವಾಗಿ ತೆರಿಗೆ ಹೆಚ್ಚಳ ಮಾಡಲಾಗಿದೆ. ಕಳೆದ ಸಾಲಿಗಿಂತ ಈ ಬಾರಿ ಶೇ.21ರಷ್ಟು ಮದ್ಯದ ದರ ಹೆಚ್ಚಳವಿದೆ.

ಕಿರಾಣಿ ಅಂಗಡಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವುದನ್ನು ತಪ್ಪಿಸುವ ಉದ್ದೇಶದಿಂದ ಪ್ರತಿ ಗ್ರಾಮ ಪಂಚಾಯ್ತಿಯಲ್ಲಿ ಒಂದು ಮದ್ಯದಂಗಡಿ ತೆರೆಯುವ ಪ್ರಸ್ತಾವನೆಯನ್ನು ಅಬಕಾರಿ ಸಚಿವರು ನೀಡಿದ್ದರು.

ನಗರಗಳಲ್ಲಿನ ಸೂಪರ್ ಮಾರುಕಟ್ಟೆಗಳಲ್ಲಿ ಹೊಸದಾಗಿ ಪರವಾನಗಿ ನೀಡುವುದು, ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ 5 ಸಾವಿರ ಜನಸಂಖ್ಯೆಗಿಂತ ಕಡಿಮೆ ಇರುವ ಗ್ರಾಮ ಪಂಚಾಯ್ತಿ ವ್ಯಾಪ್ತಿ ಸೇರಿದಂತೆ ಮದ್ಯದಂಗಡಿ ಪರವಾನಗಿ ನೀಡಲು ಇರುವ ಎಲ್ಲಾ ನಿರ್ಬಂಧಗಳನ್ನು ತೆರೆಯಲು ಸಚಿವರು ಮುಂದಾಗಿದ್ದರು.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಒಂದು ಸಾವಿರ ಮದ್ಯದಂಗಡಿ ತೆರೆಯುವ ಇಂಗಿತವನ್ನು ವ್ಯಕ್ತಪಡಿಸಿದ್ದರು. ಅದಕ್ಕೆ ತೀವ್ರ ವಿರೋಧ ವ್ಯಕ್ತವಾಗಿತ್ತು.

ಮಹಿಳೆಯರಿಂದಲೇ ತೀವ್ರ ವಿರೋಧ ವ್ಯಕ್ತವಾದ್ದರಿಂದ ಹೊಸ ಮದ್ಯದಂಗಡಿ ತೆರೆಯುವ ಪ್ರಸ್ತಾಪ ಕೈ ಬಿಡಲಾಗಿದೆ. ಆರ್ಥಿಕ ಮುಗ್ಗಟ್ಟಿದ್ದರೂ ಹೇಗೋ ಸರಿದೂಗಿಸಿಕೊಂಡು ಹೋಗುತ್ತೇವೆ ಎಂದು ಮುಖ್ಯಮಂತ್ರಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಬರ ಪರಿಸ್ಥಿತಿಯ ಬಗ್ಗೆ ಮಾತನಾಡಿದ ಅವರು, ರಾಜ್ಯದಲ್ಲಿ ವಾಸ್ತವಿಕವಾಗಿ ಸುಮಾರು 30 ಸಾವಿರ ಕೋಟಿ ರೂ. ಬೆಳೆ ಹಾನಿಯಾಗಿದೆ. ಎನ್.ಡಿ.ಆರ್.ಎಫ್. ಮಾರ್ಗಸೂಚಿಯಂತೆ 4860 ಕೋಟಿ ರೂ. ಪರಿಹಾರವನ್ನು ಕೋರಲಾಗಿದ್ದು, ಈ ಮೊತ್ತವನ್ನು ಬಿಡುಗಡೆ ಮಾಡಬೇಕೆಂದು ಕೇಂದ್ರವನ್ನು ಒತ್ತಾಯಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಕೇಂದ್ರದ ಅಧ್ಯಯನ ತಂಡಕ್ಕೆ ರಾಜ್ಯದಲ್ಲಿ ತಲೆದೋರಿರುವ ಬರ ಪರಿಸ್ಥಿತಿಯ ವಸ್ತುಸ್ಥಿತಿಯನ್ನು ಈಗಾಗಲೇ ವಿವರಿಸಲಾಗಿದೆ. ಒಟ್ಟು 236 ತಾಲ್ಲೂಕುಗಳಲ್ಲಿ 195 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ ಎಂದು ಹೇಳಿದರು. (3ನೇ ಪುಟಕ್ಕೆ)

### ಫಾರ್ಮ್‌ಹೌಸ್‌ನಲ್ಲಿ ವನ್ಯ ಜೀವಿಗಳಿದ್ದ ಪ್ರಕರಣ:

## ಎಸ್ಸೆಸ್ಸೆಂ ವಿರುದ್ಧದ ಎಫ್‌ಐಆರ್ ರದ್ದು



ದಾವಣಗೆರೆ, ಅ. 6- ವನ್ಯ ಜೀವಿ ಸಂರಕ್ಷಣಾ ಕಾಯ್ದೆಯಡಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಸೇರಿದಂತೆ ಏಳು ಜನರ ವಿರುದ್ಧ ದಾಖಲಿಸಲಾಗಿದ್ದ ಎಫ್‌ಐಆರ್‌ಗಳನ್ನು ರಾಜ್ಯ ಉಚ್ಚನ್ಯಾಯಾಲಯ ರದ್ದುಗೊಳಿಸಿದೆ.

ವನ್ಯ ಜೀವಿಗಳನ್ನು ಅಕ್ರಮವಾಗಿ ಸಾಕಿದ್ದಾರೆ ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಉದ್ಯಮಿ ಎಸ್.ಎಸ್. ಗಣೇಶ್, ಕರಿಬಸಪ್ಪ, ಸಂಪನ್ನ ಮುತಾಲಿಕ್ ಸೇರಿದಂತೆ ಏಳು ಜನರ ಮೇಲೆ ದಾಖಲಿಸಲಾಗಿದ್ದ ಎಫ್‌ಐಆರ್ ಅನ್ನು ನ್ಯಾಯಾಧೀಶರಾದ ನಾಗಪ್ರಸನ್ನ ಅವರು ರದ್ದುಗೊಳಿಸಿ ಶುಕ್ರವಾರ ತೀರ್ಪು ನೀಡಿದ್ದಾರೆ ಎಂದು ಸಚಿವರ ಪರವಾದ ಮಂಡಿಸಿದ್ದ ಹಿರಿಯ ವಕೀಲ ಹೆಚ್. ಎಸ್. ಚಂದ್ರಮೌಳಿ ತಿಳಿಸಿದ್ದಾರೆ.

**ಪ್ರಕರಣದ ಹಿನ್ನೆಲೆ:** ಕಳೆದ ಡಿಸೆಂಬರ್ 18ರಂದು ಬೆಂಗಳೂರಿನಲ್ಲಿ ಜಿಂಕೆಯ ಚರ್ಮ, ಕೊಂಬು ಸಹಿತ ವಿವಿಧ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಸೆಂಥಿಲ್ ಕುಮಾರ್ ಎಂಬುವನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು. ಆತ ನೀಡಿದ ಮಾಹಿತಿಯಂತೆ ಕಲ್ಲೇಶ್ವರ ಮಿಲ್‌ನ ಹಿಂಭಾಗದ ಫಾರ್ಮ್ ಹೌಸ್‌ಗೆ ಸಿಸಿಬಿ ಪೊಲೀಸರು ಮತ್ತು ಅರಣ್ಯ ಇಲಾಖೆ ಜಂಟಿಯಾಗಿ ದಾಳಿ ಮಾಡಿ ಕೃಷ್ಣಮೃಗ, ಜಿಂಕೆ ಸೇರಿ ಒಟ್ಟು 30 ವನ್ಯ ಜೀವಿಗಳನ್ನು ವಶಪಡಿಸಿಕೊಂಡಿದ್ದರು. ನಂತರ ವನ್ಯ ಜೀವಿ ಸಂರಕ್ಷಣಾ ಕಾಯ್ದೆಯಡಿ ಎಫ್‌ಐಆರ್ ದಾಖಲಾಗಿತ್ತು.

## ಮಕ್ಕಳ ಲೈಂಗಿಕ ಶೋಷಣೆ ಅಂಶಗಳನ್ನು ತೆಗೆದು ಹಾಕಲು ಜಾಲತಾಣಗಳಿಗೆ ಸೂಚನೆ

ನವದೆಹಲಿ, ಅ. 6 – ಮಕ್ಕಳ ಮೇಲಿನ ಲೈಂಗಿಕ ಶೋಷಣೆಯ ಅಂಶಗಳನ್ನು ತೆಗೆದು ಹಾಕುವಂತೆ ಟ್ವಿಟ್ಟರ್, ಯೂಟ್ಯೂಬ್ ಹಾಗೂ ಟೆಲಿಗ್ರಾಂ ಸಾಮಾಜಿಕ ಜಾಲತಾಣಗಳಿಗೆ ಕೇಂದ್ರ ಸರ್ಕಾರ ತಿಳಿಸಿದೆ.

ಸಾಮಾಜಿಕ ಜಾಲತಾಣಗಳು ಈ ಬಗ್ಗೆ ಕ್ರಮ ತೆಗೆದುಕೊಳ್ಳದೇ ಇದ್ದರೆ, ಐ.ಟಿ. ಕಾಯ್ದೆಯ ಸೆಕ್ಷನ್ 79ರ ಅಡಿ ನೀಡಲಾಗಿರುವ ಸುರಕ್ಷತೆಯನ್ನು ವಾಪಸ್ ಪಡೆಯಲಾಗುವುದು. ನಂತರ ಈ ತಾಣಗಳು ತಾವಾಗಿಯೇ ಆಕ್ಷೇಪಾರ್ಹ ಅಂಶಗಳನ್ನು ಪ್ರಕಟಿಸದಿದ್ದರೂ ಸಹ ನೇರವಾಗಿ ಕಾನೂನು ಕ್ರಮ ತೆಗೆದುಕೊಳ್ಳಬಹುದು ಎಂದು ಕೇಂದ್ರ ಐ.ಟಿ. ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದ್ದಾರೆ.

## ಔರಂಗಜೇಬ್ ಮಾನಸಿಕತೆಯಿಂದ ಸೌಹಾರ್ದತೆ ಸಾಧ್ಯವಿಲ್ಲ

### ಬೆಳ್ಳಿ ಇಟ್ಟಿಗೆ ಸಮರ್ಪಣಾ ಸಮಾರಂಭದಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ

ದಾವಣಗೆರೆ, ಸೆ. 6 - ಮುಘಲ್ ದೊರೆ ಔರಂಗಜೇಬ್ ದೇವಾಲಯ ಧ್ವಂಸ, ಮತಾಂತರ ಹಾಗೂ ಜಝಿಯಾ ತಲೆಗಂದಾಯ ಹೇರುವಂತಹ ಕೃತ್ಯಗಳನ್ನು ನಡೆಸಿದ್ದ. ಅಂತಹ ಮಾನಸಿಕತೆ ಪೋಷಿಸುವುದರಿಂದ ಸಮಾಜದಲ್ಲಿ ಸೌಹಾರ್ದತೆ ಸಾಧ್ಯವಾಗದು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ನಗರದ ರೇಣುಕ ಮಂದಿರದಲ್ಲಿ ಅಯೋಧ್ಯೆ ರಾಮ ಮಂದಿರಕ್ಕೆ ಬೆಳ್ಳಿ ಇಟ್ಟಿಗೆ ಸಮರ್ಪಣೆ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಔರಂಗಜೇಬ್, ಟಿಪ್ಪು ಸುಲ್ತಾನ್, ಮೊಹಮ್ಮದ್ ಘಜ್ನಿ ಹಾಗೂ ಘೋರಿ ಅಂಥವರ ಮಾನಸಿಕತೆ ಪೋಷಿಸುವ ಮನಸ್ಥಿತಿ ಜೀವಂತವಾಗಿದೆ. ಇದರಿಂದ ಹಿಂದೂ ಸಮಾಜಕ್ಕೆ ಈ ಹಿಂದೆ ಆಗಿರುವ ಗಾಯ ಮತ್ತೆ ಹಸಿಯಾಗುತ್ತಿದೆ ಎಂದರು.

ಔರಂಗಜೇಬ್ ರೀತಿಯವರಿಂದ ಆದ ಗಾಯವನ್ನು ಮರೆತು ಸಹಬಾಳ್ವೆಗೆ ಹಿಂದೂ ಸಮಾಜ ಸಿದ್ಧವಿದೆ. ಆದರೆ, ಶಿವಮೊಗ್ಗದಲ್ಲಿ ನಡೆದ ಘಟನೆ ಕೆಲವರಲ್ಲಿ ಔರಂಗಜೇಬ್ ಮಾನಸಿಕತೆ ಜೀವಂತವಾಗಿರುವುದನ್ನು ತೋರಿಸುತ್ತಿದೆ ಎಂದವರು ತರಾಟೆಗೆ ತೆಗೆದುಕೊಂಡರು.

ನೂರಾರು ಮನೆಗಳಲ್ಲಿ ಔರಂಗಜೇಬ್ ರೀತಿಯವರು ಹುಟ್ಟಬೇಕು ಎಂದು ಕೆಲವರು ಭಾವಿಸಿದರೆ, ಅಂಥವರನ್ನು ಎದುರಿಸಲು ಮನೆ ಮನೆಯಲ್ಲಿ ಶಿವಾಜಿ ಮಹಾರಾಜರು ಹುಟ್ಟಬೇಕು ಎಂದು ನಾವೂ ಬಯಸಬೇಕಾಗುತ್ತದೆ ಎಂದು ರವಿ ಹೇಳಿದರು.

ಔರಂಗಜೇಬ್ ಬದಲು ಶಿಶುನಾಳ ಷರೀಫ, ಇಬ್ರಾಹಿಂ ಸುತಾರ, ಅಬ್ದುಲ್ ಕಲಾಂ ಮುಂತಾದವರು ಆದರ್ಶವಾಗಬೇಕಿದೆ. ಇದರಿಂದ ಸಮಾಜದಲ್ಲಿ ಸೌಹಾರ್ದತೆ ಹಾಗೂ ಸಹಬಾಳ್ವೆ ಸಾಧ್ಯ ಎಂದವರು ತಿಳಿಸಿದರು.

ಇತಿಹಾಸದಲ್ಲಿ ಭಾರತ ಈಗಿನದಕ್ಕಿಂತ ಮೂರು ಪಟ್ಟು ದೊಡ್ಡದಾಗಿದ್ದು, ಜಂಬೂ ದ್ವೀಪ ಎಂದು ಕರೆಸಿಕೊಳ್ಳುತ್ತಿತ್ತು. ಏಕತೆ ದುರ್ಬಲವಾಗಿ ನಾವು ಅತಿ ದೊಡ್ಡ ಪ್ರದೇಶಗಳನ್ನು ಕಳೆದುಕೊಂಡೆವು ಎಂದವರು ವಿಷಾದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ಬಿಜೆಪಿ, ಭಜರಂಗ ದಳ ಹಾಗೂ ಆರ್.ಎಸ್.ಎಸ್.ಗಳು ದೇಶಭಕ್ತಿಯ (4ನೇ ಪುಟಕ್ಕೆ)



### ರಾಮ ಮಂದಿರ ಅಲ್ಲ, ರಾಷ್ಟ್ರ ಮಂದಿರ

ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವುದು ಕೇವಲ ರಾಮ ಮಂದಿರವಲ್ಲ, ಅದು ರಾಷ್ಟ್ರಮಂದಿರವಾಗಿದೆ. ಶ್ರೀ ರಾಮ ದೇವರಿಗೆ ಜೈ ಎನ್ನುವ ಮೊದಲು, ಭಾರತ್ ಮಾತಾ ಕಿ ಜೈ ಎಂದು ರಾಮ ಭಕ್ತರು ಘೋಷಣೆ ಮೊಳಗಿಸುತ್ತಾರೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ಶಬರಿಯನ್ನು ಶ್ರೀರಾಮ ಭೇಟಿ ಮಾಡಿದ ಪ್ರಸಂಗ ಉದಾಹರಿಸಿದ ರವಿ, ಜಾತಿ ರಹಿತ ಹಾಗೂ ಅಸ್ಪೃಶ್ಯತೆ ರಹಿತ ಜೀವನ ರಾಮ ದೇವರ ಸಂದೇಶವಾಗಿದೆ. ಜಾತೀಯತೆ ಹಾಗೂ ಅಸ್ಪೃಶ್ಯತೆ ನಿವಾರಿಸುವ ಮೂಲಕ ರಾಷ್ಟ್ರ ಮಂದಿರವನ್ನು ಬಲಿಷ್ಠ ಮಾಡಬೇಕಿದೆ ಎಂದರು.

## ಬಿಹಾರದ ಜಾತಿ ಗಣತಿ ಪ್ರಕಟಣೆಗೆ ಸುಪ್ರೀಂ ಕೋರ್ಟ್ ಆಕ್ಷೇಪ

ನವದೆಹಲಿ, ಅ. 6 - ಬಿಹಾರದ ಜಾತಿ ಗಣತಿ ಮಾಹಿತಿ ಪ್ರಕಟಿಸಿದ ರಾಜ್ಯ ಸರ್ಕಾರದ ಕ್ರಮಕ್ಕೆ ಸುಪ್ರೀಂ ಕೋರ್ಟ್ ಆಕ್ಷೇಪಿಸಿದೆ. ಆದರೆ, ಗಣತಿಯ ಮತ್ತಷ್ಟು ಮಾಹಿತಿ ಬಹಿರಂಗ ಪಡಿಸುವುದನ್ನು ತಡೆಯಲು ನಿರಾಕರಿಸಿದೆ.

**ಆದರೆ, ಮಾಹಿತಿ ಬಹಿರಂಗ ತಡೆಗೆ ನಕಾರ**

ಬಿಹಾರ ಸರ್ಕಾರ ಜಾತಿ ಗಣತಿ ಪ್ರಕಟಿಸುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಹಲವು ಅರ್ಜಿಗಳು ದಾಖಲಾಗಿವೆ. ಈ ಬಗ್ಗೆ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಎಸ್.ವಿ. ಎನ್. ಭಟ್ಟಿ ಅವರನ್ನು ಒಳಗೊಂಡ ಪೀಠ ವಿಚಾರಣೆ ನಡೆಸುತ್ತಿದೆ. ನ್ಯಾಯಾಲಯ ಮುಂದಿನ ವಿಚಾರಣೆಯನ್ನು ಜನವರಿ 2024ಕ್ಕೆ ನಿಗದಿ ಪಡಿಸಿದೆ.

ಜಾತಿ ಗಣತಿಯ ಮಾಹಿತಿಯನ್ನು ಏಕೆ ಪ್ರಕಟಿಸಿದ್ದೀರಿ? ಈ ರೀತಿಯ ಸಮೀಕ್ಷೆ ನಡೆಸುವ ರಾಜ್ಯ ಸರ್ಕಾರದ ಅಧಿಕಾರದ ಬಗ್ಗೆ ನಾವು ಪರಿಶೀಲಿಸಬೇಕಿದೆ ಎಂದು ಬಿಹಾರ ಸರ್ಕಾರದ ಪರವಾಗಿ ಹಾಜರಿದ್ದ ವಕೀಲರಿಗೆ ನ್ಯಾಯಾಲಯ ತಿಳಿಸಿತು.

ಆದರೆ, ಜಾತಿ ಗಣತಿಯ ಮಾಹಿತಿಯನ್ನು ಪ್ರಕಟಿಸದಂತೆ ತಡೆಯಬೇಕು ಎಂದು ಅರ್ಜಿದಾರರ ಪರವಾಗಿ ಹಿರಿಯ ವಕೀಲೆ ಅಪ್ರಜಿತಾ ಸಿಂಗ್ ಮಾಡಿಕೊಂಡ ಮನವಿಯನ್ನು ನ್ಯಾಯಾಲಯ ತಳ್ಳಿ ಹಾಕಿದೆ. ಜಾತಿ ಸಮೀಕ್ಷೆಗೆ ಪಾಟ್ನಾ ಹೈಕೋರ್ಟ್ ಹಸಿರು ನಿಶಾನೆ ತೋರಿಸಿದೆ. ಆದರೆ, ಇದರಲ್ಲಿ ಖಾಸಗಿತನದ ವಿಷಯ ಅಡಗಿದೆ ಎಂದು ವಕೀಲ ಸಿಂಗ್ ಹೇಳಿದ್ದರು.

ಅಕ್ರಮವಾಗಿ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ವರದಿ ರೂಪಿಸಬಾರದು. ಮಾಹಿತಿಯನ್ನು ಕಾನೂನು ರೀತ್ಯ ಸಂಗ್ರಹಿಸಿಲ್ಲ. ಖಾಸಗಿತನಕ್ಕೆ ಸಂಬಂಧಿಸಿದಂತೆ 2018ರಲ್ಲಿ ಕೆ.ಎಸ್. ಪುಟ್ಟಸ್ವಾಮಿ ಪ್ರಕರಣದಲ್ಲಿ ರೂಪಿಸಲಾದ ಕಾನೂನನ್ನೂ ಉಲ್ಲಂಘಿಸಿದೆ ಎಂದು ಸಿಂಗ್ ಹೇಳಿದ್ದರು. ಯಾವುದೇ ವ್ಯಕ್ತಿಗಳ ಹೆಸರು ಹಾಗೂ ಇತರೆ ಗುರುತುಗಳನ್ನು ಬಹಿರಂಗ ಪಡಿಸಿಲ್ಲ. ಹೀಗಾಗಿ ಖಾಸಗಿತನದ ಉಲ್ಲಂಘನೆ ಎನ್ನುವುದು ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ಪೀಠ ತಿಳಿಸಿದೆ.


## ಜಗಳೂರಿಗೆ ಇಂದು ಕೇಂದ್ರ ಬರ ಅಧ್ಯಯನ ತಂಡ

ಕೇಂದ್ರ ಸರ್ಕಾರದ ಬರ ಪರಿಸ್ಥಿತಿ ಅಧ್ಯಯನ ತಂಡ ಮಳೆ, ಬೆಳೆ ಸ್ಥಿತಿಗತಿಯ ಬಗ್ಗೆ ಪರಿಶೀಲನೆ ನಡೆಸಲು ಇಂದು ಜಗಳೂರಿಗೆ ಆಗಮಿಸಲಿದೆ ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

ಜಗಳೂರು ಈಗಾಗಲೇ ಬರ ಪೀಡಿತ ತಾಲ್ಲೂಕು ಎಂದು ಘೋಷಣೆಯಾಗಿದ್ದು, ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ 3 ತಂಡಗಳು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈಗಾಗಲೇ ಸಂಚಾರ ನಡೆಸಿವೆ.

ಕೇಂದ್ರ ಜಲ ಆಯೋಗದ ನಿರ್ದೇಶಕ ವಿ. ಅಶೋಕ್ ಕುಮಾರ್ ನೇತೃತ್ವದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಅಧೀನ ಕಾರ್ಯದರ್ಶಿ ಸಂಗೀತ ಕುಮಾರ್, ಎಂ ಎನ್ ಸಿ ಎಫ್ ಸಿ ಉಪನಿರ್ದೇಶಕರು ಹಾಗೂ ರಾಜ್ಯ ಸರ್ಕಾರದ ಪ್ರಕೃತಿ ವಿಕೋಪ ನಿರ್ವಹಣಾ ಸಮಿತಿ ಮುಖ್ಯಸ್ಥ ಹಾಗೂ ರಾಜ್ಯ ಸರ್ಕಾರದ ಪ್ರಕೃತಿ ವಿಕೋಪ ನಿರ್ವಹಣಾ ಸಮಿತಿ ಮುಖ್ಯಸ್ಥ ಜಿ.ಎಸ್. ಶ್ರೀನಿವಾಸ ರೆಡ್ಡಿ ಅವರನ್ನು ಒಳ (3ನೇ ಪುಟಕ್ಕೆ)

## ಮಹಿಳಾ ಹೋರಾಟಗಾರ್ತಿ ನರ್ಗೀಸ್ ಮೊಹಮ್ಮದಿಗೆ 'ನೊಬೆಲ್ ಶಾಂತಿ' ಪ್ರಶಸ್ತಿ



ಓಸ್ಲೋ, ಅ. 6 – ಜೈಲಿನಲ್ಲಿರುವ ಇರಾನ್‌ನ ಕಾರ್ಯಕರ್ತೆ ನರ್ಗೀಸ್ ಮೊಹಮ್ಮದಿ ಅವರನ್ನು ನೊಬೆಲ್ ಶಾಂತಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಅವರು ಮಹಿಳಾ ಹಕ್ಕು ಹಾಗೂ ಪ್ರಜಾಪ್ರಭುತ್ವದ ಪರ ಹೋರಾಟ ನಡೆಸುತ್ತಿದ್ದಾರೆ.

51 ವರ್ಷದ ಮೊಹಮ್ಮದಿ ಅವರನ್ನು ಇರಾನ್ ಅಧಿಕಾರಿಗಳು ಹಲವಾರು ವರ್ಷಗಳಿಂದ ಜೈಲಿನಲ್ಲಿರಿಸಿದ್ದಾರೆ. ಈ ಹಿಂದೆ ಮೊಹಮ್ಮದಿ ಅವರನ್ನು 13 ಬಾರಿ ಬಂಧಿಸಲಾಗಿದೆ (2ನೇ ಪುಟಕ್ಕೆ)

## ವಿದ್ಯಾರ್ಥಿಗಳಿಂದ ಶಿಕ್ಷಕನ ಕಾಲಿಗೆ ಗುಂಡು

**ಸಿನಿಮೀಯ ಮಾದರಿಯಲ್ಲಿ ದೃಶ್ಯ ಚಿತ್ರೀಕರಿಸಿ ಜಾಲತಾಣಗಳಲ್ಲಿ ಹಂಚಿಕೆ**

ಆಗ್ರಾ, ಅ. 6 - ಇಬ್ಬರು ಹದಿಹರೆಯದ ವಿದ್ಯಾರ್ಥಿಗಳು ತಮ್ಮ ಕೋಚಿಂಗ್ ಶಾಲೆಯ ಹೊರಗೆ ಮಾಜಿ ಶಿಕ್ಷಕರೊಬ್ಬರ ಕಾಲಿಗೆ ಗುಂಡು ಹಾರಿಸಿ, ಆ ದೃಶ್ಯವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡ ಘಟನೆ ನಡೆದಿದೆ.

16 ಹಾಗೂ 18 ವರ್ಷದ ಇಬ್ಬರು ವಿದ್ಯಾರ್ಥಿಗಳನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ಈ ಇಬ್ಬರು ಸುಮಿತ್ ಸಿಂಗ್ ಎಂಬುವವರ ಕಾಲ ಮೇಲೆ ಗುಂಡು ಹಾರಿಸಿದ್ದಾರೆ.

ಇಬ್ಬರು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಖಂಡೊಲಿಯ ಮಲ್ಲುಪುರ ಹಳ್ಳಿಯವರು. ಶಿಕ್ಷಕ ಖಂಡೊಲಿಯಲ್ಲಿ ಕೋಚಿಂಗ್ ಸಂಸ್ಥೆಯೊಂದನ್ನೂ ನಡೆಸುತ್ತಿದ್ದಾರೆ.

ಬಾಲಕಿಯೊಬ್ಬರ ಜೊತೆ ಮಾತನಾಡದಂತೆ ಹುಡುಗರಿಗೆ ಸಿಂಗ್ ಅವರ ಸಹೋದರ ಹೇಳಿದ್ದರು. ಇದೇ ಕಾರಣಕ್ಕಾಗಿ ಸುಮಿತ್ ಸಿಂಗ್ ಅವರ ಮೇಲೆ ಗುಂಡು ಹಾರಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಇಬ್ಬರು ಹುಡುಗರು ಗುಂಡು ಹಾರಿಸಿದ ದೃಶ್ಯವನ್ನು ಹಿಂದಿ ಚಲನಚಿತ್ರ 'ಗ್ಯಾಂಗ್ಸ್ ಆಫ್ ವಸ್ಸೈಪುರ್'ನಲ್ಲಿ (2ನೇ ಪುಟಕ್ಕೆ)

## ಸರ್ಕಾರಗಳ ಉಚಿತ ಕೊಡುಗೆಗಳ ಬಗ್ಗೆ ಸುಪ್ರೀಂ ಕೋರ್ಟ್ ಪರಿಶೀಲನೆ

ನವದೆಹಲಿ, ಅ. 6 – ವಿಧಾನಸಭಾ ಚುನಾವಣೆಗೆ ಮುಂಚೆ ಮಧ್ಯ ಪ್ರದೇಶ ಹಾಗೂ ರಾಜಸ್ಥಾನ ಸರ್ಕಾರಗಳು ಪ್ರಕಟಿಸುತ್ತಿರುವ ಉಚಿತ ಕೊಡುಗೆಗಳ ವಿಷಯ ಈಗ ಸುಪ್ರೀಂ ಕೋರ್ಟ್ ಪರಿಶೀಲನೆಗೆ ಬಂದಿದೆ.

ಸಾರ್ವಜನಿಕರ ಹಣ ದುರ್ಬಳಕೆಯಾಗುತ್ತಿದೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದು ದಾಖಲಾಗಿದೆ. ಈ ಬಗ್ಗೆ ಉತ್ತರಿಸುವಂತೆ ಎರಡೂ ರಾಜ್ಯ ಸರ್ಕಾರಗಳು, ಕೇಂದ್ರ ಸರ್ಕಾರ ಹಾಗೂ ಚುನಾವಣಾ ಆಯೋಗಕ್ಕೆ ನ್ಯಾಯಾಲಯ ತಿಳಿಸಿದೆ.

ಈ ಅರ್ಜಿಯ ವಿಚಾರಣೆಗೆ ನ್ಯಾಯಾಲಯ ಮೊದಲು ಹಿಂಜರಿಕೆ ವ್ಯಕ್ತಪಡಿಸಿ, ಸಂಬಂಧಿಸಿದ ಸರ್ಕಾರಗಳು ಚುನಾವಣೆಗಳಿಗೆ ಮುಂಚೆ ನೀಡುವ ಭರವಸೆಗಳ ನಿಯಂತ್ರಣ ಹೇಗೆ ಸಾಧ್ಯ ಎಂದು ಪ್ರಶ್ನಿಸಿತ್ತು. ನಂತರ ಅರ್ಜಿಯ ವಿಚಾರಣೆಗೆ ಅಂಗೀಕರಿಸಿದೆ.

ಚುನಾವಣೆಗೆ ಮುಂಚೆ ಎಲ್ಲಾ ರೀತಿಯ ಭರವಸೆಗಳನ್ನು ನೀಡಲಾಗುತ್ತದೆ. ನಾವು ಅದನ್ನು ನಿಯಂತ್ರಿಸಲಾಗದು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ (4ನೇ ಪುಟಕ್ಕೆ)

## 12 ಸಾವಿರ ಕೋಟಿ ರೂ.ಗಳ 2 ಸಾವಿರ ರೂ. ನೋಟುಗಳು ಇನ್ನೂ ಚಲಾವಣೆಯಲ್ಲಿ

ಮುಂಬೈ, ಅ. 6 – 3.43 ಲಕ್ಷ ಕೋಟಿ ರೂ. ಮೌಲ್ಯದ 2,000 ರೂ.ಗಳ ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿವೆ. ಅಕ್ಟೋಬರ್ 8ರ ನಂತರ ರಿಸರ್ವ್ ಬ್ಯಾಂಕ್‌ನ 19 ಕಚೇರಿಗಳಲ್ಲಿ ಈ ನೋಟುಗಳ ವಿನಿಮಯ ಮಾಡಿಕೊಳ್ಳಬಹುದು ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ್ ದಾಸ್ ತಿಳಿಸಿದ್ದಾರೆ.

ಶೇ.87ರಷ್ಟು ನೋಟುಗಳನ್ನು ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗಿದೆ. ಉಳಿದ ಹಣವನ್ನು ಬ್ಯಾಂಕ್ ಕೌಂಟರ್‌ಗಳಲ್ಲಿ ವಿನಿಮಯ ಮಾಡಿಕೊಳ್ಳಲಾಗಿದೆ ಎಂದವರು ಹೇಳಿದ್ದಾರೆ. ಪ್ರಸಕ್ತ 12,000 ಕೋಟಿ ರೂ.ಗಳ ನೋಟುಗಳು ಇನ್ನೂ ಚಲಾವಣೆಯಲ್ಲಿವೆ. ಈ ಮೊದಲು ನೋಟುಗಳ ಬದಲಾವಣೆಗೆ ಸೆಪ್ಟೆಂಬರ್ 30ರವರೆಗೆ ಗಡುವು ನೀಡಲಾಗಿತ್ತು. ನಂತರ ಗಡುವನ್ನು ಅಕ್ಟೋಬರ್ 7ರವರೆಗೆ ವಿಸ್ತರಿಸಲಾಗಿತ್ತು.

# ಬರಗಾಲದಲ್ಲೂ ಸುಂಕದಕಟ್ಟೆ ದೇವಸ್ಥಾನದ ಹುಂಡಿಯಲ್ಲಿ 49,57,745 ಹಣ ಸಂಗ್ರಹ



ಹೊನ್ನಾಳಿ, ಅ.6- 123 ವರ್ಷಗಳ ಇತಿಹಾಸದಲ್ಲಿ ಸತತವಾಗಿ 50 ದಿನಗಳ ಕಾಲ ಮಳೆಯಾಗದೇ ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕುಗಳೂ ಸೇರಿದಂತೆ ಬಹುತೇಕ ಕರ್ನಾಟಕ ರಾಜ್ಯವೇ ಬರಗಾಲದ ಭೀಕರತೆ ಎದುರಿಸುತ್ತಿದ್ದರೂ, ದೇವರ ಮೇಲಿನ ಭಕ್ತಿಗೆ ಬರ ಬಂದಿಲ್ಲ ಎಂಬುದಕ್ಕೆ ಅತ್ಯುತ್ತಮ ಉದಾಹರಣೆಯಾಗಿ ದ್ವಿತೀಯ ಧರ್ಮಸ್ಥಳವೆಂದೇ ಖ್ಯಾತಿಯಾಗಿರುವ 'ಎ' ಶ್ರೇಣಿಯ ಮುಜರಾಯಿ ಇಲಾಖೆಗೊಳಪಟ್ಟಿರುವ ಸುಂಕದಕಟ್ಟೆ ಗ್ರಾಮದ ಶ್ರೀ ಮಂಜುನಾಥ ಸ್ವಾಮಿ ಮತ್ತು ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಅಧಿಕ ಹಣ ಸಂಗ್ರಹವಾಗಿದೆ.

7 ತಿಂಗಳ ಅವಧಿಯಲ್ಲಿ 49,57,745 ರೂ.ಗಳು ಭಕ್ತಾದಿಗಳಿಂದ ಕಾಣಿಕೆ ರೂಪದಲ್ಲಿ ಸಂಗ್ರಹವಾಗಿದೆ ಎಂದು ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಮಾಹಿತಿ ನೀಡಿದ್ದಾರೆ.

ತಾಲ್ಲೂಕು ಆಡಳಿತ, ದೇವಸ್ಥಾನದ ಆಡಳಿತ ಮಂಡಳಿ, ಗ್ರಾಮಸ್ಥರು ಮತ್ತು ಕೆನರಾ ಬ್ಯಾಂಕ್‌ನ ಸಿಬ್ಬಂದಿಗಳೂ ಸೇರಿದಂತೆ ಒಟ್ಟು 38 ಜನ ಸಿಬ್ಬಂದಿಗಳು ಇಂದು ಹಣ ಎಣಿಕೆ ಮಾಡಿ, ಹುಂಡಿಯಲ್ಲಿ ಸಂಗ್ರಹವಾದ 49,57,745 ಹಣವನ್ನು ಕೆನರಾ ಬ್ಯಾಂಕ್‌ನಲ್ಲಿ ಜಮಾ ಮಾಡಲಾಗಿದೆ ಎಂದು ತಹಶೀಲ್ದಾರ್ ಪಟ್ಟರಾಜೇಗೌಡ ತಿಳಿಸಿದರು.

ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಎಸ್.ಕೆ. ನರಸಿಂಹಮೂರ್ತಿ ಮತ್ತು ಪ್ರಧಾನ ಅರ್ಚಕ ರಾಜು ಸ್ವಾಮಿ ಮಾತನಾಡಿ, ಈ ದೇವಸ್ಥಾನಕ್ಕೆ ರಾಜ್ಯದ ನಾನಾ ಕಡೆಗಳಿಂದ ಭಕ್ತಾದಿಗಳು ಆಗಮಿಸಿ, ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊತ್ತುಕೊಂಡು ತಮ್ಮ ಹರಕೆ ತೀರಿದ ಬಳಿಕ ತಮ್ಮ ಶಕ್ತ್ಯಾನುಸಾರವಾಗಿ ಹಣದ ರೂಪದಲ್ಲಿ ಕಾಣಿಕೆ ಸಲ್ಲಿಸುವ ವಾಡಿಕೆಯಿದೆ. ಕಳೆದ ಮಾರ್ಚ್ ತಿಂಗಳ ಹಿಂದೆ ಹಣ ಎಣಿಕೆ ಮಾಡಿದಾಗ ಸುಮಾರು 42 ಲಕ್ಷ ಹಣ ಹುಂಡಿಯಲ್ಲಿ ಸಂಗ್ರಹವಾಗಿದ್ದು, ಮಳೆ ಬಾರದೇ ಬರಗಾಲವಿದ್ದರೂ ಮಾರ್ಚ್ ತಿಂಗಳಿಂದ ಇಲ್ಲಿಯವರೆಗೆ 49,57,745 ರೂ.ಹಣ ಸಂಗ್ರಹವಾಗಿರುವುದು ಭಕ್ತರ ಭಕ್ತಿಗೆ ಮಾತ್ರ ಬರವಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು ವಿವರಿಸಿದರು.

**2000 ನೋಟು ಚಲಾವಣೆಗೆ ಕೊನೆ ದಿನ:** ಹುಂಡಿ ಹಣ ಎಣಿಕೆ ಸಂದರ್ಭದಲ್ಲಿ 2000 ಮುಖ ಬೆಲೆಯ 7 ನೋಟುಗಳು ಸಿಕ್ಕಿವೆ. 2000 ಮುಖ ಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯಲು ಆರ್.ಬಿ.ಐ. ಬ್ಯಾಂಕ್‌ಗಳಿಗೆ ನೀಡಿದ್ದ ಗಡುವನ್ನು ಸೆ.30ರ ಶನಿವಾರ ಕೊನೆಯ ದಿನವಾಗಿದ್ದು, ಮತ್ತೆ ಈ ಅವಧಿಯನ್ನು ಅಕ್ಟೋಬರ್ 7 ರ ವರೆಗೆ ವಿಸ್ತರಿಸಲಾಗಿತ್ತು.

ಇದೇ ಸಂದರ್ಭದಲ್ಲಿ ನೂತನ ತಹಶೀಲ್ದಾರ್ ಪಟ್ಟರಾಜೇಗೌಡ ಅವರನ್ನು ದೇವಸ್ಥಾನದ ಸಮಿತಿ ವತಿಯಿಂದ ಸನ್ಮಾನಿಸಲಾಯಿತು.

ಹುಂಡಿ ಹಣ ಎಣಿಕೆ ಸಂದರ್ಭದಲ್ಲಿ ರಾಜಸ್ವ ನಿರೀಕ್ಷಕರಾದ ಜಯಪ್ರಕಾಶ್, ಗುರುಪ್ರಸಾದ್, ರಮೇಶ್, ಗ್ರಾಮ ಆಡಳಿತಾಧಿಕಾರಿಗಳಾದ ಅಶೋಕ್, ಭರ್ಮಪ್ಪ, ಮುನೇಶ್, ಬಸವರಾಜ್, ದೊಡ್ಡೇಶ್, ಕೆನರಾ ಬ್ಯಾಂಕ್ ಕ್ಯಾಷಿಯರ್ ರಾಮಣ್ಣ, ದೇವಸ್ಥಾನದ ಸಮಿತಿಯ ಸದಸ್ಯರಾದ ಕರಿಯಪ್ಪ, ಎಸ್.ಎನ್. ಪ್ರಸನ್ನ, ಎಸ್.ಎಚ್. ನರಸಪ್ಪ, ಚಂದ್ರಮ್ಮ, ಗೌರಮ್ಮ, ಎ.ಕೆ.ಅಣ್ಣಪ್ಪ, ಎಚ್.ಆರ್.ರಾಕೇಶ್, ಗ್ರಾ.ಪಂ. ಸದಸ್ಯ ಡಿ.ಬಿ. ಶ್ರೀನಾಥ್, ಗ್ರಾಮಸ್ಥರಾದ ರುದ್ರೇಶ್, ಎಸ್.ಜಿ. ಮಂಜಪ್ಪ, ನರಸಿಂಹಪ್ಪ ಕೆನರಾ ಬ್ಯಾಂಕ್ ಮತ್ತು ಕಂದಾಯ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.

# ರಾಜ್ಯ ಸರ್ಕಾರಿ ನೌಕರರ ಒಕ್ಕೂಟದಿಂದ ದೆಹಲಿ ಚಲೋ : ವಾಹನ ಜಾಥಾ




ಹರಪನಹಳ್ಳಿ, ಅ.6- ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ವತಿಯಿಂದ ಬರುವ ನವೆಂಬರ್ 3ರಂದು ದೆಹಲಿ ಚಲೋ ನಿಮಿತ್ತ ಹರಪನಹಳ್ಳಿಯಲ್ಲಿ ವಿಜಯನಗರ ಜಿಲ್ಲಾ ಘಟಕದವರ ಉಪಸ್ಥಿತಿಯಲ್ಲಿ ನೌಕರರ ಅನೇಕ ಬೇಡಿಕೆಗಳ ಬಗ್ಗೆ ವಾಹನ ಜಾಥಾ ನೆಡಸಲಾಯಿತು.

ಈ ವೇಳೆ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ತಾಲ್ಲೂಕು ಅಧ್ಯಕ್ಷ ಎಂ. ಆಂಜನೇಯ ಮಾತನಾಡಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು, 7 ನೇ ವೇತನ ಆಯೋಗ ಅನುಷ್ಠಾನ. 18 ತಿಂಗಳು ತುಟ್ಟಿ ಭತ್ಯೆ ಬಾಕಿ ಮಂಜೂರಾತಿ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ನೌಕರರನ್ನು ಜಾಗೃತಿ ಗೊಳಿಸುವ ಕಾರ್ಯಕ್ರಮ ಇದಾಗಿದೆ ಎಂದರು.

ಈ ವೇಳೆ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಜಿಲ್ಲಾಧ್ಯಕ್ಷ ನಾಗರಾಜ ಪತ್ತಾರ್, ಬಳ್ಳಾರಿ ಜಿಲ್ಲಾ ಧ್ಯಕ್ಷ ಅಲ್ಲಾಂ ಭಾಷ, ತಾಲ್ಲೂಕು ಗೌರವ ಅಧ್ಯಕ್ಷ ಪಿ.ಬಸವರಾಜ, ತಾಯಪ್ಪ, ಪ್ರಧಾನ ಕಾರ್ಯದರ್ಶಿ ಎಸ್.ಎಂ.ಕೊಟ್ರಯ್ಯ, ಸಂಘಟನಾ ಕಾರ್ಯದರ್ಶಿ ಮಂಜಪ್ಪ ಪಿ, ಶಿಕ್ಷಕರಾದ ರೇವಣಸಿದ್ದಪ್ಪ, ಎಚ್.ಬಿ. ಚಂದ್ರಪ್ಪ, ಡಿ. ಮಲ್ಲಿಕಾರ್ಜುನ, ಎಚ್.ಪಿ. ಚಂದ್ರಪ್ಪ, ಸಂಗಯ್ಯ, ಅಸ್ಲಾಂ ಬಾಷ, ಅರುಣಕುಮಾರ್, ರಮೇಶ. ಎಚ್, ರೇಣುಕಾ, ಚಂದ್ರಮ್ಮ ಆನಂದ ಎನ್, ಮಲ್ಲಿಕಾರ್ಜುನ ಪಿ, ಆರ್.ಎಸ್. ಮಂಜುನಾಥ, ಮೂರ್ತಿ ನಾಯ್ಕ ಸಾವಿತ್ರಿಬಾಯಿ ಪುಲೆ ಶಿಕ್ಷಕಿಯರ ಸಂಘದ ಅಧ್ಯಕ್ಷರಾದ ಲತಾ ಸೇರಿದಂತೆ ಇತರರು ಇದ್ದರು.




ಚಿತ್ರ : ಎಂ. ಚಿದಾನಂದ ಕಂಚಿಕೇರಿ

**ಹರಿಹರ ನಗರದ ಬಸ್ ನಿಲ್ದಾಣದಿಂದ ಗ್ರಾಮೀಣ ಪ್ರದೇಶಗಳಾದ ಭಾನುವಳ್ಳಿ, ಉಕ್ಕಡಗಾತ್ರಿ ಮಾರ್ಗವಾಗಿ ಸಂಚರಿಸುವ ನಗರ ಸಾರಿಗೆ ಸರ್ಕಾರಿ ಬಸ್ಸಿನಲ್ಲಿ ಪ್ರಯಾಣಿಕರ ಸಂಖ್ಯೆ ಅಧಿಕವಾಗಿದ್ದು, ಮಹಿಳೆ ಮತ್ತು ಶಾಲಾ ವಿದ್ಯಾರ್ಥಿಗಳು ಪುಟ್ ಪಾತ್ ಮೇಲೆ ನಿಂತುಕೊಂಡು ತಮ್ಮ ಊರಿಗೆ ಹೋಗಲು ಹರ ಸಾಹಸ ಪಡುತ್ತಿರುವ ದೃಶ್ಯ.**

## ಸಿಕ್ಕಿಂ ಜಲಪ್ರವಾಹ : ವರದಿಗಳಿಗೆ ನಿರ್ಲಕ್ಷ್ಯ

**(1ನೇ ಪುಟದಿಂದ)** ಪರಿಸ್ಥಿತಿ ಕೈ ಮೀರಿದರೆ ಹಲವು ಹಿಮ ಕೊಳಗಳು ಉಕ್ಕಿ ಹರಿಯಬಹುದು. ಇದರಿಂದ ನದಿ ನೀರಿನ ಮಟ್ಟ 4.45 ಮೀಟರ್‌ಗಳವರೆಗೆ ಹೆಚ್ಚಾಗಬಹುದು ಎಂದು ತಿಳಿಸಲಾಗಿತ್ತು. ಆದರೆ, ಈ ರೀತಿಯ ಪ್ರವಾಹಗಳ ಬಗ್ಗೆ ಎಚ್ಚರಿಕೆ ನೀಡುವ ಬಗ್ಗೆ ಅಧಿಕಾರಿಗಳು ಕ್ರಮ ತೆಗೆದುಕೊಂಡಿರಲಿಲ್ಲ ಎಂದು ಪರಿಣಿತರು ಹೇಳಿದ್ದಾರೆ.

## ರಾಜ್ಯ ಮಟ್ಟದ ಕ್ರೀಡಾಕೂಟಕ್ಕೆ ಸಿದ್ಧಗಂಗಾ ಪ.ಪೂ ವಿದ್ಯಾರ್ಥಿಗಳು



ದಾವಣಗೆರೆ, ಅ.6- ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ನಗರದ ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಜಯ ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

**ಬಾಲಕರ ವಿಭಾಗ:** ಟೆನ್ನಿಸ್, ವಾಲಿ ಬಾಲ್‌ನಲ್ಲಿ ಅವನೀಶ್ ಡಿ. ಹೆಚ್, ವಿದ್ಯಾನಿಧಿ ಮತ್ತು ಸಿದ್ದೇಶ ಪ್ರಥಮ, ಕರಾಟೆಯಲ್ಲಿ ಗಣೇಶ್ ಪ್ರಥಮ ಮತ್ತು ಮಧು ದ್ವಿತೀಯ, ಚೆಸ್‌ನಲ್ಲಿ ಆದಿತ್ಯ ದೀಪಕ್ ಕುಮಾರ್ ಪ್ರಥಮ ಮತ್ತು ಶ್ರೀಕಾಂತ್ ದ್ವಿತೀಯ, ನೆಟ್‌ಬಾಲ್‌ನಲ್ಲಿ ಪ್ರೀತಂ ತಂಡ ಪ್ರಥಮ ಸ್ಥಾನ ಗಳಿಸಿದೆ. ಯೋಗ ಸ್ಪರ್ಧೆಯಲ್ಲಿ ನವೀನ್ ದ್ವಿತೀಯ ಮತ್ತು ಪ್ರೀತಂ ಹಾಗೂ ಶಿವರಾಜ್ ತೃತೀಯ ಸ್ಥಾನ ಪಡೆದಿರುತ್ತಾರೆ.

**ಬಾಲಕಿಯರ ವಿಭಾಗ:** ಟೆನ್ನಿಸ್, ವಾಲಿಬಾಲ್‌ನಲ್ಲಿ ಸುಪ್ರಿಯಾ, ಶ್ರೀನಿಧಿ ಹಂಸ ಮತ್ತು ಕವನ ಪ್ರಥಮ, ಕರಾಟೆಯಲ್ಲಿ ರಕ್ಷಾ ಜಿ. ಆರ್. ಪ್ರಥಮ. ಸ್ವಿಮ್ಮಿಂಗ್‌ನಲ್ಲಿ ಚಿನ್ಮಯ್ ಪ್ರಥಮ. ಯೋಗ ಸ್ಪರ್ಧೆಯಲ್ಲಿ ಸುಪ್ರಿಯ ಮತ್ತು ಮಾನ್ಯ ದ್ವಿತೀಯ, ದೀಪ್ತಿ ತೃತೀಯ. ವಾಲಿಬಾಲ್‌ನಲ್ಲಿ ಸುಪ್ರಿಯಾ ಪ್ರಥಮ.

ಕ್ರೀಡಾಪಟುಗಳನ್ನು ಸಿದ್ದಗಂಗಾ ಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿಸೌಜ, ನಿರ್ದೇಶಕ ಡಾ.ಜಯಂತ್, ಕಾರ್ಯದರ್ಶಿ ಶಿವಣ್ಣ, ಪ್ರಾಂಶುಪಾಲರಾದ ವಾಣಿಶ್ರೀ, ದೈಹಿಕ ಶಿಕ್ಷಣ ನಿರ್ದೇಶಕ ರಘು ಹೆಚ್.ಎಂ, ಶ್ರೀನಿವಾಸ್, ಸುನೀತ ಅಭಿನಂದಿಸಿದ್ದಾರೆ.

## ಮಹಿಳಾ ಹೋರಾಟಗಾರ್ತಿ ನರ್ಗೀಸ್ ಮೊಹಮ್ಮದಿಗೆ 'ನೊಬೆಲ್ ಶಾಂತಿ' ಪ್ರಶಸ್ತಿ

**(1ನೇ ಪುಟದಿಂದ)** ಹಾಗೂ ಐದು ಬಾರಿ ಶಿಕ್ಷೆಗೆ ಗುರಿಪಡಿಸಲಾಗಿದೆ. ಪ್ರಸಕ್ತ ಅವರನ್ನು ಇರಾನ್‌ನ ಕುಖ್ಯಾತ ಎವಿನ್ ಬಂಧೀಖಾನೆಯಲ್ಲಿ ಇರಿಸಲಾಗಿದೆ.

ಮೊಹಮ್ಮದಿ ಅವರು ಈ ನೊಬೆಲ್ ಶಾಂತಿ ಪ್ರಶಸ್ತಿ ಪಡೆದ 19ನೇ ಮಹಿಳೆಯಾಗಿದ್ದಾರೆ.

ಈ ಪ್ರಶಸ್ತಿಗೆ ಪಾತ್ರವಾದ ಎರಡನೇ ಇರಾನಿ ಮಹಿಳೆಯೂ ಆಗಿದ್ದಾರೆ. 2003ರಲ್ಲಿ ಶಿರಿನ್ ಎಬಾದಿ ಅವರು ಈ ಪ್ರಶಸ್ತಿಗೆ ಪಾತ್ರರಾಗಿದ್ದರು.

## ವಿದ್ಯಾರ್ಥಿಗಳಿಂದ ಶಿಕ್ಷಕನ ಕಾಲಿಗೆ ಗುಂಡು

**(1ನೇ ಪುಟದಿಂದ)** ಬರುವ ದೃಶ್ಯವೊಂದರ ರೀತಿ ಚಿತ್ರೀಕರಿಸಿದ್ದಾರೆ. ಆರು ತಿಂಗಳ ನಂತರ ಮತ್ತೆ ಬಂದು ಗುಂಡು ಹಾರಿಸುತ್ತೇವೆ. ನಮ್ಮ ಬಳಿ 40 ಗುಂಡುಗಳಿದ್ದವು, ಇನ್ನೂ 39 ಉಳಿದಿವೆ ಎಂದು ಓರ್ವ ಹೇಳಿರುವುದೂ ವಿಡಿಯೋದಲ್ಲಿದೆ. ಗುಂಡೇಟಿಗೆ ಗುರಿಯಾದ ಶಿಕ್ಷಕನನ್ನು ಆಗ್ರಾದ ಎಸ್.ಎನ್. ಮೆಡಿಕಲ್ ಕಾಲೇಜಿಗೆ ದಾಖಲಿಸಲಾಗಿದ್ದು, ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ.


### ಕೆ. ಶಿವಪ್ಪ ನಿಧನ



9ನೇ ಮೇನ್, 4ನೇ ಕ್ರಾಸ್, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ ವಾಸಿ

**ಕಳವೂರು ಶಿವಪ್ಪ**

ನಿವೃತ್ತ ಪ್ರಥಮ ದರ್ಜೆ ಭೂ ಮಾಪಕರು, ದಾವಣಗೆರೆ (82 ವರ್ಷ)

**ಕೆ. ಓಂಕಾರಪ್ಪನವರು,** ನಿ.ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಇವರ ಸಹೋದರ ದಿನಾಂಕ : 06.10.2023ರ ಶುಕ್ರವಾರ ಮಧ್ಯಾಹ್ನ 1.00 ಗಂಟೆಗೆ ನಿಧನರಾಗಿರುತ್ತಾರೆ. ಪತ್ನಿ, ಇಬ್ಬರು ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯು ದಿ. : 07.10.2023ರ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗದವರು :**

**ಪತ್ನಿ : ದ್ರಾಕ್ಷಾಯಣಮ್ಮ ಮತ್ತು ಮಕ್ಕಳು, ಫೋ. : 9741061076, 9535344012**


# ಶಿವಮೊಗ್ಗದ ಪ್ರಕರಣ : ಆರೋಪಿಗಳನ್ನು ಬಂಧಿಸಿದರೆ ಸಾಲದು, ಎನ್‌ಕೌಂಟರ್ ಮಾಡಿ

ಹೊನ್ನಾಳಿ, ಅ. 6- ಶಿವಮೊಗ್ಗದಲ್ಲಿ ಈದ್‌ಮಿಲಾದ್ ಮೆರವಣಿಗೆ ವೇಳೆ ನಡೆದ ಗಲಭೆ ಸಂದರ್ಭದಲ್ಲಿ ದುಷ್ಕರ್ಮಿಗಳು ಅಶಾಂತಿ ಮೂಡಿಸಿರುವ ಆರೋಪಿಗಳನ್ನು ಬಂಧಿಸಿದರೆ ಸಾಲದು, ಅವರನ್ನು ಎನ್‌ಕೌಂಟರ್ ಮಾಡಿ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಹೊನ್ನಾಳಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಳಿದ ಜೀವಕ್ಕೆ ಬೆದರಿಸಿದ್ದು, ಅಲ್ಲದೆ ಶಿವಮೊಗ್ಗ ಎಸ್ಪಿ ಅವರ ಮೇಲೆ ದಾಳಿಗೆ ಯತ್ನಿಸಿದ್ದ ದ್ರೋಹಿಗಳಿಗೆ ಎನ್‌ಕೌಂಟರ್ ಸರಿಯಾದ ಶಿಕ್ಷೆ ಎಂದರು.

ಪ್ರತಿ ಬಾರಿ ದೇಶದೆಲ್ಲೆಡೆ ಗಣಪತಿ ವಿಸರ್ಜನೆ ಮಾಡುವಾಗ ಲಕ್ಷಾಂತರ ಭಕ್ತರು ಸೇರಿ ಭವ್ಯ ಮೆರವಣಿಗೆ ಮಾಡುವಾಗ ಯಾವುದೇ ಚಿಕ್ಕ ಗಲಾಟೆ ಕೂಡ ಆಗುವುದಿಲ್ಲ. ಆದರೆ, ಮುಸ್ಲಿಂ ಹಬ್ಬದ ವೇಳೆ ಹಿಂದೂಗಳನ್ನು ಟಾರ್ಗೆಟ್ ಮಾಡಿ ಗಲಾಟೆ ಮಾಡಿ ಅಶಾಂತಿ ಮೂಡಿಸುವುದು ಪರಿಪಾಠವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಶಿವಮೊಗ್ಗ ರಾಗಿಗುಡ್ಡದ ಗಲಭೆ ಪ್ರಕರಣವನ್ನು ಹಾಲಿ ನ್ಯಾಯಾಧೀಶರಿಂದ ತನಿಖೆ ಮಾಡಿಸಿದರೆ ಮುಸ್ಲಿಮರ ದೌರ್ಜನ್ಯಕ್ಕೆ ಒಳಗಾದ ಹಿಂದೂಗಳಿಗೆ ನ್ಯಾಯ ಸಿಗಬಹುದು. ಆದ್ದರಿಂದ ಕೂಡಲೇ ಮುಖ್ಯಮಂತ್ರಿಗಳು ಹಾಲಿ ನ್ಯಾಯಾಧೀಶರಿಂದಲೇ ತನಿಖೆ ಮಾಡಿಸಿ ಎಂದು ಒತ್ತಾಯಿಸಿದರು.



ಶಿವಮೊಗ್ಗ ಎಸ್ಪಿ ಹಿಂದೂಗಳ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಶೀಘ್ರವೇ ಪ್ರಕರಣವನ್ನು ನ್ಯಾಯಾಧೀಶರಿಗೆ ಒಪ್ಪಿಸಬೇಕೆಂದರು.

ಬೆಂಗಳೂರು ಡಿಜೆ ಹಳ್ಳಿ, ಕೆಜೆ ಹಳ್ಳಿ, ಹುಬ್ಬಳ್ಳಿ, ಶಿವಮೊಗ್ಗ ದಲ್ಲಿ ಗಲಭೆ ಮಾಡಿದ ಮುಸ್ಲಿಮರ ಮೇಲೆ ದಾಖಲಾಗಿರುವ ಪ್ರಕರಣಗಳನ್ನು ಹಿಂಪಡೆಯಬಾರದು ಎಂದು ಮನವಿ ಮಾಡಿದರು.

ಶಿವಮೊಗ್ಗ ಗಲಭೆ ಪ್ರಕರಣದಲ್ಲಿ ಬಿಜೆಪಿ ಕಾರ್ಯಕರ್ತರ ಕೈವಾಡ ಇದೆ ಎಂದು ಹೇಳಿ ಅವಮಾನ ಮಾಡಿರುವ ಸಚಿವ ರಾಮಲಿಂಗರೆಡ್ಡಿ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು.

ಶಿವಮೊಗ್ಗ ಪ್ರಕರಣಕ್ಕೆ ಜಿಲ್ಲಾಡಳಿತದ ನಿರ್ಲಕ್ಷವೇ ಕಾರಣ. ಮುಂಜಾಗ್ರತ ಕ್ರಮವಾಗಿ ಮೆರವಣಿಗೆ ನಡೆಯುವ ಹಾದಿಯಲ್ಲಿ ಪೊಲೀಸ್ ಪಹರೆಯನ್ನು ಹೆಚ್ಚಿಸಬೇಕಾಗಿತ್ತು. ಮೆರವಣಿಗೆ ದಾರಿಯಲ್ಲಿ ಟಿಪ್ಪು ಮತ್ತು ಔರಂಗಜೇಬ್ ಭಾವಚಿತ್ರ ಹಾಕಿದ್ದೂ ಅಲ್ಲದೇ ಹಿಂದೂ ಸೈನಿಕರನ್ನು ಅವಮಾನಿಸುವ ಫ್ಲೆಕ್ಸ್ ಹಾಕಿದಾಗ ಕೂಡಲೇ ಜಿಲ್ಲಾಡಳಿತ ತೆರವುಗೊಳಿಸಬೇಕಿತ್ತು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಹೊನ್ನಾಳಿ ತಾಲ್ಲೂಕು ಅಧ್ಯಕ್ಷ ಜೆ.ಕೆ. ಸುರೇಶ್, ಎಸ್. ಎಸ್. ಬೀರಪ್ಪ, ಪಾಲಾಕ್ಷಪ್ಪ, ತರಗನಹಳ್ಳಿ ರಮೇಶ್, ರಾಜು ಪಲ್ಲವಿ, ಬಸವನಹಳ್ಳಿ ರಮೇಶ್, ಪುರಸಭೆ ಮಾಜಿ ಅಧ್ಯಕ್ಷ ರಂಗಪ್ಪ, ಜಿ.ಪಂ. ಮಾಜಿ ಉಪಾಧ್ಯಕ್ಷ ಸುರೇಂದ್ರನಾಯ್ಕ, ಕುಂದೂರು ಅನಿಲ್ ಮತ್ತಿತರರಿದ್ದರು.

## ಶಿಕ್ಷಕರ ಪತ್ತಿನ ಸಹಕಾರ ಸಂಘಕ್ಕೆ ಡಿ.ಕೆ. ಕರಿಬಸಪ್ಪ ನಿರ್ದೇಶಕರಾಗಿ ಆಯ್ಕೆ



ಮಲೇಬೆನ್ನೂರು, ಅ. 6 - ಹರಿಹರ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಪತ್ತಿನ ಸಹಕಾರ ಸಂಘಕ್ಕೆ ಪಟ್ಟಣದ ಶ್ರೀ ಬೀರಲಿಂಗೇಶ್ವರ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಡಿ.ಕೆ. ಕರಿಬಸಪ್ಪ ಅವರು ಚುನಾವಣೆ ಮೂಲಕ ನೂತನ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

## ಹರಿಹರ : ಯೋಗ ನಿಸರ್ಗ ಚಿಕಿತ್ಸಾ ಶಿಬಿರ

ಹರಿಹರ, ಅ. 6- ನಗರದ ಧನ್ವಂತರಿ ಪತಂಜಲಿ ಯೋಗ ಕೇಂದ್ರ, ಯಶಸ್ವಿ ಕಿರಣ ಸೇವಾ ಸಂಸ್ಥೆ, ಬಸವ ಪತಂಜಲಿ ಯೋಗ ಸಮಿತಿ ಕಪತ್ತು ಗುಡ್ಡ ಗದಗ, ಶ್ರೀಮತಿ ಗಿರಿಯಮ್ಮ ಕಾಲೇಜು ಹಾಗೂ ಶ್ರೀ ಕಾಮಧೇನು ಕ್ರೀಡಾ ಮತ್ತು ಸಾಂಸ್ಕೃತಿಕ ಸಮುದಾಯ ಸೇವಾ ಸಂಘದ ವತಿಯಿಂದ ಇದೇ ದಿನಾಂಕ 10 ರಿಂದ 22 ರವರೆಗೆ ವೀರೇಶ್ ಗುರೂಜಿ ಇವರಿಂದ ಉಚಿತ ಯೋಗ ನಿಸರ್ಗ ಚಿಕಿತ್ಸಾ ಶಿಬಿರವನ್ನು ನಗರದ ಗಿರಿಯಮ್ಮ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಯೋಗ ಉಪನ್ಯಾಸಕ ಜಯರಾಂ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ನಿರಂಜನ್, ವಿಶ್ವನಾಥ್, ಕಾರ್ತಿಕ್ ಕುಮಾರ್, ಕರಿಬಸಪ್ಪ ಕಂಚಿಕೇರಿ, ಶಶಿನಾಯ್ಕ್, ಜ್ಯೋತಿ, ಮೀನಾಕ್ಷಿ, ವೀಣಾ ಇತರರು ಹಾಜರಿದ್ದರು.

# ಬಿಡಿಸಿಸಿ ಬ್ಯಾಂಕ್ ಚುನಾವಣೆ ಪರಮೇಶ್ವರನಾಯ್ಕ್ ಸ್ಪರ್ಧೆ

ಹೂವಿನಹಡಗಲಿ, ಅ. 6- ಬಳ್ಳಾರಿ-ವಿಜಯನಗರ ಜಿಲ್ಲೆಗಳ ಪ್ರತಿಷ್ಠಿತ ಹಣಕಾಸು ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಬಳ್ಳಾರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿರ್ದೇಶಕ ಮಂಡಳಿ ಚುನಾವಣೆಗೆ ಕಳೆದೆರಡು ತಿಂಗಳಿನಿಂದ ಇನ್ನಿಲ್ಲದ ಪೈಪೋಟಿ ಕಂಡು ಬರುತ್ತಿದೆ.

ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರು ಸ್ಪರ್ಧಾಕಾಂಕ್ಷಿಗಳಾಗಿದ್ದಾರೆ. ಇದೇ ದಿನಾಂಕ 15 ರಂದು ನಡೆಯುವ ಈ ಚುನಾವಣೆಗೆ ಎರಡೂ ಜಿಲ್ಲೆಗಳಲ್ಲಿ ಅಷ್ಟೊಂದು ಬಿರುಸು ಕಂಡು ಬರದಿದ್ದರೂ, ಹಡಗಲಿ ತಾಲ್ಲೂಕಿನಿಂದ ತೀವ್ರ ಸ್ಪರ್ಧೆ ಗೋಚರಿಸುತ್ತಿದೆ.

ಬ್ಯಾಂಕಿನ ನಿರ್ದೇಶಕ ಮಂಡಳಿ ಚುನಾವಣೆಯ ಮೇಲೆ ಕಣ್ಣಿಟ್ಟವರೆಲ್ಲರೂ ಮಾಜಿ ಉಪ ಮುಖ್ಯಮಂತ್ರಿ ದಿ. ಎಂ.ಪಿ. ಪ್ರಕಾಶ್ ಹಾಗೂ ಅವರ ಪುತ್ರ ದಿ.ಎಂ.ಪಿ. ರವೀಂದ್ರ ಅವರ ಬೆಂಬಲಿಗರೇ ಆಗಿದ್ದಾರೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಚುನಾಯಿತರಾಗಿರುವ 19 ಪ್ರತಿನಿಧಿಗಳೇ ಮತದಾರರು. ಅದೇ ರೀತಿ ಪತ್ತಿನ ಸಹಕಾರ ಸಂಘಗಳ ಪ್ರತಿನಿಧಿ ಮತದಾರರು ಮತ ಚಲಾಯಿಸಲಿದ್ದಾರೆ.



ಈಗಾಗಲೇ ನಿರ್ದೇಶಕ ಸ್ಥಾನ ಬಯಸಿ ಸಿ.ಮೋಹನ್ ರೆಡ್ಡಿ, ಐ. ಚಿದಾನಂದ್, ಪಿ.ಟಿ. ಪರಮೇಶ್ವರನಾಯ್ಕ, ವಿಜಯ್ ಕುಮಾರ್, ಜೆ. ಮಂಜುನಾಥ್ ನಾಮಪತ್ರಗಳನ್ನು ಸಲ್ಲಿಸಿದ್ದಾರೆ.

ಈ ಪೈಕಿ ಯಾರು ನಾಮಪತ್ರ ವಾಪಾಸ್ ಪಡೆಯುತ್ತಾರೆಂದು ಕಾದು ನೋಡಬೇಕಿದೆ. ಚುನಾವಣೆ ಪ್ರಕಟವಾಗಿ ದಾಗಿನಿಂದ ಐಗೋಳ್ ಚಿದಾನಂದ ಮತ್ತು ಪಿ.ಟಿ. ಪರಮೇಶ್ವರನಾಯ್ಕ ಅವರ ನಡುವೆ ಜಿದ್ದಾಜಿದ್ದಿನ ಸ್ಪರ್ಧೆ ಕಂಡು ಬರುತ್ತಿದೆ.

ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾದರೆ ಅಧ್ಯಕ್ಷರಾಗುತ್ತಾರೆ ಎಂಬ ಲೆಕ್ಕಾಚಾರದಲ್ಲಿ ಈ ಹಿಂದೆ ಹಡಗಲಿ ವಿಎಸ್‌ಎಸ್‌ಎನ್ ನಿಂದ ಪ್ರತಿನಿಧಿಯಾಗಿ ನಿರ್ದೇಶಕರಾಗಿದ್ದ ರವೀಂದ್ರ ಮೂರು ಬಾರಿ ಬಿಡಿಸಿಸಿ ಅಧ್ಯಕ್ಷರಾಗಿದ್ದರು. ಅವರು ಸಹಕಾರ ಮತ್ತು ರಾಜಕೀಯ ರಂಗದಲ್ಲಿದ್ದರು. ರಾಜಕೀಯವಾಗಿ ರವೀಂದ್ರ ಅವರ ಜೊತೆ ವಿರಸ ಹೊಂದಿದ್ದ ಪರಮೇಶ್ವರನಾಯ್ಕ ಅವರು ಇದೀಗ ತಮ್ಮದಾಗಿಸಿಕೊಳ್ಳುವ ನಿಟ್ಟಿನಲ್ಲಿ ಸಫಲರಾಗುವ ಸಾಧ್ಯತೆ ಇರುವುದರಿಂದ ಅವರ ಗೆಲುವು ಸುಲಭವಾಗಿದೆ.

ಹರಪನಹಳ್ಳಿ ಶಾಸಕರಾದ ಲತಾ ಮಲ್ಲಿಕಾರ್ಜುನ್ ಕೂಡ ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾಗುವ ವಿಶ್ವಾಸದಲ್ಲಿದ್ದಾರೆ. ಕಾರಣ ಅವರ ವಿರುದ್ಧ ಯಾರೂ ನಾಮ ಪತ್ರ ಸಲ್ಲಿಸಿಲ್ಲವಾದ್ದರಿಂದ ಹಾದಿ ಸುಗಮವಾಗಿದೆ. ಸಹೋದರ ಎಂ.ಪಿ. ರವೀಂದ್ರ ಅವರಂತೆ ತಾವು ಅಧ್ಯಕ್ಷರಾಗಬೇಕೆಂಬ ಬಯಕೆ ಹೊಂದಿದ್ದಾರೆ.

ಪರಮೇಶ್ವರ ನಾಯ್ಕ್ ಬೆಂಬಲಕ್ಕೆ ಕಾಂಗ್ರೆಸ್ ಪಕ್ಷವಿದ್ದರೆ. ವಿಜಯ್ ಕುಮಾರ್ ಬೆಂಬಲಕ್ಕೆ ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ ಸೇರಿದಂತೆ ಬಿಜೆಪಿ ಸಹಕರಿಸುತ್ತಿದೆ. ಚಿದಾನಂದ ಅವರ ವೈಯಕ್ತಿಕ ವರ್ಚಸ್ಸು ಎಷ್ಟರಮಟ್ಟಿಗೆ ಕೆಲಸ ಮಾಡುತ್ತದೆ ಎಂಬುದು ಗೊತ್ತಿಲ್ಲ. ಯಾಕೆಂದರೆ ಕಾಂಗ್ರೆಸ್ ಪಕ್ಷದ ಉಚ್ಛಾಟದ ಮುಖಂಡರಾಗಿದ್ದು, ಅಧಿಕೃತವಾಗಿ ಬಿಜೆಪಿ ಸೇರಿಲ್ಲ. ತ್ರಿಕೋನ ಸ್ಪರ್ಧೆ ಇದ್ದು, ಅಕ್ಟೋಬರ್ 16 ರಂದು ಫಲಿತಾಂಶ ಪ್ರಕಟವಾಗಲಿದೆ.


## ಕರಾಟೆ ಸ್ಪರ್ಧೆಗೆ ಅನಧಿಕೃತ ತೀರ್ಪುಗಾರರು ; ಪ್ರತಿಭಟನೆ

ರಾಣೇಬೆನ್ನೂರು

ರಾಣೇಬೆನ್ನೂರು, ಅ.6- ಕ್ರೀಡಾ ಇಲಾಖೆಯಿಂದ ಮಾನ್ಯತೆ ಪಡೆಯದ ತೀರ್ಪುಗಾರರನ್ನು ನೇಮಿಸಿಕೊಂಡು ಜಿಲ್ಲಾ ಮಟ್ಟದ ಶಾಲಾ-ಕಾಲೇಜು ಕರಾಟೆ ಸ್ಪರ್ಧೆಗಳನ್ನು ನಡೆಸುತ್ತಿದ್ದು, ಅದನ್ನು ಪ್ರತಿಭಟಿಸುತ್ತಿರುವುದಾಗಿ ಹಾವೇರಿ ಜಿಲ್ಲಾ ಕರಾಟೆ ಅಸೋಸಿಯೇಷನ್ ತಿಳಿಸಿದೆ. ತರಬೇತಿ ಹೊಂದಿ, ರಾಜ್ಯ ಕರಾಟೆ ಸಂಸ್ಥೆಯ ಮನ್ನಣೆ ಪಡೆದ ನಮ್ಮ ಸಂಸ್ಥೆಯ ತೀರ್ಪುಗಾರರನ್ನು ಕರೆಯದೇ, ಅನಧಿಕೃತ ತೀರ್ಪುಗಾರರನ್ನು ನೇಮಿಸಿಕೊಂಡಿರುವ ಕಾರಣ ನಮಗೆ ಅನ್ಯಾಯವಾಗುತ್ತಿರುವ ಬಗ್ಗೆ ಜಿಲ್ಲಾಧಿಕಾರಿಗಳೂ ಸೇರಿದಂತೆ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ, ಅದನ್ನು ನಿರ್ಲಕ್ಷಿಸಿ ಇಂದು ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಸಂಸ್ಥೆಯವರು ವಿವರಿಸಿದ್ದಾರೆ.

ಪ್ರವಾಸಿ ಮಂದಿರದಲ್ಲಿ ನಡೆಸಿದ ಗೋಷ್ಠಿಯಲ್ಲಿ ಡಿಳ್ಳೆಪ್ಪ ಅನಿಂಗೇರ, ಮನೀಷಾ ಕಬ್ಬೂರ, ಸಮೀರ ಬಳ್ಳಾರಿ, ನಾಗರಾಜ ಸುಣಗಾರ, ದಾವಲ್ ಮಲ್ಲಿಕ ಮತ್ತಿತರರಿದ್ದರು.


### ಆಕಳು ವ್ಯಾಪಾರಿ ಖಾಸಿಂ ಸಾಬ್ ನಿಧನ



ದಾವಣಗೆರೆ ಭಗತ್‌ಸಿಂಗ್ ನಗರದ 1ನೇ ಮೇನ್ 4ನೇ ಕ್ರಾಸ್ ವಾಸಿ ದಿ|| ಯಮನೂರ್‌ಸಾಬ್ ಇವರ ಪುತ್ರರಾದ, ಆಕಳು ವ್ಯಾಪಾರಿ **ಶ್ರೀ ಖಾಸಿಂ ಸಾಬ್** ಅವರು ದಿನಾಂಕ 6-10-2023ರ ಶುಕ್ರವಾರ ರಾತ್ರಿ 9.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 55 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 7-10-2023ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ಹಳೇ ಖಬರಸ್ಥಾನದಲ್ಲಿ ನೆರವೇರಿಸಲಾಗುವುದು.

**- ದುಃಖತಪ್ತ ಕುಟುಂಬ ವರ್ಗ**

**ಮೊ. : 97409 73795, 99161 79495**



### ಕೆ.ಜಿ. ಸುಂದರೇಶ್ ನಿಧನ



ದಾವಣಗೆರೆ, ಎಸ್.ಎಸ್. ಬಡಾವಣೆ, 'ಬಿ' ಬ್ಲಾಕ್, 4ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ (ಇಂಡೋರ್ ಸ್ಟೇಡಿಯಂ ಹತ್ತಿರ) ಡೋರ್ ನಂ. #4633, ಶ್ರೀ ಗುರು ಕೃಪ ನಿವಾಸಿ

**ಕಾರಿಗನೂರು**

**ಕೆ.ಜಿ. ಗುರುಮೂರ್ತಿ ಇವರ ಪುತ್ರ**

**ಕೆ.ಜಿ. ಸುಂದರೇಶ್**

ಇವರು ದಿನಾಂಕ 06.10.2023 ಬೆಳಿಗ್ಗೆ 11.15 ಕ್ಕೆ ಹೃದಯಾಘಾತದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 43 ವರ್ಷ ವಯಸ್ಸಾಗಿತ್ತು. ತಂದೆ, ತಾಯಿ, ಪತ್ನಿ, ಓರ್ವ ಪುತ್ರಿ, ಸಹೋದರ, ಸಹೋದರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ **ಮೃತರ ಪಾರ್ಥಿವ ಶರೀರವನ್ನು ದಿನಾಂಕ 08.10.2023ರ ಭಾನುವಾರ ಬೆಳಿಗ್ಗೆ 8 ಗಂಟೆಯಿಂದ 12 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಇಡಲಾಗುವುದು.** ನಂತರ ನಗರದ ಗಾಜಿನ ಮನೆ ಹತ್ತಿರ ಇರುವ ಶಾಮನೂರು ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತರು : **ಕೆ.ಜಿ. ಗುರುಮೂರ್ತಿ ಮತ್ತು ಕುಟುಂಬದವರು.**

**ಮೊ : 99005 15521**


## ರಾಣೇಬೆನ್ನೂರಿನಲ್ಲಿ ಇಂದು ಗಾನಸಂಗಮ

ಬಳ್ಳಾರಿ ಕಲ್ಯಾಣ ಮಂಟಪದಲ್ಲಿ ಇಂದು ಸಂಜೆ 7ಕ್ಕೆ ಮಂಡ್ಯದ ಕಲಾಶ್ರೀ ಟ್ರಸ್ಟ್ ವತಿಯಿಂದ ಸಮಸ್ತ ಕಲಾಪ್ರೇಮಿಗಳ ಆಶ್ರಯದಲ್ಲಿ ಹಿರಿಯ ರಂಗಕಲಾವಿದ ವಿಕಲಚೇತನ ಜಿ.ಕೆ.ಶಂಕರ ಇವರ ವೈದ್ಯಕೀಯ ಚಿಕಿತ್ಸಾ ನೆರವಿಗಾಗಿ ಗಾನ ಸಂಗಮ ಕಾರ್ಯಕ್ರಮ ನಡೆಯಲಿದೆ.

ಕಲಾವಿದರಾದ ಸುಬ್ರಮಣಿ, ನಾಗಮಂಗಲ ಶ್ರೀನಿವಾಸ, ಗೌರ ನಾಗರಾಜ, ಮಿಲ್ಕಿ ಮಂಜು, ಶಂಕರ ಆರ್, ಪ್ರಸನ್ನ ಎನ್., ಪ್ರೇಮಕುಮಾರಿ, ಚಂದನ ಎಸ್, ಮೇಘನ ಎಸ್, ಸಿಂಚನ ಎಸ್ ಅವರಿಂದ ಮಧುರ ಗೀತೆಗಳ ಗಾಯನ ನಡೆಯಲಿದೆ.

## ಜಮೀನಿನಲ್ಲಿ ಯುವಕನ ಸಾವು



ಮಲೇಬೆನ್ನೂರು, ಅ.6- ತಮ್ಮ ಜಮೀನಿನಲ್ಲಿ ಭತ್ತದ ಬೆಳೆಗೆ ಗೊಬ್ಬರ ಹಾಕುತ್ತಿದ್ದ ಯುವಕನೋರ್ವ ಇದ್ದಕ್ಕಿದ್ದಂತೆ ಕುಸಿದು ಬಿದ್ದು ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಶುಕ್ರವಾರ ಬೆಳಿಗ್ಗೆ ಹರಳಹಳ್ಳಿ ಗ್ರಾಮದಲ್ಲಿ ನಡೆದಿದೆ. ರೇವಣಸಿದ್ದಪ್ಪ (32), ಗ್ರಾಮದ ದೇವಜ್ಜಿ ಷಡಕಪ್ಪನವರ ಮಗ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಸಾರ್ವಭೌಮತ್ವಕ್ಕೆ ಧಕ್ಕೆ ತರಲು ಚೀನಾದಿಂದ ದೊಡ್ಡ ಪ್ರಮಾಣದ ಹಣ**

ನವದೆಹಲಿ : ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತರಲು ಹಾಗೂ ದೇಶದಲ್ಲಿ ಅಶಾಂತಿ ಹರಡಲು ಚೀನಾದಿಂದ ದೊಡ್ಡ ಪ್ರಮಾಣದ ಹಣಬರುತ್ತಿದೆ ಎಂದು ದೆಹಲಿ ಪೊಲೀಸರು ಆರೋಪಿಸಿದ್ದಾರೆ. ನ್ಯೂಸ್‌ಕ್ಲಿಕ್ ಪೋರ್ಟಲ್ ವಿರುದ್ಧ ಯು.ಎ.ಪಿ.ಎ. ಕಾಯ್ದೆಯಡಿ ದಾಖಲಿಸಲಾದ ಎಫ್.ಐ.ಆರ್.ನಲ್ಲಿ ಈ ಮಾಹಿತಿ ನೀಡಲಾಗಿದೆ.

**ಸಿಕ್ಕಿಂ : ಪ್ರವಾಹದಲ್ಲಿ ಸಾವಿನ ಸಂಖ್ಯೆ 25ಕ್ಕೆ ಏರಿಕೆ**

ಗ್ಯಾಂಗ್‌ಟೋಕ್ : ಸಿಕ್ಕಿಂ ಟೀಸ್ಟಾ ನದಿಯಲ್ಲಿ ಕ್ಷಿಪ್ರ ಪ್ರವಾಹ ಉಂಟಾಗಿ ಮೃತಪಟ್ಟವರ ಸಂಖ್ಯೆ 25ಕ್ಕೆ ತಲುಪಿದೆ. ಇನ್ನೂ 143 ಜನ ಕಣ್ಮರೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಎರಡು ವರ್ಷಗಳಲ್ಲಿ ಎಡಪಂಥೀಯ ತೀವ್ರವಾದ ನಿವಾರಣೆ : ಅಮಿತ್ ಷಾ**

ನವದೆಹಲಿ : ಎಡಪಂಥೀಯ ತೀವ್ರವಾದವನ್ನು ಎರಡು ವರ್ಷಗಳಲ್ಲಿ ದೇಶದಿಂದ ಸಂಪೂರ್ಣ ನಿವಾರಣೆ ಮಾಡಲಾಗುವುದು. ನಕ್ಸಲ್ ಹಾವಳಿಯಿಂದ ಮುಕ್ತವಾದ ಪ್ರದೇಶಗಳಲ್ಲಿ ಮತ್ತೆ ಸಮಸ್ಯೆ ಭುಗಿಲೇಳದಂತೆ ಎಚ್ಚರಿಕೆ ವಹಿಸಬೇಕಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿದ್ದಾರೆ.

**ಮಧ್ಯಪ್ರದೇಶದ ಮತದಾರರ ಪಟ್ಟಿ ಬಗ್ಗೆ ಕಾಂಗ್ರೆಸ್ ದೂರು**

ನವದೆಹಲಿ : ಚುನಾವಣೆ ನಡೆಯಲಿರುವ ಮಧ್ಯ ಪ್ರದೇಶದಲ್ಲಿನ ಮತದಾರರ ಪಟ್ಟಿಯಲ್ಲಿ ಹೆಸರುಗಳು ಎರಡು ಕಡೆ ನಮೂದಾಗಿವೆ ಎಂದು ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ದೂರು ನೀಡಿದೆ. ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಈ ರೀತಿಯ 11 ಲಕ್ಷ ಹೆಸರುಗಳನ್ನು ಈಗಾಗಲೇ ತೆಗೆದು ಹಾಕಿರುವುದಾಗಿ ಆಯೋಗ ಹೇಳಿದೆ.

**ರಾಜಧಾನಿಯಲ್ಲಿ ಕುಸಿದ ವಾಯು ಗುಣಮಟ್ಟ**

ನವದೆಹಲಿ : ರಾಜಧಾನಿಯಲ್ಲಿ ವಾಯು ಗುಣಮಟ್ಟ ಕುಸಿದಿದೆ. ಇದರಿಂದಾಗಿ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳು ಕಲ್ಲಿದ್ದಲು ಬಳಸದಂತೆ ನಿಷೇಧಿಸಲಾಗಿದೆ. ಮಾಲಿನ್ಯಕಾರಕ ಕೈಗಾರಿಕೆಗಳು ಹಾಗೂ ಶಾಖೋತ್ಪನ್ನ ವಿದ್ಯುತ್ ಘಟಕಗಳ ವಿರುದ್ಧವೂ ಕ್ರಮ ತೆಗೆದುಕೊಳ್ಳಲಾಗುವುದು.

**ಹಂಗಾಮಿ ಕುಲಪತಿಗಳ ಭತ್ಯೆ ತಡೆದ ಸುಪ್ರೀಂ ಕೋರ್ಟ್**

ನವದೆಹಲಿ : ಪಶ್ಚಿಮ ಬಂಗಾಳದ ಸರ್ಕಾರಿ ವಿಶ್ವವಿದ್ಯಾನಿಲಯಗಳಿಗೆ ನೂತನವಾಗಿ ನೇಮಕಗೊಂಡ ಹಂಗಾಮಿ ಕುಲಪತಿಗಳ ಭತ್ಯೆಯನ್ನು ಸುಪ್ರೀಂ ಕೋರ್ಟ್ ತಡೆಹಿಡಿದಿದೆ. ಕುಲಪತಿಗಳ ನೇಮಕದಲ್ಲಿ ಉಂಟಾಗಿರುವ ಬಿಕ್ಕಟ್ಟನ್ನು ರಾಜ್ಯಪಾಲ ಸಿ.ವಿ. ಆನಂದ ಬೋಸ್ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ 'ಚಹಾ ವೇಳೆ' ಕುಳಿತು ಬಗೆಹರಿಸಿಕೊಳ್ಳಬೇಕು ಎಂದೂ ನ್ಯಾಯಾಲಯ ತಿಳಿಸಿದೆ.

**ಅರ್ಧ ಗಂಟೆ ಅಕ್ರಮ ಬಂಧನಕ್ಕಾಗಿ 50 ಸಾವಿರ ರೂ. ಪರಿಹಾರ**

ನವದೆಹಲಿ : ವ್ಯಕ್ತಿಯೋರ್ವನನ್ನು ಅರ್ಧ ಗಂಟೆಗೂ ಹೆಚ್ಚು ಕಾಲ ಅಕ್ರಮವಾಗಿ ನಗರ ಠಾಣೆಯ ಲಾಕಪ್‌ನಲ್ಲಿ ಇರಿಸಿದ್ದಕ್ಕಾಗಿ 50 ಸಾವಿರ ರೂ. ದಂಡ ಪಾವತಿಸುವಂತೆ ದೆಹಲಿ ಹೈಕೋರ್ಟ್ ಆದೇಶಿಸಿದೆ. ಅಧಿಕಾರಿಗಳು ನಾಗರಿಕರನ್ನು ನಡೆಸಿಕೊಳ್ಳುತ್ತಿರುವ ರೀತಿಯ ಬಗ್ಗೆಯೂ ನ್ಯಾಯಾಲಯ ಅಸಮಾಧಾನ ವ್ಯಕ್ತಪಡಿಸಿದೆ.

**ಭಾರತದಲ್ಲಿ ರಾಯಭಾರಿಗಳನ್ನು ಕಡಿಮೆ ಮಾಡಿದ ಕೆನಡಾ**

ಟೊರಾಂಟೋ : ಭಾರತದಲ್ಲಿ ನವದೆಹಲಿಯ ಹೊರಗೆ ಕಾರ್ಯನಿರ್ವಹಿಸುತ್ತಿರುವ ತನ್ನ ಬಹುತೇಕ ರಾಯಭಾರಿಗಳನ್ನು ಕೆನಡಾ ವಾಪಸ್ ಕರೆಸಿಕೊಂಡಿದೆ. ಇವರನ್ನು ಕೌಲಾಲಂಪುರ ಹಾಗೂ ಸಿಂಗಪುರಗಳಿಗೆ ರವಾನಿಸಲಾಗಿದೆ. ಅಕ್ಟೋಬರ್ 10ರ ಒಳಗೆ ರಾಯಭಾರಿಗಳ ಸಂಖ್ಯೆ ಕಡಿಮೆ ಮಾಡುವಂತೆ ಕೇಂದ್ರ ಸರ್ಕಾರ ತಿಳಿಸಿತ್ತು.

**ಹಣಕಾಸು ಮಸೂದೆಗಳ ಬಗ್ಗೆ ನಿರ್ಧರಿಸಲು ಸುಪ್ರೀಂ ಕೋರ್ಟ್‌ನಲ್ಲಿ 7 ಸದಸ್ಯರ ಪೀಠ**

ನವದೆಹಲಿ : ಆಧಾರ್ ರೀತಿಯ ಕಾಯ್ದೆಗಳನ್ನು ಹಣಕಾಸು ಮಸೂದೆಗಳಾಗಿ ಪರಿಗಣಿಸಬಹುದೇ ಎಂಬ ಬಗ್ಗೆ ಪರಿಶೀಲಿಸಲು ಏಳು ಸದಸ್ಯರ ಪೀಠ ರಚಿಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ. ಆಧಾರ್ ಅಷ್ಟೇ ಅಲ್ಲದೇ ಅಕ್ರಮ ಹಣ ತಡೆ ಕಾಯ್ದೆಯನ್ನು ಹಣಕಾಸು ಮಸೂದೆಯಾಗಿ ಅಂಗೀಕಾರ ಪಡೆಯಲಾಗಿದೆ. ಹಣಕಾಸು ಮಸೂದೆಗಳಿಗೆ ರಾಜ್ಯಸಭೆಯ ಒಪ್ಪಿಗೆಯ ಅಗತ್ಯವಿರುವುದಿಲ್ಲ.

## ಕಾಂಗ್ರೆಸ್ ಸೂಜಿ ಕೆಲಸ ಮಾಡುತ್ತಿದೆ : ಡಿಕೆಶಿ

ಬೆಂಗಳೂರು, ಅ.6 - ಕಬ್ಬಿಣದಿಂದ ಸೂಜಿ ಮತ್ತು ಕತ್ತರಿ ತಯಾರಿಸಬಹುದು. ಕಾಂಗ್ರೆಸ್ ಸೂಜಿಯಿಂದ ಹೊಲಿಯುವ ಕೆಲಸ ಮಾಡುತ್ತಿದ್ದರೆ, ಬಿಜೆಪಿಯವರು ಕತ್ತರಿಯಿಂದ ಕತ್ತರಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಛೇಡಿಸಿದರು. ಶಿವಮೊಗ್ಗದಲ್ಲಿ ಹಿಂದೂಗಳನ್ನು ಗುರಿಯಾಗಿಸಿಕೊಂಡು ದಾಳಿ ಮಾಡಿ ಭಯದ ವಾತಾವರಣ ಉಂಟು ಮಾಡಲಾಗಿದೆ ಎನ್ನುವ ಬಿಜೆಪಿ ಆರೋಪಕ್ಕೆ ಉತ್ತರಿಸಿದ ಅವರು, ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಹಿಂದೂ ಮತ್ತು ಮುಸ್ಲಿಂ ಇಬ್ಬರನ್ನೂ ಭೇಟಿ ಮಾಡಿ ಮಾತನಾಡಿದ್ದಾರೆ. ಅವರ ಸಮಸ್ಯೆ ಆಲಿಸಿದ್ದಾರೆ. ಯಾರು ತಪ್ಪು ಕೆಲಸ ಮಾಡಿದ್ದಾರೋ, ಅದನ್ನು ಖಂಡಿಸಿದ್ದಾರೆ ಎಂದರು.

ಇಲ್ಲಿ ಯಾರನ್ನೂ ರಕ್ಷಣೆ ಮಾಡುವ ಪ್ರಮೇಯ ಬರುವುದೇ ಇಲ್ಲ. ಯಾರೂ ಕಾನೂನು ಮೀರಿ ತಪ್ಪು ಮಾಡಿದ್ದಾರೋ ಅವರಿಗೆ ಶಿಕ್ಷೆ ನೀಡುವ ಕೆಲಸ ಮಾಡುತ್ತೇವೆ. ಆದರೆ ಬಿಜೆಪಿಯವರು ಪಟ್ಟಿ ಇಟ್ಟುಕೊಂಡು ಕೆಲವರ ಮನೆಗೆ ಹೋಗಿದ್ದಾರೆ ಎಂದು ಆಕ್ಷೇಪಿಸಿದರು. ನಾವು ನಿಜವಾದ ಹಿಂದೂಗಳು, ಬಿಜೆಪಿಯವರು ನಕಲಿ ಹಿಂದೂಗಳು ಎನ್ನುವ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಮಾತಿಗೆ ಇದೇ ವೇಳೆ ಸಹಮತ ವ್ಯಕ್ತಪಡಿಸಿದರು.

# ಪರಿಶಿಷ್ಟರ ಸರ್ವತೋಮುಖ ಏಳಿಗೆಗೆ ಶ್ರಮಿಸಲು ಕರೆ



ದಾವಣಗೆರೆ, ಅ.6- ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಸರ್ವ ತೋಮುಖ ಏಳಿಗೆಗೆ ಶ್ರಮಿಸಿ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಅಧಿಕಾರಿಗಳಿಗೆ ಸೂಚಿಸಿದರು.

ಶುಕ್ರವಾರ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಪ್ರಸಕ್ತ ಸಾಲಿನ ಮೂರನೇ ತ್ರೈಮಾಸಿಕ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಮೇಲಾಗುತ್ತಿರುವಂತಹ ದೌರ್ಜನ್ಯಗಳನ್ನು ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿ, ಅಂತವರಿಗೆ ನ್ಯಾಯಯುತವಾದ ಪರಿಹಾರ ಒದಗಿಸಬೇಕು. ದೌರ್ಜನ್ಯಕ್ಕೆ ಒಳಗಾಗಿ ಪ್ರಾಣ ಕಳೆದುಕೊಂಡ 7 ಪ್ರಕರಣಗಳಲ್ಲಿ, 5 ಪ್ರಕರಣಗಳ ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ಕೆಲಸ ಹಾಗೂ ಪಿಂಚಣಿ ಸೌಲಭ್ಯ ಕಲ್ಪಿಸಲಾಗಿದೆ.

ಹಳ್ಳಿಗಳಲ್ಲಿ ಕಾನೂನು ಬಾಹಿರವಾಗಿ ಮದ್ಯ ಮಾರಾಟ ಮಾಡುತ್ತಿದ್ದು, ಅಂತವರಿಗೆ ದಂಡ ವಿಧಿಸುವ ಮೂಲಕ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಜನರಿಗೆ ಮದ್ಯಪಾನದ ದುಷ್ಪರಿಣಾಮದ ಕುರಿತು ಜಾಗೃತಿ ಮೂಡಿಸಬೇಕು ಎಂದರು.

ಜಿಲ್ಲೆಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪ್ರವೇಶ ಪಡೆಯಲು ಹೆಚ್ಚು ಬೇಡಿಕೆಯಿದ್ದು, ವಸತಿಯುತ ಶಾಲೆಗಳ ಸ್ಥಾಪನೆಗೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಮಹಾನಗರ ಪಾಲಿಕೆಯಿಂದ ನೀಡಲಾಗುವ ವಿದ್ಯಾರ್ಥಿ ವೇತನದಲ್ಲಿ ಸರ್ಕಾರಿ ಶಾಲಾ, ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಮೊದಲ ಆದ್ಯತೆ ನೀಡಬೇಕು.

ಅಲ್ಲದೆ ಸರ್ಕಾರಿ ಶಾಲೆ ಹಾಗೂ ಕಾಲೇಜುಗಳ ಆವರಣದಲ್ಲಿ ಮದ್ಯಪಾನ, ಧೂಮಪಾನ ಹಾಗೂ ಯಾವುದೇ ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸುತ್ತಿದ್ದರೆ, ಅಂತವರ ವಿರುದ್ಧ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ನಗರದ ಹೊರವಲಯದಲ್ಲಿರುವ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಸರ್ಕಾರಿ ಬಾಲಕಿಯರ ಹಾಸ್ಟೆಲ್‌ಗಳಿರು ವುದರಿಂದ ವಿದ್ಯಾರ್ಥಿಗಳ ಭದ್ರತೆಗಾಗಿ ಪೊಲೀಸ್ ಬೀಟ್, ಸಿ.ಸಿ. ಕ್ಯಾಮೆರಾ ಹಾಗೂ ವಿದ್ಯಾರ್ಥಿಗಳ ಕಾಲೇಜು ಸಮಯಕ್ಕೆ ಸರಿಯಾಗಿ ಬಸ್ ವ್ಯವಸ್ಥೆ ಕಲ್ಪಿಸಲು ತಿಳಿಸಿದರು.

ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳು, ಗರ್ಭಿಣಿಯರು ಹಾಗೂ ತಾಯಂದಿರಿಗೆ ಯಾವುದೇ ಕಾರಣಕ್ಕೂ ಕಳಪೆ ಆಹಾರವನ್ನು ನೀಡದೇ ಉತ್ತಮ ಗುಣಮಟ್ಟದ ಆಹಾರ ಪದಾರ್ಥಗಳನ್ನು ವಿತರಿಸಬೇಕು ಹಾಗೂ ಪೌಷ್ಟಿಕತೆ ಹೆಚ್ಚಿಸುವ ನಿಟ್ಟಿನಲ್ಲಿ ಸಕ್ಕರೆ ಬದಲಾಗಿ ಬೆಲ್ಲವನ್ನು ನೀಡಬೇಕು ಎಂದರು.

ನಗರದಲ್ಲಿ ಜಿಲ್ಲಾ ಮಟ್ಟದ ಡಾ.ಬಿ.ಆರ್ ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಅನುದಾನವಿದ್ದು, ಸೂಕ್ತ ಜಾಗವನ್ನು ಗುರುತಿಸಿ, ಭವನ ನಿರ್ಮಾಣಕ್ಕೆ ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಬಿ ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಜಿಲ್ಲಾ ಪಂಚಾಯತ್ ಯೋಜನಾಧಿಕಾರಿ ಮಲ್ಲಾನಾಯ್ಕ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್ ಅರುಣ್‌ಕುಮಾರ್, ಉಪವಿಭಾಗಾಧಿಕಾರಿ ದುರ್ಗಾಶ್ರೀ, ಹೊನ್ನಾಳಿ ಉಪವಿಭಾಗಾಧಿಕಾರಿ ಹುಲ್ಮನಿ ತಿಮ್ಮಣ್ಣ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಕೆ. ನಾಗರಾಜ್ ಉಪಸ್ಥಿತರಿದ್ದರು.

## ಶಿವಮೊಗ್ಗದಲ್ಲಿ ದೌರ್ಜನ್ಯಕ್ಕೆ ಒಳಗಾದವರ ಮೇಲೆ ಪ್ರಕರಣ



ದಾವಣಗೆರೆ, ಅ. 6 - ಶಿವಮೊಗ್ಗದ ರಾಗಿಗುಡ್ಡ ಘಟನೆಗೆ ಸಂಬಂಧಿಸಿದಂತೆ ಮತಾಂಧರಂತೆ ವರ್ತನೆ ಮಾಡುವವರ ಮೇಲೆ ಕ್ರಮ ಕೈಗೊಳ್ಳಬೇಕಿತ್ತು. ಆದರೆ, ರಾಜ್ಯ ಸರ್ಕಾರ ದೌರ್ಜನ್ಯಕ್ಕೊಳಗಾದವರ ಮೇಲೆ ಪ್ರಕರಣ ದಾಖಲಿಸಿದೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಆರೋಪಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಗಿಗುಡ್ಡ ಘಟನೆಯಲ್ಲಿ ಸರ್ಕಾರ ಮಾರ್ಜಾಲ ನ್ಯಾಯ ರೀತಿ ವರ್ತನೆ ಮಾಡುತ್ತಿದೆ. ಬೆಕ್ಕಿಗೆ ಪಂಚಾಯತಿ ಒಪ್ಪಿಸಿದರೆ ಏನು ಮಾಡಿತ್ತೊ ಅದೇ ರೀತಿ ಮಾಡುತ್ತಿದೆ ಎಂದು ಹೇಳಿದರು. ಇಬ್ಬರ ಮೇಲು ಕೇಸ್ ಹಾಕಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. ಇದರಿಂದ ಮತಾಂಧತೆಗೆ ಕಾಂಗ್ರೆಸ್ ಕುಮ್ಮಕ್ಕು ನೀಡಿದಂತಾಗಿದೆ. ಔರಂಗಜೇಬ್ ಮತ್ತು ಟಿಪ್ಪು ಸುಲ್ತಾನ್ ಪೋಟೋ ಹಾಕಿ ವೈಭವೀಕರಣ ಮಾಡಿರುವುದೇ ಗಲಭೆಗೆ ಕಾರಣ ಎಂದರು.

ಬಿಜೆಪಿ ನಕಲಿ ಹಿಂದೂಗಳು ಎಂಬ ಕಾಂಗ್ರೆಸ್ ನಾಯಕರ ಹೇಳಿಕೆಗಳಿಗೆ ತಿರುಗೇಟು ನೀಡಿದ ಅವರು, ಹೌದು, ನಾವು ನಕಲಿ ಹಿಂದೂಗಳು ಅದಕ್ಕೆ ತಿಲಕ ಇಟ್ಟುಕೊಳ್ಳುತ್ತೇವೆ. ಕೇಸರಿ ಪೇಟ ತೊಟ್ಟುಕೊಳ್ಳುತ್ತೇವೆ ಎಂದರು.

ಅಸಲಿ ಹಿಂದೂಗಳು ತಿಲಕ ಮತ್ತು ಪೇಟ ಧರಿಸಲು ಹಿಂಜರಿಯುತ್ತಾರೆ. ಟೋಪಿಯಾದರೆ ಇಷ್ಟಪಟ್ಟು ಹಾಕಿಕೊಳ್ಳುತ್ತಾರೆ. ಕೇಸರಿ ಅಂದರೆ ಇವರಿಗೆ ಆಗಲ್ಲ ಎಂದು ತರಾಟೆಗೆ ತೆಗೆದುಕೊಂಡರು.

**ಸಚಿವರ ಹೇಳಿಕೆಗಳಿಗೆ ಆಕ್ಷೇಪ :** ಶಿವಮೊಗ್ಗ ಘಟನೆಗೆ ಸಂಬಂಧಿಸಿದಂತೆ ರಾಜ್ಯ ಕಾಂಗ್ರೆಸ್ ಸರ್ಕಾರದ ಸಚಿವರು ನೀಡಿರುವ ಹೇಳಿಕೆಗಳಿಗೆ ಸಂಸದ ಜಿ.ಎಂ. ಸಿದ್ದೇಶ್ವರ ಆಕ್ಷೇಪಿಸಿದ್ದಾರೆ.

ಸಚಿವರಾದ ಚಲುವರಾಯಸ್ವಾಮಿ, ದಿನೇಶ್ ಗುಂಡೂರಾವ್ ಹಾಗೂ ರಾಮಲಿಂಗಾ ರೆಡ್ಡಿ ಅವರು ಸತ್ಯಾಸತ್ಯತೆ ತಿಳಿದು ಮಾತನಾಡಬೇಕು. ಭಾರತ ದೇಶದ ಬಾವುಟವನ್ನೇ ತಿರುಚಿ ಹಸಿರುಮಯ ಮಾಡಿದ್ದಾರೆ. ಖಡ್ಗವನ್ನು ಪ್ರದರ್ಶನ ಮಾಡಿದ್ದಾರೆ. ಇದನ್ನು ಸಚಿವರು ಅರ್ಥ ಮಾಡಿಕೊಳ್ಳಬೇಕು ಎಂದರು.

ಈ ಬಗ್ಗೆ ಸರಿಯಾದ ನ್ಯಾಯಾಂಗ ತನಿಖೆ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಸಿದ್ದೇಶ್ವರ ಒತ್ತಾಯಿಸಿದರು.

## ಅಣಬೂರು ಶ್ರೀ ಮಾರುತಿ ಗ್ರಾಮಾಂತರ ಪ್ರೌಢಶಾಲೆ ವಾಲಿಬಾಲ್‌ನಲ್ಲಿ ಪ್ರಥಮ



ಜಗಳೂರು, ಅ. 6- ತಾಲ್ಲೂಕಿನ ಅಣಬೂರು ಗ್ರಾಮದ ಶ್ರೀ ಮಾರುತಿ ಗ್ರಾಮಾಂತರ ಪ್ರೌಢಶಾಲೆಯ ವಿದ್ಯಾರ್ಥಿಗಳು ವಲಯ, ತಾಲ್ಲೂಕು ಮಟ್ಟದ ವಾಲಿಬಾಲ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.

ಗ್ರಾಮೀಣ ಪ್ರದೇಶದ ಶಾಲೆಯ ವಿದ್ಯಾರ್ಥಿಗಳನ್ನು ವಿಕಾಸ್ ನಗರ ಗ್ರಾಮೀಣಾಭಿವೃದ್ಧಿ ಸ್ವಯಂ ಸೇವಾ ಸಂಸ್ಥೆ ಗುರುತಿಸಿ ವಿಜೇತ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಪ್ರೋತ್ಸಾಹಿಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಕೆ. ಮಹಾಲಕ್ಷ್ಮಿ ಮಾತನಾಡಿದರು. ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳಾದ ರೇಖಾ, ಸಿದ್ದಲಿಂಗಪ್ಪ, ಗುರುರಾಜ್, ಶಾಲೆಯ ಮುಖ್ಯ ಶಿಕ್ಷಕರಾದ ಕುಮಾರ ನಾಯ್ಕ ಮತ್ತು ಸಿಬ್ಬಂದಿ ವರ್ಗದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಹೊಸ ಬಾರ್‌ಗಳಿಗೆ ಅವಕಾಶ ಇಲ್ಲ

**(1ನೇ ಪುಟದಿಂದ)** ಸುಮಾರು 30 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿನ ಬೆಳೆಹಾನಿ ಸಂಭವಿಸಿದೆ. 42 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸುಮಾರು ಶೇ. 52 ರಷ್ಟು ಬೆಳೆ ಹಾನಿಯಾಗಿದೆ. ಕೃಷ್ಣಾ ಮೇಲ್ದಂಡೆ ಹಾಗೂ ನಾರಾಯಣಪುರ ಜಲಾಶಯಗಳನ್ನು ಹೊರತುಪಡಿಸಿ, ಕಾವೇರಿ ಸೇರಿದಂತೆ ಇನ್ನುಳಿದ ಜಲಾನಯನ ಪ್ರದೇಶಗಳಲ್ಲಿ ನೀರಿಲ್ಲ.

ಈ ಬಾರಿ ಹಸಿರು ಬರ ಉಂಟಾಗಿದೆ. ಕೇಂದ್ರದ ಅಧ್ಯಯನ ತಂಡ ಮೂರು ತಂಡಗಳಲ್ಲಿ ರಾಜ್ಯದ 11 ಜಿಲ್ಲೆಗಳಿಗೆ ಭೇಟಿ ನೀಡುತ್ತಿದೆ. ಅವರು ಕೇಂದ್ರಕ್ಕೆ ವರದಿ ಸಲ್ಲಿಸಿದ ನಂತರ, ವರದಿ ಆಧರಿಸಿದಂತೆ ಕೇಂದ್ರ ಪರಿಹಾರ ನೀಡಲಿದೆ ಎಂದು ತಿಳಿಸಿದರು.

## ಬಿಜೆಪಿ - ಜೆಡಿಎಸ್ ಶಾಸಕರು ಕಾಂಗ್ರೆಸ್ ಬಾಗಿಲು ತಟ್ಟುತ್ತಿದ್ದಾರೆ : ಸಿದ್ದರಾಮಯ್ಯ

ಬೆಂಗಳೂರು, ಅ.6 - ಜೆಡಿಎಸ್ ಎನ್‌ಡಿಎ ಕೂಟ ಸೇರಿರುವುದನ್ನು ವಿರೋಧಿಸಿ, ಬಿಜೆಪಿ ಹಾಗೂ ಜೆಡಿಎಸ್‌ನ ಕೆಲವು ಶಾಸಕರು ನಮ್ಮ ಪಕ್ಷದ ಬಾಗಿಲು ತಟ್ಟಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಬಿಜೆಪಿ- ಜೆಡಿಎಸ್‌ನದ್ದು ಅಪವಿತ್ರ ಮೈತ್ರಿ. ಜನತಾ ದಳ (ಜಾತ್ಯತೀತ) ಕೋಮುವಾದಿ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುತ್ತಿದೆ. ಇದಕ್ಕೆ ಅವರಲ್ಲಿಯೇ ವಿರೋಧ ವ್ಯಕ್ತಗೊಂಡಿದೆ ಎಂದವರು ಹೇಳಿದರು. ಪಕ್ಷದ ಬಾಗಿಲು ತಟ್ಟಿರುವ ಶಾಸಕರಿಗೆ ಅವಕಾಶ ಮಾಡಿಕೊಡಬೇಕೇ ಅಥವಾ ಬೇಡವೇ ಎಂಬ ಬಗ್ಗೆ ವರಿಷ್ಠರು ತೀರ್ಮಾನ ಕೈಗೊಳ್ಳುತ್ತಾರೆ ಎಂದರು. ಗ್ಯಾರಂಟಿಗಳಿಗಾಗಿ ರಾಜ್ಯದ ಅಭಿವೃದ್ಧಿಗೆ ಸರ್ಕಾರ ಬ್ರೇಕ್ ಹಾಕಿದೆ ಎಂದು ಬಿಜೆಪಿ ಮಾಡಿರುವ ಆರೋಪಕ್ಕೆ ಪ್ರತಿಕ್ರಿಯೆ ನೀಡಿ, ರಾಜ್ಯದ ಆರ್ಥಿಕ ಪರಿಸ್ಥಿತಿ ಹಾಳು ಮಾಡಿದವರೇ ಬಿಜೆಪಿಯವರು ಎಂದು ಟೀಕಿಸಿದರು. ಅವರಿಗೆ ಯಾವ ನೈತಿಕತೆ ಇದೆ. ನಮ್ಮ ಕಾಲದಲ್ಲಿ ಯಾವತ್ತೂ ಇಷ್ಟೊಂದು ಸಾಲ ಮಾಡಿರಲಿಲ್ಲ. ಹಾಗೂ ಈ ಮೊತ್ತದ ಬದ್ಧತೆ ವೆಚ್ಚ ಇರಲಿಲ್ಲ. ಎಲ್ಲಾ ಹಾಳು ಮಾಡಿ ಈಗ ಆರೋಪಿಸುತ್ತಿದ್ದಾರೆ ಎಂದರು.

## ಜಗಳೂರಿಗೆ ಇಂದು ಕೇಂದ್ರ ಬರ ಅಧ್ಯಯನ ತಂಡ

**(1ನೇ ಪುಟದಿಂದ)** ಗೊಂಡ ಅಧಿಕಾರಿಗಳ ತಂಡ ತಾಲ್ಲೂಕಿನ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಿದೆ. ಜಗಳೂರು ತಾಲ್ಲೂಕಿನ ತೀವ್ರ ಬರಪೀಡಿತ ಗ್ರಾಮಗಳಾದ ದೋಣೆಹಳ್ಳಿ, ಭರಮಸಮುದ್ರ, ತಾಯಟೋಣಿ, ಹಿರೇಮಲ್ಲನ ಹೊಳೆ, ಸಿದ್ದಿಹಳ್ಳಿ ಮುಷ್ಟೂರು ಮುಂತಾದ ಗ್ರಾಮಗಳ ಕೃಷಿ ಜಮೀನುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವ ನಿರೀಕ್ಷೆ ಇದೆ. ಕೇಂದ್ರ ಬರ ಅಧ್ಯಯನ ತಂಡದ ಜೊತೆಗೆ ಶಾಸಕ ಬಿ. ದೇವೇಂದ್ರಪ್ಪ, ಜಿಲ್ಲಾಧಿಕಾರಿ ಡಾ.ಎಂ.ವಿ.ವೆಂಕಟೇಶ್, ಜಿಲ್ಲಾಮಟ್ಟದ, ತಾಲ್ಲೂಕು ಮಟ್ಟದ ಅಧಿಕಾರಿಗಳು ಸಾಥ್ ನೀಡಲಿದ್ದಾರೆ.

## ಅಕ್ರಮ ಸಂಬಂಧ : ಪತ್ನಿಗೆ ಜೀವನಾಂಶ ನಿರಾಕರಿಸಿದ ಹೈಕೋರ್ಟ್

ಬೆಂಗಳೂರು, ಅ. 6 – ಅಕ್ರಮ ಸಂಬಂಧ ಹೊಂದಿರುವ ಪತ್ನಿ, ಗಂಡನಿಂದ ಜೀವನಾಂಶ ಕೇಳಲು ಸಾಧ್ಯವಾಗದು ಎಂದು ಕರ್ನಾಟಕ ಹೈಕೋರ್ಟ್ ನೀಡಿದ ಇತ್ತೀಚಿನ ತೀರ್ಪಿನಲ್ಲಿ ತಿಳಿಸಲಾಗಿದೆ.

ಗೃಹ ಹಿಂಸಾಚಾರದಿಂದ ರಕ್ಷಣೆ ನೀಡುವ ಕಾಯ್ದೆಯ 12ನೇ ಸೆಕ್ಷನ್ ಅನ್ವಯ ಜೀವನಾಂಶ ನೀಡಬೇಕು ಎಂದು ಮಹಿಳೆ ದಾಖಲಿಸಿದ್ದ ಅರ್ಜಿಯನ್ನು ತಳ್ಳಿ ಹಾಕುವಾಗ ನ್ಯಾಯಮೂರ್ತಿ ರಾಜೇಂದ್ರ ಬಾದಾಮಿಕರ್ ಅವರು ಈ ಟಿಪ್ಪಣಿ ಮಾಡಿದ್ದಾರೆ.

ಅರ್ಜಿದಾರ ಮಹಿಳೆ ತನ್ನ ಗಂಡನ ಜೊತೆ ಪ್ರಾಮಾಣಿಕವಾಗಿಲ್ಲ. ಆರಂಭದಿಂದಲೂ ಮಹಿಳೆ ತಾನಿರುವ ಸ್ಥಳದ ನೆರೆಮನೆಯ ವ್ಯಕ್ತಿಯ ಜೊತೆ ವಿವಾಹೇತರ ಸಂಬಂಧ ಹೊಂದಿರುವುದು ಸಾಬೀತಾಗಿದೆ ಎಂದು ನ್ಯಾಯಾಲಯ ಹೇಳಿದೆ.

ತಾನು ಕಾನೂನು ಬದ್ಧವಾಗಿ ಮದುವೆಯಾಗಿದ್ದೇನೆ. ಹೀಗಾಗಿ ಗಂಡ ಜೀವನಾಂಶ ನೀಡಬೇಕು ಎಂದು ಮಹಿಳೆ ಅರ್ಜಿ ದಾಖಲಿಸಿದ್ದರು.

ಅಲ್ಲದೇ, ತನ್ನ ಗಂಡನೂ ಸಂಬಂಧಿಯೊಬ್ಬರ ಜೊತೆ ಅಕ್ರಮ ಸಂಬಂಧ ಹೊಂದಿದ್ದಾನೆ. ಹೀಗಾಗಿ ಗಂಡ ತನ್ನ ವಿರುದ್ಧ ಮಾಡುತ್ತಿರುವ ಆರೋಪ ಪರಿಗಣಿಸಬಾರದು ಎಂದು ಮಹಿಳೆ ಅರ್ಜಿಯಲ್ಲಿ ಹೇಳಿದ್ದರು.

ಈ ವಾದವನ್ನು ಒಪ್ಪದ ನ್ಯಾಯಾಲಯ, ಜೀವನಾಂಶ ಕೇಳುತ್ತಿರುವುದು ಪತ್ನಿ. ಹೀಗಾಗಿ ಪ್ರಾಮಾಣಿಕವಾಗಿರುವ ಬಗ್ಗೆ ಅವರೇ ಸಾಬೀತು ಪಡಿಸಬೇಕು. ತಾನೇ ಪ್ರಾಮಾಣಿಕವಾಗಿಲ್ಲದಿರುವಾಗ ಗಂಡನ ಕಡೆ ಬೆರಳು ತೋರಿಸಲಾಗದು ಎಂದು ಹೇಳಿದೆ.

ಇದಕ್ಕೂ ಮೊದಲು ವಿಚಾರಣೆ ನಡೆಸಿದ್ದ ಮ್ಯಾಜಿಸ್ಟ್ರೇಟರ ನ್ಯಾಯಾಲಯ, ಮಹಿಳೆಗೆ ಜೀವನಾಂಶ ನೀಡುವಂತೆ ಗಂಡನಿಗೆ ಆದೇಶ ಹೊರಡಿಸಿತ್ತು. ನಂತರ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಗಂಡನ ಪರವಾಗಿ ತೀರ್ಪು ಬಂದಿತ್ತು. ಆನಂತರದಲ್ಲಿ ಈ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿತ್ತು.

## ವೀರಶೈವ ಅಧಿವೇಶನ

**ಐತಿಹಾಸಿಕ ಅಧಿವೇಶನದಲ್ಲಿ ಮಠಾಧೀಶರು, ಸಮುದಾಯದ ಮುಖಂಡರು ಭಾಗಿ, ಸಮುದಾಯ ಎದುರಿಸುತ್ತಿರುವ ಸವಾಲುಗಳ ಕುರಿತು ಚರ್ಚೆ**

**(1ನೇ ಪುಟದಿಂದ)** ಭಾಷೆ, ಸಮಾಜದವರನ್ನು ಒಟ್ಟಿಗೆ ತೆಗೆದುಕೊಂಡು ಹೋಗುತ್ತಿದೆ. ಬಸವಣ್ಣನವರ ಪ್ರೇರಣೆ ಪಡೆದು ಆಡಳಿತ ನಡೆಸುತ್ತಿದೆ. ಯಾರನ್ನೂ ಕಡೆಗಣಿಸಿಲ್ಲ ಎಂದರು. ಜಾತಿ ಗಣತಿ ಬಹಿರಂಗ ಕುರಿತಂತೆ ಪ್ರತಿಕ್ರಿಯಿಸಿದ ಖಂಡ್ರೆ, ಈ ಕುರಿತು ಸಚಿವ ಸಂಪುಟದಲ್ಲಿ ಪ್ರಾಥಮಿಕ ಹಂತದಲ್ಲಿ ಚರ್ಚೆಯಾಗಿದ್ದು, ಅಲ್ಲಿಯೇ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ರಾಷ್ಟ್ರೀಯ ಉಪಾಧ್ಯಕ್ಷರಾದ ಎಸ್. ತಿಪ್ಪಣ್ಣ, ಅಥಣಿ ವೀರಣ್ಣ, ಎಸ್. ಎಸ್. ಗಣೇಶ್, ಅಣಬೇರು ರಾಜಣ್ಣ, ರಾಷ್ಟ್ರೀಯ ಕಾರ್ಯದರ್ಶಿ ರೇಣುಕಾ ಪ್ರಸನ್ನ, ಶಾಸಕ ಶಿವಗಂಗಾ ಬಸವರಾಜ್, ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್, ಶಂಕರ್ ಬಿದರಿ, ಬಿ.ಸಿ. ಉಮಾಪತಿ ಇತರರಿದ್ದರು.

## ಇಂದು 6ನೇ ಗ್ಯಾರಂಟಿಗೆ ಒತ್ತಾಯಿಸಿ ಜನಾಂದೋಲನ



ದಾವಣಗೆರೆ,ಅ.6- ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ ಭರವಸೆ ನೀಡಿದ್ದ ಆರನೇ ಗ್ಯಾರಂಟಿಯನ್ನು ಮರೆತಿದೆ ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು ಹೇಳಿದರು.

ಜನತೆಗೆ ನೀಡಿದ ಭರವಸೆಗಳನ್ನು ಈಡೇರಿಸಬೇಕೆಂದು ನಾಳೆ ದಿನಾಂಕ 7ರ ಶನಿವಾರ ಸರ್ಕಾರವನ್ನು ಒತ್ತಾಯಿಸುವ ಜನಾಂದೋ ಲನದ ಪೋಸ್ಟರ್ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಇಲ್ಲಿನ ಜಯದೇವ ಸರ್ಕಲ್ ಬಳಿ ಸೇರಿದ್ದ ಭಾರತ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಜನಾಗ್ರಹ ಜನಾಂದೋ ಲನ ಚಳವಳಿ ಕುರಿತು ಮಾತನಾಡಿದ ಸಿಪಿಐ ಜಿಲ್ಲಾ ಖಜಾಂಚಿ ಆನಂದ್ ರಾಜ್, ರೈತರ ಮತ್ತು ಕಾರ್ಮಿಕರ ದುಡಿಯುವ ಜನರ ಮತಗಳಿಂದ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ನೀಡಿದ ಭರವಸೆಗಳನ್ನು ಈಡೇರಿಸುವಲ್ಲಿ ಹಿಂದೆ ಬಿದ್ದಿದ್ದು, ಕೂಡಲೇ ಕೊಟ್ಟ ಭರವಸೆ ಈಡೇರಿಸಿ ಜನರ ನೈಜ ಸಮಸ್ಯೆಗಳನ್ನು ಪರಿಹರಿಸಬೇಕು ಎಂದರು.

ಈ ಸಂದರ್ಭದಲ್ಲಿ ಪಕ್ಷದ ಜಿಲ್ಲಾ ಸಹಕಾರ್ಯದರ್ಶಿ ಹೆಚ್. ಜಿ. ಉಮೇಶ್, ತಾಲ್ಲೂಕು ಕಾರ್ಯದರ್ಶಿಗಳಾದ ಮಹಮ್ಮದ್ ಭಾಷಾ ಜಗಳೂರು, ಮಹಮ್ಮದ್ ರಫೀಕ್ ಚೆನ್ನಗಿರಿ, ಟಿ. ಎಚ್. ನಾಗರಾಜ್ ಹರಿಹರ, ಮುಖಂಡರುಗಳಾದ ವಿ. ಲಕ್ಷ್ಮಣ, ಎಚ್.ಎಸ್. ಚಂದ್ರು, ನಿಟುವಳ್ಳಿ ಬಸವ ರಾಜ, ಮಹೇಶ, ಸರೋಜ, ಅಜೀಜ್, ಶೇಖರ ನಾಯಕ, ಕುಮಾರ ನಾಯಕ, ಸಿದ್ದಲಿಂಗೇಶ್, ಜಯಪ್ಪ ಸೇರಿದಂತೆ ಕಾರ್ಯಕರ್ತರು ಭಾಗವಹಿಸಿದ್ದರು.


## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

ಆಡಳಿತ ಕಚೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ

### ಸ್ಥಿರ ಸೊತ್ತಿನ ಬಹಿರಂಗ ಹರಾಜು ಪ್ರಕಟಣೆ

ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇವರು ಪಡೆದುಕೊಂಡಿರುವ ಈ ಕೆಳಗಿನ ಡಿಕ್ರಿ ಅಮಲ್ಜಾರಿ ಕ್ರಮದಲ್ಲಿ ಬ್ಯಾಂಕಿಗೆ ಜಪ್ತಿ/ಆಧಾರ ಮಾಡಲ್ಪಟ್ಟಿರುವ ಸ್ಥಿರ ಸೊತ್ತನ್ನು ಸಹಕಾರ ಸಂಘಗಳ ಉಪ ನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ಘನ ನ್ಯಾಯಾಲಯದ ಆದೇಶ ಸಂಖ್ಯೆ ಡಿಆರ್/ಡಿವಿಜಿ/129/2020-21 ರ ಮೇರೆಗೆ ಈ ಕೆಳಗೆ ಕಾಣಿಸಿರುವ ಸ್ಥಿರಾಸ್ತಿಯನ್ನು ಛಡ ಸವಾಲು ಮೂಲಕ ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ ನಿಯಮ 441 ಇವರ ಷರತ್ತಿಗೊಳಪಟ್ಟು ಹರಾಜು ಮಾಡಲಾಗುವುದು.

| ಕ್ರ. ಸಂ. | ಬಾಕಿದಾರರ ಹೆಸರು ಮತ್ತು ವಿಳಾಸ | ಸದರಿ ಅಮಲ್ಜಾರಿ ಕ್ರಸಂ. ಮತ್ತು ಇ.ಪಿ. ಖಾತೆಯಿಂದ ಬರಬೇಕಾದ ಬಾಕಿ ಮೊತ್ತ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಿರ ಸೊತ್ತುಗಳ ವಿವರ | ಬಹಿರಂಗ ಹರಾಜು ನಡೆಯುವ ಸ್ಥಳ, ದಿನಾಂಕ ಮತ್ತು ಸಮಯ | ಪಾವತಿಸಬೇಕಾದ ಮುಂಗಡ ಠೇವಣಿ |
|---|---|---|---|---|---|
| 1 | ಶ್ರೀ ಹೆಚ್. ಶಿವಕುಮಾರ್ ಬಿನ್ ಹುಚ್ಚಿಂಗಪ್ಪ, ಡೋರ್ ನಂ.1322, 2ನೇ ಕ್ರಾಸ್, ಗಾಂಧಿನಗರ, ದಾವಣಗೆರೆ.. | ಇ.ಪಿ. ಸಂ.19/2022-23. ರೂ. 2,67,159-00 + ಇತರೆ ಖರ್ಚು. (ದಿನಾಂಕ : 20-09-2023ಕ್ಕೆ ಇದ್ದಂತೆ + ಮುಂದುವರೆದ ಬಡ್ಡಿ ಹಾಗೂ ಇತರೆ ಖರ್ಚು). | ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಕಛೇರಿಯ ವ್ಯಾಪ್ತಿಗೆ ಒಳಪಟ್ಟ, ದಾವಣಗೆರೆ ಸಿಟಿ, 3ನೇ ವಾರ್ಡ್, 3ನೇ ಡಿವಿಜನ್, ಗಾಂಧಿ ನಗರದಲ್ಲಿರುವ ಮುನಿಸಿಪಾಲ್ ಚಾಲ್ತಿ ಡೋರ್ ನಂ.1322, ಅಳತೆ $25+24^{3/4}/2$ X 15 ಅಡಿಗಳ ಜಾಗ, ಸದರಿ ಸೊತ್ತಿನ ಚೆಕ್ಕುಬಂದಿ: ಪೂರ್ವ : ಮುಖ್ಯರಸ್ತೆ, ಪಶ್ಚಿಮ : ಕೆಂಚಪ್ಪನವರ ಬಾಬ್ತು ಮನೆ, ಉತ್ತರ : ಕನ್ಸರ್‌ವೆನ್ಸಿ ರಸ್ತೆ, ದಕ್ಷಿಣ : ಮುಖ್ಯರಸ್ತೆ. | ದಿನಾಂಕ 31-10-2023 ನೇ ಮಂಗಳವಾರ ಮಧ್ಯಾಹ್ನ 12-00 ಘಂಟೆಗೆ, ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ಹದಡಿ ರಸ್ತೆ ಶಾಖೆ, ದಾವಣಗೆರೆ. | 50,000=00 |

**ಹರಾಜಿನ ಷರತ್ತುಗಳು :-** (1) ಹರಾಜಿನಲ್ಲಿ ಭಾಗವಹಿಸುವವರು ಹರಾಜು ಸ್ಥಳದಲ್ಲಿ ಮುಂಗಡ ಠೇವಣಿಯನ್ನು ಡಿ.ಡಿ./ನಗದು ಮುಖಾಂತರ ಪಾವತಿಸಬೇಕು(ಪ್ರಧಾನ ವ್ಯವಸ್ಥಾಪಕರು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ಇವರ ಹೆಸರಿಗೆ) ಇದನ್ನು ಹರಾಜಿನ ಸಮಯಕ್ಕೆ ಅರ್ಧ ಗಂಟೆಗೆ ಮುಂಚಿತವಾಗಿ ಪಾವತಿಸಿ ತಮ್ಮ ವೈಯಕ್ತಿಕ ಮಾಹಿತಿ (ಆಧಾರ ಕಾರ್ಡ್ ಹಾಗೂ ಪಾನ್ ಕಾರ್ಡ್ ಪ್ರತಿಯೊಂದಿಗೆ) ಸಲ್ಲಿಸಿ ಬಿಡ್ಡುದಾರರೆಂದು ನೋಂದಾಯಿಸಿಕೊಳ್ಳಬೇಕು. (2) ಸವಾಲಿನಲ್ಲಿ ಭಾಗವಹಿಸಲು ಇಚ್ಛಿಸುವವರು ಸದರಿ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು. (3) ಹರಾಜಿಗೆ ಮುನ್ನ ಬ್ಯಾಂಕಿಗೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. (4) ನಿಗದಿಪಡಿಸಿದ ಸಮಯದ ನಂತರ ಬಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ. (5) ಅಧಿಕೃತ ಸವಾಲ್ ಮಾಡಿ ಸ್ಥಿರಾಸ್ತಿಯನ್ನು ಕೊಳ್ಳುವವರು ಮಾರಾಟಾಧಿಕಾರಿಯವರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡ 15ರಷ್ಟು ಮೊತ್ತವನ್ನು ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್‌ಪೇಪರ್ ಮೊಬಲಗನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. (6) ಹರಾಜಿಗಿಟ್ಟ ಸ್ಥಿರ ಸ್ವತ್ತಿನ ವಿವರಣೆ ಅಂದಾಜು ವಿಸ್ತೀರ್ಣದ ವಿಷಯದಲ್ಲಿ ವ್ಯತ್ಯಾಸ ಉಂಟಾದರೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ. (7) ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. (8) ಒಂದು ವೇಳೆ ಸುಸ್ತಿ ಸಾಲಗಾರರು 45 ದಿನಗಳೊಳಗಾಗಿ ಇತರೆ ಎಲ್ಲಾ ಖರ್ಚುಗಳೊಂದಿಗೆ ಸಂಪೂರ್ಣ ಹಣ ಪಾವತಿ ಮಾಡಿದಾಗ ಹರಾಜಿನಲ್ಲಿ ಒಪ್ಪಿಕೊಂಡ ಖರೀದಿದಾರರಿಗೆ ಶೇಕಡ 5ರಂತೆ ಮಾರಾಟ ಮಾಡಿದ ಹಣಕ್ಕೆ ಸಮಾಧಾನಾರ್ಥವಾಗಿ ಪರಿಹಾರವನ್ನು ಕರ್ನಾಟಕ ಸಹಕಾರಿ ನಿಯಮ 60, ನಿಯಮ 38(4)(1)ರ ಪ್ರಕಾರ ಸುಸ್ತಿಸಾಲಗಾರರಿಂದ ಕೊಡಿಸಲಾಗುವುದು. (9) ಮೇಲೆ ಕಾಣಿಸಿದಂತೆ ಸ್ಥಿರಾಸ್ತಿ ಹರಾಜಿನ ಹಣವನ್ನು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಕಟ್ಟಲು ತಪ್ಪಿದಲ್ಲಿ ಹರಾಜನ್ನು ರದ್ದುಪಡಿಸಿ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಬಿಡ್ಡುದಾರರಿಗೆ ಇದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. (10) ಎಲ್ಲಾ ವಿಧವಾದ ಸ್ಟಾಂಪ್ ಡ್ಯೂಟಿ, ತೆರಿಗೆ, ಕಾನೂನು ಖರ್ಚು, ರಿಜಿಸ್ಟ್ರೇಷನ್ ಫೀ, ಬಾಕಿ ಇರುವ ವಿದ್ಯುತ್ ಬಿಲ್, ದೂರವಾಣಿ ಬಿಲ್, ಕಂದಾಯ ಮತ್ತು ನೀರಿನ ಕಂದಾಯ, ಇತರೆ ಖರ್ಚುಗಳನ್ನು ಸಹ ಖರೀದಿದಾರರೇ ಭರಿಸತಕ್ಕದ್ದು. (11) ಸ್ಥಿರಾಸ್ತಿಯು ಹರಾಜು ನಡೆಯುವ ದಿನ ಯಾವ ರೀತಿ ಇರುತ್ತದೆಯೋ ಮತ್ತು ಹೇಗಿರುತ್ತದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (12) **ಯಾವುದೇ ಕಾರಣ ನೀಡದೇ ಹರಾಜನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾರಾಟಾಧಿಕಾರಿಗಳ ಅಧೀನಕ್ಕೆ ಒಳಪಟ್ಟಿರುತ್ತದೆ.** (13) ಮೇಲ್ಕಾಣಿಸಿದ ಸ್ಥಿರಾಸ್ತಿಯನ್ನು ಪರಿಶೀಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಮಾರಾಟಾಧಿಕಾರಿ/ಪ್ರಧಾನ ವ್ಯವಸ್ಥಾಪಕರನ್ನು ಈ ಜಾಹೀರಾತು ಬಂದ ದಿನಾಂಕದಿಂದ ಹರಾಜಿನ ದಿನಾಂಕದವರೆಗೆ ಬೆಳಿಗ್ಗೆ 11-00 ಘಂಟೆಯಿಂದ ಸಂಜೆ 5-00 ಘಂಟೆಯೊಳಗೆ ಸಂಪರ್ಕಿಸಿ ಪರಿಶೀಲಿಸಬಹುದು. (14) ಯಾವುದೇ ತಕರಾರಿದ್ದಲ್ಲಿ ಸಹಕಾರ ಸಂಘಗಳ ಕಾಯಿದೆ, ನಿಯಮಗಳ ಪ್ರಕಾರ ಇತ್ಯರ್ಥಗೊಳಿಸಲಾಗುವುದು.

ದಿನಾಂಕ : 06-10-2023
ಸ್ಥಳ : ದಾವಣಗೆರೆ

ಸಹಿ/-
**ಬಸವರಾಜ ಎಂ.**
ಪ್ರಧಾನ ವ್ಯವಸ್ಥಾಪಕರು

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿ, ದಾವಣಗೆರೆ ಉಪ ವಿಭಾಗ, ದಾವಣಗೆರೆ ಇವರ ಆದೇಶದ ಮೇರೆಗೆ
ಸಹಿ/-
ಜ್ಯೋತಿ ಮಾಳಾಪುರ, ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ, (ನಿ.441)
ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ

# ಪ್ರತಿಭಾ ಕಾರಂಜಿ ಮಕ್ಕಳ ಹಬ್ಬವಾಗಲಿ

## ಕುಂಬಳೂರು: ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಬಿಇಒ ಹನುಮಂತಪ್ಪ



ಮಲೇಬೆನ್ನೂರು, ಅ. 6- ಮಕ್ಕಳ ಪ್ರತಿಭೆ ಹೊರ ಹಾಕುವ ಪ್ರತಿಭಾ ಕಾರಂಜಿ ಸಾಂಸ್ಕೃತಿಕ ಹಬ್ಬವಾಗಲಿ ಎಂದು ಬಿಇಓ ಹನುಮಂತಪ್ಪ ಹೇಳಿದರು.

ಅವರು ಗುರುವಾರ ಕುಂಬಳೂರು ಗ್ರಾಮದ ಬಸವ ಗುರುಕುಲ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಕುಂಬಳೂರು ಕ್ಲಸ್ಟರ್ ಮಟ್ಟದ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಗ್ರಾಮೀಣ ಮಕ್ಕಳಿಗೆ ಈ ಕಾರ್ಯಕ್ರಮ ವರದಾನವಾಗಿದ್ದು, ಮಕ್ಕಳ ಪ್ರತಿಭೆಯನ್ನು ಮತ್ತಷ್ಟು ಬೆಳೆಸುವ ಕೆಲಸವನ್ನು ಶಿಕ್ಷಕರು ಈ ಕಾರ್ಯಕ್ರಮದ ಮೂಲಕ ಮಾಡಬೇಕೆಂದು ಕ್ಷೇತ್ರ ಸಮನ್ವಯಾಧಿಕಾರಿ ಕೃಷ್ಣಪ್ಪ ಹೇಳಿದರು.

ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಉಮಾದೇವಿ ಎಂ.ಹೆಚ್. ಶಿವರಾಮಚಂದ್ರಪ್ಪ ಮಾತನಾಡಿ, ನಾವು ಓದುವಾಗ ಈ ರೀತಿಯ ಕಾರ್ಯಕ್ರಮಗಳು ಮತ್ತು ಶಿಕ್ಷಣಕ್ಕೆ ಇಷ್ಟೊಂದು ಪ್ರೋತ್ಸಾಹ ಇರಲಿಲ್ಲ. ಈಗಿನ ವಿದ್ಯಾರ್ಥಿಗಳು ಪುಣ್ಯವಂತರಾಗಿದ್ದು, ಸರ್ಕಾರದ ಯೋಜನೆಗಳ ಸದುಪಯೋಗ ಪಡೆದು ಕೊಂಡು ದೇಶದ ಉತ್ತಮ ಪ್ರಜೆಗಳಾಗಿ ಬೆಳೆಯಿರಿ ಎಂದು ಕರೆ ನೀಡಿದರು.

ಬಸವ ಗುರುಕುಲ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಹಳೇಮನಿ ಶಂಭುಲಿಂಗಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಿರಿಯರಾದ ಕೆ. ತೀರ್ಥಪ್ಪ, ಗ್ರಾ.ಪಂ. ಸದಸ್ಯರೂ, ಸ.ಹಿ.ಪ್ರಾ. ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಕೆ.ಹೆಚ್. ನಾಗೇಂದ್ರಪ್ಪ ಮಾತನಾಡಿದರು.

ಈ ವೇಳೆ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಮಲೇಬೆನ್ನೂರಿನ ಎಸ್‌ಬಿಕೆಎಂ ಶಾಲೆಯ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ ಅವರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು.

ಗ್ರಾ.ಪಂ. ಉಪಾಧ್ಯಕ್ಷ ನಾಗೋಳ್ ಕಲ್ಲೇಶ್, ವಿದ್ಯಾಸಂಸ್ಥೆಯ ಖಜಾಂಚಿ ಬಿ.ಎಂ. ಹನುಮಂತಪ್ಪ, ಸದಸ್ಯ ಎಸ್. ನಾಗರಾಜಪ್ಪ, ಸಿಆರ್‌ಪಿಗಳಾದ ನಂಜುಂಡಪ್ಪ, ಎಸ್.ಎನ್. ರೂಪಾ, ಸತೀಶ, ಬಸವರಾಜಯ್ಯ, ಜಾಮೀಯಾ ಶಾಲೆಯ ಮುಖ್ಯ ಶಿಕ್ಷಕ ಮಹಮದ್ ಇಲಿಯಾಜ್, ಶಿಕ್ಷಕ ಹೆಚ್. ಶಶಿಕುಮಾರ್, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಎಂ.ಹೆಚ್. ಶರಣ್ ಮತ್ತಿತರರು ಭಾಗವಹಿಸಿದ್ದರು.

ಶರಣ ಸಂಗಮ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಬಿ.ಎಸ್. ಗುಂಡಣ್ಣನವರ್ ಸ್ವಾಗತಿಸಿದರು. ಶಿಕ್ಷಕ ಗಿರೀಶ್ ಗಂಟೇರ್ ನಿರೂಪಿಸಿದರು.

# ನಗರದ ಎಪಿಎಂಸಿ ಸ್ವಚ್ಛತಾ ಕೆಲಸಗಾರರಿಗೆ ಸನ್ಮಾನ



ದಾವಣಗೆರೆ, ಅ.6- ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ ಗಾಂಧಿ ಜಯಂತಿ ದಿನ ಎಪಿಎಂಸಿ ಸ್ವಚ್ಛತಾ ಕೆಲಸಗಾರರಿಗೆ ಸನ್ಮಾನ ಮಾಡಿ ಗೌರವಿಸಲಾಯಿತು. ಮಾರುಕಟ್ಟೆ ಕಾರ್ಯದರ್ಶಿ ಹೆಚ್. ಸಿ.ಎಂ. ರಾಣಿಯವರು ಅಧ್ಯಕ್ಷತೆ ವಹಿಸಿದ್ದರು. ಸೆ.15 ರಿಂದ ಎಪಿಎಂಸಿ ಪ್ರಾಂಗಣದಲ್ಲಿ ಸ್ವಚ್ಛತೆ ಆಂದೋಲನ, ಗಿಡ ನೆಡುವ ಕಾರ್ಯಕ್ರಮ. ತರಕಾರಿ ಮಾರುಕಟ್ಟೆಯಲ್ಲಿ ಸ್ವಚ್ಛತೆ ಬಗ್ಗೆ ಜನರಿಗೆ ಅರಿವು ಮೂಡಿಸುವ ಕಾರ್ಯಕ್ರಮ ನಡೆಸಲಾಯಿತು. ಸಹಾಯಕ ಕಾರ್ಯದರ್ಶಿ ಹರಿ ಹೊನ್ನಾಳಿ, ಕಾರ್ಯದರ್ಶಿ ಮಹೇಶ್, ಪ್ರಸನ್ನಕುಮಾರ್, ಗಿರೀಶ್ ನಾಯ್ಕ್, ಗಣೇಶ್, ತಿಪ್ಪೇಸ್ವಾಮಿ, ಧನ್ಯಕುಮಾರ್, ರಾಜೇಶ್ವರಿ, ಮಾಲಾ ಗಂಗಾಧರ್ ಮತ್ತು ವರ್ತಕರಾದ ದೊಗ್ಗಳ್ಳಿ ಬಸಣ್ಣ, ತಿಪ್ಪೇಸ್ವಾಮಿ, ದಯಾನಂದ, ಕಿರುವಾಡಿ ಸೋಮಣ್ಣ, ಜಾವೀದ್ ಮತ್ತಿತರರು ಭಾಗವಹಿಸಿದ್ದರು.

# ಔರಂಗಜೇಬ್ ಮಾನಸಿಕತೆಯಿಂದ ಸೌಹಾರ್ದತೆ ಸಾಧ್ಯವಿಲ್ಲ

(1ನೇ ಪುಟದಿಂದ) ಸಂಘಟನೆಗಳಾಗಿವೆ. ಕಾಂಗ್ರೆಸ್‌ನ ಕೆಲ ಸಚಿವರು ಈ ಸಂಘಟನೆಗಳ ಬಗ್ಗೆ ಅವಹೇಳನವಾಗಿ ಮಾತನಾಡುತ್ತಿರುವುದು ಖಂಡನಾರ್ಹ ಎಂದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಸನಾತನ ಹಿಂದೂ ಧರ್ಮದ ನಿವಾರಣೆಯ ಬಗ್ಗೆ ಕೆಲಸ ಮಾಡುತ್ತಿದ್ದಾರೆ. ನಾವು ಮೈ ಮರೆತರೆ ಹಿಂದೂಗಳನ್ನು ಒಡೆಯುತ್ತಾರೆ. ಇಂಥವರನ್ನು ಎದುರಿಸಲು ಹಿಂದೂ ಸಂಘಟನೆಗಳ ನಿಜವಾದ ಹೋರಾಟ ಇಂದಿನಿಂದ ಆರಂಭವಾಗಬೇಕಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬಿಜೆಪಿ ಮುಖಂಡ ಯಶವಂತರಾವ್ ಜಾಧವ್, 33 ವರ್ಷಗಳ ಹಿಂದೆ ಇದೇ ದಿನದಂದು ರಾಮ ಮಂದಿರ ಹೋರಾಟದಲ್ಲಿ ಎಂಟು ಜನ ಹುತಾತ್ಮರಾಗಿದ್ದರು. ತಮಗೂ ಸಹ ಗುಂಡೇಟು ಬಿದ್ದಿತ್ತು. ಇಂತಹ ತ್ಯಾಗ ಬಲಿದಾನಗಳ ಹೋರಾಟದಿಂದ ರಾಮ ಮಂದಿರ ನಿರ್ಮಾಣ ಸಾಧ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ರಾಮ ಮಂದಿರಕ್ಕೆ ಹುತಾತ್ಮರಾದವರ ಕುಟುಂಬದವರು, ಗುಂಡೇಟಿನಿಂದ ಗಾಯಗೊಂಡವರು, ಹೋರಾಟದಲ್ಲಿ ಪಾಲ್ಗೊಂಡವರು ಹಾಗೂ ಹಿಂದೂ ಕಾರ್ಯಕರ್ತರಿಗೆ ನೆರವಾದ ವಕೀಲರನ್ನು ಸನ್ಮಾನಿಸಲಾಯಿತು.

ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಿದ್ದರು.

ಮಾಜಿ ಶಾಸಕರಾದ ಎಸ್.ಎ. ರವೀಂದ್ರನಾಥ್, ಬಸವರಾಜ ನಾಯ್ಕ, ಬೆಳ್ಳಿ ಪ್ರಕಾಶ್, ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಮುಖಂಡರಾದ ಬಿ.ಜಿ. ಅಜಯ್ ಕುಮಾರ್, ಲೋಕಿಕೆರೆ ನಾಗರಾಜ್, ಶ್ರೀನಿವಾಸ ಶಿವಕುಮಾರ್, ದಾಸಕರಿಯಪ್ಪ, ಮುಖಂಡರಾದ ಕೆ.ಬಿ. ಶಂಕರನಾರಾಯಣ್, ಉತ್ತಮ್ ಚಂದ್ ಜೈನ್, ಧನಂಜಯ ಕಡ್ಲೇಬಾಳ್ ಮತ್ತಿತರರು ಉಪಸ್ಥಿತರಿದ್ದರು.

ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಸ್ವಾಗತಿಸಿದರು.

### ಕಾಶಿ, ಮಥುರಾಗಳಲ್ಲಿ ದೇವಾಲಯಗಳ ಪುನರ್ ಸ್ಥಾಪನೆಯಾಗಬೇಕು

ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣವಾಗುತ್ತಿದೆ. ಮುಂದಿನ ದಿನಗಳಲ್ಲಿ ಕಾಶಿ, ಮಥುರಾ ಸೇರಿದಂತೆ ಉಳಿದೆಡೆ ದೇವಾಲಯಗಳ ಪುನರ್ ಸ್ಥಾಪನೆಯಾಗಬೇಕಿದೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ಜಾತಿ ಹಾಗೂ ಹಣ ಗಳಿಕೆಗಾಗಿ ಮತ ಹಾಕಿದರೆ ಆಗುವ ಅನಾಹುತ ಊಹಿಸಲು ಸಾಧ್ಯವಿಲ್ಲ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ತಾಯಿ ಭಾರತಿಗೆ ಜೈಕಾರ ಹಾಕುವ ನೇತೃತ್ವಕ್ಕೆ ಮತ ಹಾಕಬೇಕು ಎಂದವರು ಕರೆ ನೀಡಿದರು.

# ಕರುಣಾ ಟ್ರಸ್ಟ್, ಚಿಂತನಾ ಸಂಸ್ಥೆಯಿಂದ ವಿಶೇಷಚೇತನ ಕುಟುಂಬಕ್ಕೆ ಆಸರೆ



ದಾವಣಗೆರೆ, ಅ. 6- ಹರಿಹರ ತಾಲ್ಲೂಕಿನ ಅಮರಾವತಿ ಗ್ರಾಮದ ಆಂಜನೇಯ ಬಡಾವಣೆ ವಾಸಿ ಪೋಲಿಯೋ ಪೀಡಿತರಾಗಿರುವ ನಾಗರಾಜ ಬಂಡ್ರಿಗೆ ಎರಡೂ ಕಾಲುಗಳಿಲ್ಲ, ಇವರ ಧರ್ಮಪತ್ನಿ ಮಲ್ಲಮ್ಮ ಅವರಿಗೆ ಕುರುಡುತನ ಜೊತೆಗೆ ಕಿತ್ತು ತಿನ್ನುವ ಬಡತನ. ಇವರಿಗೆ 6 ಜನ ಮಕ್ಕಳು. ಇದರಲ್ಲಿ ಮೂವರು ಹೆಣ್ಣು ಮಕ್ಕಳು ಕುರುಡರಾಗಿದ್ದಾರೆ. ಇಬ್ಬರು ಹೆಣ್ಣು ಮಕ್ಕಳು ಕಾಲೇಜಿನಲ್ಲಿ ಓದುತ್ತಿದ್ದಾರೆ. ಒಬ್ಬ ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳು ಹಾಸ್ಟೇಲ್‌ನಲ್ಲಿ ಇದ್ದು ಓದುತ್ತಿದ್ದಾರೆ. ಒಬ್ಬ ಮಗ ಕುರಿ ಕಾಯುತ್ತಿದ್ದಾನೆ.

ಈ ಕುಟುಂಬದ ಕಷ್ಟಗಳ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಕರುಣಾ ಟ್ರಸ್ಟಿನ ಶಿವನಕೆರೆ ಬಸವಲಿಂಗಪ್ಪ ತಮ್ಮ ವಾಟ್ಸ್ ಆಪ್ ಗ್ರೂಪ್ ನಲ್ಲಿ ಈ ಕುಟುಂಬಕ್ಕೆ ಸಹಾಯಹಸ್ತ ಕೋರಿ ಮೆಸೇಜ್ ಹಾಕಿದರು. ಅದನ್ನು ಗಮನಿಸಿದ ಡಾ. ಶಿವಪ್ರಸಾದ್ ಮತ್ತು ಚಿಂತನ ಸಂಸ್ಥೆಯ ನಿವೃತ್ತ ಕೃಷಿ ಅಧಿಕಾರಿ ಅಯ್ಯಪ್ಪನ್, ಅಮರಾವತಿ ಕಾಲೋನಿಗೆ ಭೇಟಿ ನೀಡಿ ಸಂತ್ರಸ್ತ ಬಂಡ್ರಿ ಕುಟುಂಬದೊಂದಿಗೆ ಮಾತನಾಡಿ, ಅವರ ಕಷ್ಟವನ್ನು ಅರಿತು ಬಂಡ್ರಿಯವರ ಮಕ್ಕಳ ಶಿಕ್ಷಣಕ್ಕೆ, ಸಣ್ಣ ವ್ಯಾಪಾರಕ್ಕಾಗಿ, ಮನೆ ರಿಪೇರಿ ಮಾಡಲು ರೂ. 85,000 ಹಣವನ್ನು 'ಚಿಂತನಾ' ಮೈಸೂರು ಸಂಸ್ಥೆಯಿಂದ ಕೊಡಿಸಲು ನಿರ್ಧರಿಸುತ್ತಾರೆ. ಅದರಂತೆ ಕರುಣಾ ಟ್ರಸ್ಟ್ ಗೆ ರೂ. 85,000 ಹಣ ವರ್ಗಾಯಿಸಿದ್ದು, ಕರುಣಾ ಟ್ರಸ್ಟ್ ಮುಂದೆ ನಿಂತು ಬಂಡ್ರಿ ಕುಟುಂಬಕ್ಕೆ ಹಾರ್ಮೋನಿಯಂ, ವ್ಯಾಪಾರಕ್ಕೆ ಶೆಡ್ ಮತ್ತು ಮನೆ ರಿಪೇರಿ ಮಾಡಿಕೊಟ್ಟಿತು.

ಒಟ್ಟಾರೆಯಾಗಿ ಈ ಬಡ ಕುಟುಂಬವು ಸುಸ್ಥಿರ ಮನೆಯೊಂದಿಗೆ ಮಕ್ಕಳಿಗೆ ಶಿಕ್ಷಣ ಮತ್ತು ಬಂಡ್ರಿಯವರಿಗೆ ಉದ್ಯೋಗ ಮಾಡಲು ಸಹಕಾರಿಯಾಗಿದೆ. ಇದರಿಂದ ನೊಂದ ಈ ಕುಟುಂಬ ಇಂದು ಸ್ವತಂತ್ರವಾಗಿ, ಆನಂದದಿಂದ ಜೀವಿಸಲು ಸಹಕಾರಿಯಾಗಿದೆ. ಈ ಕಾರಣಕ್ಕಾಗಿ ಬಂಡ್ರಿ ಕುಟುಂಬ ಮತ್ತು ಕರುಣಾ ಟ್ರಸ್ಟ್ ಚಿಂತನಾ ಸಂಸ್ಥೆಗೆ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಈ ರೀತಿ ನೊಂದ ಅನೇಕ ಕುಟುಂಬಗಳಿಗೆ ಸಹಾಯ, ಸಹಕಾರ ನೀಡುವ ಸತ್ಕಾರ್ಯ ಕರುಣಾ ಟ್ರಸ್ಟಿನಿಂದ ನಡೆಯುತ್ತಲೇ ಬರುತ್ತಿದೆ. ಇಂತಹ ಸತ್ಕಾರ್ಯಕ್ಕೆ ಕರುಣಾ ಟ್ರಸ್ಟಿನೊಂದಿಗೆ ಕೈ ಜೋಡಿಸಲು ಸಲಹೆ, ಸಹಕಾರ, ಧನಸಹಾಯ ಮಾಡುವವರು ಸಂಪರ್ಕಿಸಬಹುದು. ಪಾಟೀಲ್- 6361352381, karuna jeeva kalyana trust. Bank Account Number 50100332805356, IFSC HDFC0000403.

# ರೆಡ್ ಕ್ರಾಸ್‌ನಿಂದ ಪ್ರಥಮ ಚಿಕಿತ್ಸಾ ಕಾರ್ಯಕ್ರಮ



ದಾವಣಗೆರೆ, ಅ. 6- ಸರ್ಕಾರಿ ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆ, ದಾವಣಗೆರೆ ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ದಾವಣಗೆರೆ ಸಹಯೋಗದಲ್ಲಿ ನಗರದ ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಪ್ರಸಿದ್ಧ ರಾಷ್ಟ್ರೀಯ ತರಬೇತುದಾರ ಡಾ. ಕುಮಾರ್ ವಿ.ಎಲ್.ಎಸ್ ರವರು ಪ್ರಥಮ ಚಿಕಿತ್ಸೆ ಕುರಿತು ಆಸ್ಪತ್ರೆಯ ಸಿಬ್ಬಂದಿ ವರ್ಗದವರಿಗೆ ತುರ್ತು ಸಂದರ್ಭದಲ್ಲಿ ಕೈಗೊಳ್ಳಬೇಕಾದ ಪ್ರಥಮ ಚಿಕಿತ್ಸೆ ಕುರಿತು ತರಬೇತಿ ನೀಡಿದರು. ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಎಸ್.ಪಿ. ಮಧು, ಹಿರಿಯ ತಜ್ಞ ಡಾ.ಬಸವರಾಜ್, ಡಾ. ಭಾರತಿ, ಡಾ. ಸುಧಾ ಪಾಟೀಲ್, ಡಾ.ಸಂಜಯ್, ಡಾ. ಪ್ರವೀಣ, ಡಾ. ಮಹೇಶ್ ಹಾಗೂ ಸಿಬ್ಬಂದಿಗಳು, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸಂಯೋಜಕ ಎನ್.ಜಿ. ಶಿವಕುಮಾರ್ ಹಾಗು ಇತರರು ಇದ್ದರು.

# ಬಿಜೆಪಿ ಲೋಕಸಭಾ ಚುನಾವಣೆಯನ್ನು ಹಗುರವಾಗಿ ಪರಿಗಣಿಸುವುದಿಲ್ಲ

**ಸಚಿವ ಪ್ರಧಾನ್**

ನವದೆಹಲಿ, ಅ, 6 – ಐ.ಎನ್.ಡಿ.ಐ.ಎ. ಒಕ್ಕೂಟ ನಿಜವಾದ ಸವಾಲಾಗಿದೆ. ಬಿಜೆಪಿ ಚುನಾವಣೆಯನ್ನು ಹಗುರವಾಗಿ ಪರಿಗಣಿಸುವುದಿಲ್ಲ ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ. ಬಿಜೆಪಿ ಯಾವುದೇ ಚುನಾವಣೆಯನ್ನು ಹಗುರವಾಗಿ ಪರಿಗಣಿಸುವು ದಿಲ್ಲ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೂರನೇ ಬಾರಿ ದೇಶದ ಸೇವೆ ಮಾಡಲು ಜನಾದೇಶ ಪಡೆಯಲು ಪಕ್ಷದ ಅಜೆಂಡಾ ಸಿದ್ಧಪಡಿಸಲಾಗುತ್ತಿದೆ ಎಂದವರು ಹೇಳಿದ್ದಾರೆ. ಕಾರ್ಯಕರ್ತರಿಂದ ಹಿಡಿದು ನಾಯಕರವರೆಗೆ ಪ್ರತಿಯೊಬ್ಬರು ಪ್ರತಿ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸುತ್ತಾರೆ ಎಂದೂ ಅವರು ತಿಳಿಸಿದ್ದಾರೆ.

# ಸುಪ್ರೀಂ ಕೋರ್ಟ್ ಪರಿಶೀಲನೆ

(1ನೇ ಪುಟದಿಂದ) ಹೇಳಿತ್ತು.

ಅರ್ಜಿದಾರರ ಪರವಾಗಿ ಹಾಜರಿದ್ದ ವಕೀಲ ವೀರೇಂದ್ರ ಕುಮಾರ್ ಶರ್ಮ, ಸರ್ಕಾರ ಚುನಾವಣೆಗೆ ಮುಂಚೆ ಹಣ ಹಂಚುವುದಕ್ಕಿಂತ ಹೆಚ್ಚಿನ ಕ್ರೂರ ಕೆಲಸ ಇನ್ನೊಂದಿಲ್ಲ ಎಂದು ಹೇಳಿದ್ದರು. ಈ ಬಗ್ಗೆ ನೋಟಿಸ್ ಕಳಿಸಿರುವ ನ್ಯಾಯಾಲಯ, ನಾಲ್ಕು ವಾರಗಳ ಒಳಗೆ ಉತ್ತರಿಸುವಂತೆ ತಿಳಿಸಿದೆ.

# ರಾಣೇಬೆನ್ನೂರು : ಕರಾಟೆ ಸ್ಪರ್ಧೆಗೆ ಅನಧಿಕೃತ ತೀರ್ಪುಗಾರರು; ಜಿಲ್ಲಾ ಸಂಸ್ಥೆ ಪ್ರತಿಭಟನೆ

ರಾಣೇಬೆನ್ನೂರು, ಅ.6- ಕ್ರೀಡಾ ಇಲಾಖೆಯಿಂದ ಮಾನ್ಯತೆ ಪಡೆಯದ ತೀರ್ಪುಗಾರರನ್ನು ನೇಮಿಸಿಕೊಂಡು ಜಿಲ್ಲಾ ಮಟ್ಟದ ಶಾಲಾ-ಕಾಲೇಜು ಕರಾಟೆ ಸ್ಪರ್ಧೆಗಳನ್ನು ನಡೆಸುತ್ತಿದ್ದು, ಅದನ್ನು ಪ್ರತಿಭಟಿಸುತ್ತಿರುವುದಾಗಿ ಹಾವೇರಿ ಜಿಲ್ಲಾ ಕರಾಟೆ ಅಸೋಸಿಯೇಷನ್ ತಿಳಿಸಿದೆ.

ತರಬೇತಿ ಹೊಂದಿ, ರಾಜ್ಯ ಕರಾಟೆ ಸಂಸ್ಥೆಯ ಮನ್ನಣೆ ಪಡೆದ ನಮ್ಮ ಸಂಸ್ಥೆಯ ತೀರ್ಪುಗಾರರನ್ನು ಕರೆಯದೇ, ಅನಧಿಕೃತ ತೀರ್ಪುಗಾರರನ್ನು ನೇಮಿಸಿಕೊಂಡಿರುವ ಕಾರಣ ನಮಗೆ ಅನ್ಯಾಯವಾಗುತ್ತಿರುವ ಬಗ್ಗೆ ಜಿಲ್ಲಾಧಿಕಾರಿಗಳೂ ಸೇರಿದಂತೆ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ, ಅದನ್ನು ನಿರ್ಲಕ್ಷಿಸಿ ಇಂದು ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಸಂಸ್ಥೆಯವರು ವಿವರಿಸಿದ್ದಾರೆ.

ಸ್ಪರ್ಧೆಗಳ ಬಗ್ಗೆ ಜಿಲ್ಲೆಯಾದ್ಯಂತ ಪ್ರಚುರಪಡಿಸದೆ ತಮಗೆ ಬೇಕಾದ ಕ್ರೀಡಾಪಟುಗಳನ್ನೂ ಹಾಗೂ ಅನಧಿಕೃತ ತೀರ್ಪುಗಾರರನ್ನು ನೇಮಿಸಿಕೊಂಡು ಸ್ಪರ್ಧೆ ನಡೆಸಿ, ರಾಜ್ಯ ಸ್ಪರ್ಧೆಗೆ ತೆರಳಿದ ಜಿಲ್ಲೆಯ ಪಟುಗಳು ಯಾವುದೇ ಪದಕ ಗಳಿಸದೇ ಮರಳುತ್ತಿರುವುದು ನೋವಿನ ಸಂಗತಿಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ಪ್ರವಾಸಿಮಂದಿರದಲ್ಲಿ ನಡೆಸಿದ ಗೋಷ್ಠಿಯಲ್ಲಿ ಡಿಳ್ಳೆಪ್ಪ ಅನಿಂಗೇರ, ಮನೀಷಾ ಕಬ್ಬೂರ, ಸಮೀರ ಬಳ್ಳಾರಿ, ನಾಗರಾಜ ಸುಣಗಾರ, ದಾವಲ್ ಮಲ್ಲಿಕ ಮತ್ತಿತರರಿದ್ದರು.

# ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜ್ ಡೆಹರಾಡೂನ್ ಪ್ರವೇಶ ಪರೀಕ್ಷೆ

ದಾವಣಗೆರೆ, ಅ.6- ಜುಲೈ 2024ನೇ ಸಾಲಿನ ಅಧಿವೇಶನಕ್ಕಾಗಿ ಡೆಹರಾಡೂನ್‌ನಲ್ಲಿರುವ ರಾಷ್ಟ್ರೀಯ ಇಂಡಿಯಾನ್ ಮಿಲಿಟರಿ ಕಾಲೇಜ್‌ನಲ್ಲಿ 8ನೇ ತರಗತಿ ಪ್ರವೇಶ ಪರೀಕ್ಷೆಗೆ ಬಾಲಕ ಮತ್ತು ಬಾಲಕಿಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ 11 1/2 ವರ್ಷದಿಂದ 13 ವಯೋಮಾನದವರು ಅರ್ಜಿ ಸಲ್ಲಿಸಬಹುದು. ಅರ್ಹತಾ ಪ್ರವೇಶ ಪರೀಕ್ಷೆ ಬೆಂಗಳೂರು ಕೇಂದ್ರದಲ್ಲಿ ಡಿಸೆಂಬರ್ 2ರಂದು ನಡೆಯಲಿದೆ. ಇದೇ ದಿನಾಂಕ 15 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 080-25586459 ಹಾಗೂ ವೆಬ್ ಸೈಟ್ www.rimc.gov.in ನ್ನು ಸಂಪರ್ಕಿಸಲು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕ ಡಾ. ಸಿ.ಎ. ಹಿರೇಮಠ ತಿಳಿಸಿದ್ದಾರೆ.


**ಸೈಟುಗಳು ಮಾರಾಟಕ್ಕಿದೆ**
ಶಿವ-ಪಾರ್ವತಿ ಲೇಔಟ್ ಪೂರ್ವ-ದಕ್ಷಿಣ ಕಾರ್ನರ್ (4000 ಅಡಿ, 60 ಅಡಿ ರಸ್ತೆ) ಪೂರ್ವ 40x55, ಪೂರ್ವ-ಉತ್ತರ ಕಾರ್ನರ್ 55x65, ಪೂರ್ವ 40x60, 30x43, ಪಶ್ಚಿಮ 40x30, 30x55, 30x39, ಬನಶಂಕರಿ ಬಡಾವಣೆ ಪೂರ್ವ-ದಕ್ಷಿಣ ಕಾರ್ನರ್ 40x65
ಐಗೂರು ವಿಜಯಕುಮಾರ್
99457 02495

**ಸೈಟುಗಳು ಮಾರಾಟಕ್ಕಿವೆ**
ಸರ್ಕಾರಿ ನೌಕರರ ಬಡಾವಣೆ ಪಕ್ಕ ಪೂರ್ವ 30x40, 30x50, ಪಶ್ಚಿಮ 30x40, 30x50, ಮೋತಿ ಲೇಔಟ್ ಪಕ್ಕ ಪೂರ್ವ-ದಕ್ಷಿಣ ಕಾರ್ನರ್ 40x45, ಪಶ್ಚಿಮ-ದಕ್ಷಿಣ ಕಾರ್ನರ್ 40x60, ಪೂರ್ವ 40x60, 30x50, ಮಹಾಲಕ್ಷ್ಮಿ ಲೇಔಟ್ ಪೂರ್ವ 40x50 (ಕಾವೇರಿ ಅಪಾರ್ಟ್‌ಮೆಂಟ್ ಪಕ್ಕ)
ಐಗೂರು ವಿಜಯಕುಮಾರ್
99457 02495

**ಸೈಟುಗಳು ಮಾರಾಟಕ್ಕಿವೆ**
1) ವಿನಾಯಕ ಬಡಾವಣೆಯಲ್ಲಿ 45x48 South 2) 40x40 South ಡಾಲರ್ಸ್ ಕಾಲೋನಿಯಲ್ಲಿ 3) 30x40 North ಬನಶ್ರೀ ಲೇಔಟ್‌ನಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಕಛೇರಿಯಲ್ಲಿ ಸಹಾಯಕ ಹುದ್ದೆಗೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ: ಪದವಿ
ಶ್ರೀ ಹರ ಮ್ಯೂಸಿಕಲ್ ವರ್ಲ್ಡ್, ದಾವಣಗೆರೆ
81977 78488, 80733 92077

**ಮನೆ ಬಾಡಿಗೆಗೆ ಇದೆ**
ಕೆ.ಹೆಚ್. ರಂಗನಾಥ ಬಡಾವಣೆ, 17ನೇ ಕ್ರಾಸ್, 2 BHK ಇರುವ ಮೊದಲನೇ ಮಹಡಿ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
94494 34400

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
40x60 North, 50x80 North, 120 ಅಡಿ ರೋಡಿಗಿದೆ, 40x60, 40x60 South, 60 ಅಡಿ ರೋಡಿಗಿದೆ, 30x45 ಕಾರ್ನರ್.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗಿದೆ**
ಸುಸಜ್ಜಿತ, ವಾಸ್ತು ಪ್ರಕಾರ ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್, ಕಿಚನ್, 2 ಬೆಡ್ ರೂಂ, ಇರುವ ಪೂಜಾ ರೂಂ ಇರುವ ವಿಳೂವರೆ ಚದುರವುಳ್ಳ 24 ಗಂಟೆ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ ಬಾಡಿಗೆಗಿದೆ. ಸಂಪರ್ಕಿಸಿ.
99004 66607

**ತಕ್ಷಣ ಬೇಕಾಗಿದ್ದಾರೆ**
ನುರಿತ ಹಾಗೂ ಅನುಭವವುಳ್ಳ ಕಂಪ್ಯೂಟರ್ ಆಪರೇಟರ್ ಟ್ಯಾಲಿ ಬಿಲ್ಲಿಂಗ್ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ.
88844 46096

**ಹೋಟೆಲ್ ಬಾಡಿಗೆಗೆ ಇದೆ**
ಎಲ್ಲಾ ವ್ಯಾಪಾರಕ್ಕೂ ಸವಲತ್ತು ಇದೆ 10x20 ಚಿಗಟೇರಿ ಲಾಡ್ಜ್ ಪಕ್ಕ, ಹಳೇ ಬಸ್ ಸ್ಟ್ಯಾಂಡ್, ಪಿ.ಬಿ. ರಸ್ತೆ, ದಾವಣಗೆರೆ.
63604 40127
63628 63304

**ಮನೆ ಲೀಸ್‌ಗೆ ಇದೆ**
3 BHK ಇಂಡಿಪೆಂಡೆಂಟ್ ಹೌಸ್, 5ನೇ ಮೇನ್, 5ನೇ ಕ್ರಾಸ್, ಸೆಂಟ್ ಪೌಲ್ಸ್ ಕಾನ್ವೆಂಟ್ ರೋಡ್, ಪಿ.ಜೆ. ಬಡಾವಣೆ ದಾವಣಗೆರೆ.
88616 89590

**ತಕ್ಷಣ ಬೇಕಾಗಿದ್ದಾರೆ**
ಟಾಟಾ ಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಟಿ.ವಿ.ಎಸ್. MNC ಗಳಿಗೆ SSLC, PUC, Degree, Diploma ಆದವರು, ಸಂಬಳ - 18000 - 56000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ.
90361 25229

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**ಮನೆ ಕ್ಲೀನಿಂಗ್**
ಬಾಡಿಗೆ ಕೊಡುವ ಮನೆಗಳನ್ನು ಬಾತ್ ರೂಂಗಳನ್ನು ಆಸಿಡ್ ವಾಷ್ ಮಾಡಕೊಡಲಾಗುವುದು.
99863 61250, 80730 24690

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ.**
ಸರ್ಕಾರಿ ನೌಕರರ ಬಡಾವಣೆಯಲ್ಲಿ ಬಿ ಬ್ಲಾಕ್ 30x50 ಪೂರ್ವ, 30x40 ಪೂರ್ವ, 30x51 ಉತ್ತರ, 30x40 ಪಶ್ಚಿಮ, ಎಸ್.ಎಸ್. ಬಡಾವಣೆಯ ಬಿ ಬ್ಲಾಕ್‌ನಲ್ಲಿ 40x60 ದಕ್ಷಿಣ, ಶ್ರೀ ಸಾಮಾನ್ಯದಲ್ಲಿ 30x43, ಉತ್ತರ ಬೈಪಾಸ್ ಸರ್ವೀಸ್ ರಸ್ತೆಗೆ ಕುಬೇರ ಹೋಟೆಲ್ ಹತ್ತಿರ 30x55 ದಕ್ಷಿಣ (ಕಮರ್ಷಿಯಲ್) ಸೈಟ್ ಮಾರಾಟಕ್ಕೆ ಇದೆ. - ಸಂಪರ್ಕಿಸಿ. ಸುರೇಶ್ ಪಿ.ಎಸ್. ಶಾಮನೂರು
84314 00907

**ಸೈಟುಗಳು ಮಾರಾಟಕ್ಕಿವೆ**
30x40, 30x40 West ಅಕ್ಕ-ಪಕ್ಕ, SS 'A' Block ನಲ್ಲಿ 30x40 North, 30x40 East Corner ಗ್ಲಾಸ್ ಹೌಸ್ ಹತ್ತಿರ, 70x62 ಕಾರ್ನರ್ ಡಾಲರ್ಸ್ ಕಾಲೋನಿಯಲ್ಲಿ,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗೆ ಇದೆ**
ವಿನೋಬನಗರ 1ನೇ ಮುಖ್ಯ ರಸ್ತೆ, 2ನೇ ಕ್ರಾಸ್, ಶಂಭುಲಿಂಗ ಟೆಂಪಲ್ ಎದುರು ಮೊದಲನೇ ಮಹಡಿಯಲ್ಲಿ, 2 ಬೆಡ್ ರೂಂ ಮುನ್ಸಿಪಲ್ ಹಾಗೂ ಬೋರ್ ವೆಲ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
98804 38541, 89041 34197

**HOUSE TO LET**
3 BHK, #2720/18, 1st Floor, Behind Kalleshwara apartment, `15th cross, Anjaneya Extension, Davangere.
87928 83134, 94489 48279

**ಬೇಕಾಗಿದ್ದಾರೆ**
ಹುದ್ದೆ : ಎಸ್.ಡಿ.ಸಿ
ವಿದ್ಯಾರ್ಹತೆ : ಪಿ.ಯು.ಸಿ
ಜೊತೆಗೆ ಕನ್ನಡ ಡಿ.ಟಿ.ಪಿ ಅನುಭವ.
ಆಸಕ್ತರು ಸಂಪರ್ಕಿಸಿ:
94804 56888

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಕೆಲಸಕ್ಕೆ ಬೇಕಾಗಿದ್ದಾರೆ**
ಡಿಟಿಪಿ, ಫೋಟೋಶಾಪ್ ಮತ್ತು ವೀಡಿಯೋ ಎಡಿಟಿಂಗ್‌ನ ಅನುಭವವುಳ್ಳ ಯಾವುದೇ ವಿದ್ಯಾರ್ಹತೆ ಹೊಂದಿರುವ ಆಸಕ್ತ ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ.
ಅಭಿಷೇಕ್ ಟಿಂಬರ್ ಅಂಡ್ ಸಾಮಿಲ್
ಆರ್‌ಎಂಸಿ ಲಿಂಕ್ ರೋಡ್, ಬಂಬೂ ಬಜಾರ್, ದಾವಣಗೆರೆ.
99727 51777, 99721 31777
82770 57777

**ಸೈಟ್ ಮಾರಾಟಕ್ಕಿದೆ**
ಪಿ.ಬಿ. ರೋಡ್, Hyundai Car Show room ಹಿಂಭಾಗ ಬಸವನಗೌಡ ಬಡಾವಣೆ, ಆವರಗೆರೆ.
30x46 ಉತ್ತರ, 30x46 ದಕ್ಷಿಣ
1850 per sq
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ಆಸಕ್ತರು ಸಂಪರ್ಕಿಸಿ :
Acharya Realtors
826 826 7878

**ಕೆಲಸಕ್ಕೆ ಬೇಕಾಗಿದ್ದಾರೆ**
ವೆಜ್ ಮತ್ತು ನಾನ್‌ವೆಜ್ ಅಡುಗೆಯಲ್ಲಿ ಅನುಭವವುಳ್ಳ ಹೆಂಗಸರು (4+2) = 6 ಜನಕ್ಕೆ ಅಡಿಗೆ ಮಾಡಲು ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ
ಅಭಿಷೇಕ್ ಟಿಂಬರ್ ಅಂಡ್ ಸಾಮಿಲ್
ಆರ್‌ಎಂಸಿ ಲಿಂಕ್ ರೋಡ್, ಬಂಬೂ ಬಜಾರ್, ದಾವಣಗೆರೆ.
99727 51777
82770 57777

**ಮನೆ ಲೀಸ್‌ಗೆ ಇದೆ**
24ನೇ ವಾರ್ಡ್‌ನ #337/101, ರಲ್ಲಿ 2BHK ಮನೆ ಲೀಸ್‌ಗೆ ಇದೆ. ಗಣೇಶ ಲೇಔಟ್, ದಾವಣಗೆರೆ.
98800 56262

**ಬೇಕಾಗಿದ್ದಾರೆ**
ಬೇಕರಿ ಕೌಂಟರ್ ನಲ್ಲಿ ಕೆಲಸ ಮಾಡಲು ಯುವಕರು / ಯುವತಿಯರು ಹಾಗೂ ಪಾರ್ಟ್ ಟೈಮ್ ಅಕೌಂಟೆಂಟ್ ಬೇಕಾಗಿದ್ದಾರೆ.
ವಿಳಾಸ: ವಿದ್ಯಾನಗರ, ದಾವಣಗೆರೆ.
74113 99485

**ಪಾರ್ಟ್ನರ್ ಬೇಕಾಗಿದ್ದಾರೆ**
ನಮ್ಮ ಟ್ರೇಡಿಂಗ್ ಬ್ಯುಸಿನೆಸ್‌ಗೆ ಸ್ಲೀಪಿಂಗ್ ಪಾರ್ಟನರ್ ಆಗಿ ಪ್ರತಿ ತಿಂಗಳು ಉತ್ತಮ ಹಾಗೂ ಸ್ಥಿರವಾದ ಲಾಭ ಗಳಿಸಿ.
76767 50280

**TO LET - RENT ONLY**
2 BHK - East facing, First floor. Main Road, Swami Vivekananda Badavane, 7th Main, Single house in First floor With Western & Indian toilet. Rent Only, No lease.
M : 94482 01483

**ಬೇಕಾಗಿದ್ದಾರೆ**
ಯಾವುದೇ ಪದವಿಯೊಂದಿಗೆ ಇಂಗ್ಲಿಷ್ ಭಾಷೆಯಲ್ಲಿ ಮತ್ತು ಕಂಪ್ಯೂಟರ್ ಅನುಭವವುಳ್ಳ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ.
99644 14199, 99806 62860

**ಬಾಡಿಗೆಗೆ ಇದೆ**
ರೆಡಿ ಡಾಬಾ ಬಾಡಿಗೆಗೆ ಇದೆ.
90080 60660

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹಾರ ಸಟೀಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಆಟೋಮೊಬೈಲ್ಸ್ ಅಂಗಡಿಗೆ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
73380 33337


**WANTED**
Telecaller Female
Field work Part Time
Male or Female
Office work - Female, SSLC to PUC
Helper Girls
Age : 19 to 29 years
79751 07268

**ಸೈಟು ಮಾರಾಟಕ್ಕಿದೆ**
(KHB) ಕರ್ನಾಟಕ ಗೃಹ ಮಂಡಳಿ 40 ಅಡಿ ರಸ್ತೆಗೆ ಬರುವಂತಹ 40x60 ಪೂರ್ವ ದಿಕ್ಕಿನ ಸೈಟ್ ಮಾರಾಟಕ್ಕಿದೆ.
87622 85869, 76763 81314

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆಯ ಪಿ ಬಿ ರಸ್ತೆಯಲ್ಲಿರುವ ಜೈನ್ ಟೆಂಪಲ್ ಹಿಂಭಾಗದಲ್ಲಿ ಪಿಬಿ ರಸ್ತೆ ಹಾಗೂ NH-4 ರಸ್ತೆಗೆ ಹೊಂದಿಕೊಂಡಂತೆ ನಿರ್ಮಿಸಲಾಗುತ್ತಿರುವ ನಿವೇಶನಗಳನ್ನು ಸುಲಭ 3 ಕಂತುಗಳಲ್ಲಿ prebooking ಮಾಡಿಕೊಳ್ಳಲಾಗುತ್ತಿದೆ. ಆಸಕ್ತರು ಈ ಕೆಳಗಿನ ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.
90192 33241, 90198 88512

**ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ**
GJ ಕಾಸ್ಮೆಟಿಕ್ ಪ್ಯಾಲೇಸ್
(ಮಾಮಾಸ್ ಜಾಯಿಂಟ್ ರಸ್ತೆ)
ಹುಡುಗಿಯರು ಬೇಕಾಗಿದ್ದಾರೆ.
ಫೋ. : 99019 69595

**ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ**
ಆಕರ್ಷಕ ಕಮೀಷನ್ ಹಾಗೂ ಆಕರ್ಷಕ ಬೋನಸ್ ನೀಡಲಾಗುವುದು.
ಸಂಪರ್ಕಿಸಿ : ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ - 577001
99004 38052, 97401 53513

**ಲೈಂಗಿಕ ನಿಶ್ಶಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**Finance Advisor**
Full Times Job's Female.
Job Role Telecaller
Work time : 9.30AM to 6.30 PM & every Sunday holiday.
Salary : 6,000 to 10,000 +Incentives.
Qualification : 10th to 12 PUC or Degree.
Age Limit : 19 to 29.
Freshers & experience call or whatsapp
77959 44991, 96201 50544

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಸೈಟುಗಳು ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ (40x51) ಪಶ್ಚಿಮ
2) ಕುಂದವಾಡ ಸ್ಯೆ. ನಂ. 44 (30x50) ಪಶ್ಚಿಮ, ನೈರುತ್ಯ ಮೂಲೆ
3) ಕುಂದವಾಡ ಸೈಟ್ ನಂ. 43 (30x50) ಪಶ್ಚಿಮ (ಅಕ್ಕ-ಪಕ್ಕ)
97404 47907

**AVOID MOSQUITOES**
Mosquito Net For Doors & Windowes.
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**WANTED TEACHERS**
Kids Campus International Pre School Davangere
Wanted : Teachers for Nursery. Fluency in English
99003 78196

**ಬೇಕಾಗಿದ್ದಾರೆ**
ಸಿಮೆಂಟ್ ಮಾರ್ಕೆಟಿಂಗ್‌ನಲ್ಲಿ ಆಸಕ್ತಿಯಿರುವ ಉತ್ಸಾಹಿ ಯುವಕರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು. ಸಂಪರ್ಕಿಸಿ :
ಆನಂದ ಹಾರ್ಡ್‌ವೇರ್ ಅಂಡ್ ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ**
ಪಾಪ್ಯುಲರ್ ಡ್ರೈವಿಂಗ್ ಸ್ಕೂಲ್ ಆಂಜನೇಯ ದೇವಸ್ಥಾನ ಹತ್ತಿರ, ಶಾಮನೂರಿನಲ್ಲಿ ಕಂಪ್ಯೂಟರ್ ಜ್ಞಾನವುಳ್ಳ ಮಹಿಳಾ ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ. ತಮ್ಮ ಬಯೋಡೆಟಾದೊಂದಿಗೆ ಮಧ್ಯಾಹ್ನ 3 ರಿಂದ 7ರ ಒಳಗಾಗಿ ಸಂಪರ್ಕಿಸಿ : ವಿವಾಹಿತ ಮಹಿಳೆಯರಿಗೆ ಮೊದಲ ಆದ್ಯತೆ
ಕೆ.ಪಿ. ನಾಗೇಂದ್ರ, ನಿವೃತ್ತ ಎಆರ್‌ಟಿಓ
ಮೊ. : 96862 60144

# ರಾಜರಾಜೇಶ್ವರಿ ವಿದ್ಯಾಸಂಸ್ಥೆಯಲ್ಲಿ ಗಾಂಧೀಜಿ ಜಯಂತಿ



**ಮಲೇಬೆನ್ನೂರು**

ಮಲೇಬೆನ್ನೂರು, ಅ.6- ಒಡೆಯರ ಬಸವಾಪುರದ ಪಟೇಲ್ ಬಸಪ್ಪ ಎಜುಕೇಶನ್ ಅಸೋಸಿಯೇಷನ್ಸ್‌ನ ರಾಜ ರಾಜೇಶ್ವರಿ ವಿದ್ಯಾಸಂಸ್ಥೆ ವತಿಯಿಂದ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀಜಿಯವರ ಜಯಂತಿ ಹಮ್ಮಿಕೊಳ್ಳಲಾಗಿತ್ತು ಶ್ರೀಮತಿ ಸುಜಾತ ಶಿವಾನಂದಪ್ಪ, ಕಾರ್ಯದರ್ಶಿ ಜಿ. ಬಿ. ಶಿವಾನಂದಪ್ಪ, ಶಿಕ್ಷಕರಾದ ಶಾಂತಾ, ಭಾಗ್ಯ ರೇಣುಕಾ ಪ್ರಸನ್ನ, ಚಂದನ, ಲಕ್ಷ್ಮಿ ಕೊಮಾರನಹಳ್ಳಿ, ಜಯಲಕ್ಷ್ಮಿ, ಸಂಗೀತ ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯ ಶಶಿಧರ್ ಎಸ್ ಹಾಗೂ ಗಂಗಾಧರ್ ಬಿ. ಎಲ್. ನಿಟ್ಟೂರ್ ಭಜನ್ ಹಾಗೂ ಸರ್ವ ಧರ್ಮ ಸಮನ್ವಯ ಗೀತೆಗಳನ್ನು ಹಾಡಿದರು. ವಿದ್ಯಾರ್ಥಿನಿಯರಾದ ಪ್ರಿಯದರ್ಶಿನಿ, ಕೃಪಾ ಪಾಟೀಲ್, ಶಿಕ್ಷಕಿ ಕವಿತಾ ಕೊಮಾರನಹಳ್ಳಿ ಕಾರ್ಯಕ್ರಮ ನಿರೂಪಿಸಿದರು.

# ಜಿಲ್ಲಾ ಕ್ರೀಡಾಕೂಟ : ಮಿಲ್ಲತ್ ಕಾಲೇಜು ಪ್ರಥಮ





ದಾವಣಗೆರೆ, ಅ. 6- ಪದವಿ ಪೂರ್ವ ಕಾಲೇಜುಗಳ ಜಿಲ್ಲಾ ಮಟ್ಟದ ಕ್ರೀಡಾಕೂಟವನ್ನು ದಾವಣಗೆರೆ ಸಪ್ತಗಿರಿ ಕಾಲೇಜಿನವರು ಆಯೋಜಿಸಿದ್ದು ಗುಂಪು ಆಟಗಳಲ್ಲಿ ಟೆನ್ನಿಸ್, ವಾಲಿಬಾಲ್ ಪಂದ್ಯಗಳನ್ನು ನಡೆಸಲು ಎಸ್ ಕೆ ಎ ಎಚ್ ಮಿಲ್ಲತ್ ಪದವಿ ಪೂರ್ವ ಕಾಲೇಜಿಗೆ ಜವಾಬ್ದಾರಿ ನೀಡಿದ್ದು ಕ್ರೀಡಾಕೂಟದಲ್ಲಿ ಎಸ್.ಕೆ.ಎ.ಹೆಚ್. ಮಿಲ್ಲತ್ ಕಾಲೇಜಿನ ವಿದ್ಯಾರ್ಥಿಗಳು ಬಾಲಕಿಯರ ವಾಲಿಬಾಲ್ ಪಂದ್ಯದಲ್ಲಿ ಪ್ರಥಮ, ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಪಡೆದಿರುತ್ತಾರೆ. ಬಾಲಕರ ವಿಭಾಗದಲ್ಲಿ ಪ್ರಥಮ ಬಹುಮಾನ ಸಿದ್ದಗಂಗಾ ಪದವಿ ಪೂರ್ವ ಕಾಲೇಜ್, ದ್ವಿತೀಯ ಬಹುಮಾನ ಎಸ್ ಕೆ ಎಚ್ ಮಿಲ್ಲತ್ ಕಾಲೇಜ್ ವಿದ್ಯಾರ್ಥಿಗಳು ಪಡೆದಿರುತ್ತಾರೆ. ಸದರಿ ಟೆನ್ನಿಸ್, ವಾಲಿಬಾಲ್ ಪಂದ್ಯದಲ್ಲಿ ಆಯ್ಕೆ ಪ್ರಕ್ರಿಯೆ ಎಂದು ಆಯ್ಕೆಯಾಗುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ರಾಜ್ಯಮಟ್ಟದ ಪಂದ್ಯಗಳಲ್ಲಿ ಭಾಗವಹಿಸಲಿದ್ದಾರೆ.

# ಕರಾಟೆ ಸ್ಪರ್ಧೆಯಲ್ಲಿ ಪೃಥ್ವಿಗೆ ಪ್ರಥಮ ಸ್ಥಾನ



ದಾವಣಗೆರೆ, ಅ.6 - ಗೋಲ್ಡನ್ ಕರಾಟೆ ಸ್ಪೋರ್ಟ್ಸ್ ಅಸೋಸಿಯೇಷನ್ (ಧಾರವಾಡ) ಇವರ ಆಶ್ರಯದಲ್ಲಿ ಗದಗ ನಗರದಲ್ಲಿ ನಡೆದ ವಿಭಾಗ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ (ಕಾಟ ಮತ್ತು ಕಮಿಟ್ ವಿಭಾಗ) ದಾವಣಗೆರೆ ಹಳೆಪೇಟೆಯ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಏಳನೇಯ ತರಗತಿ ವಿದ್ಯಾರ್ಥಿ ಪೃಥ್ವಿ ಆರ್. ಪ್ರಥಮ ಬಹುಮಾನ ಪಡೆದು ಶತಮಾನದ ಶಾಲೆಗೆ ಕೀರ್ತಿ ತಂದಿದ್ದಾರೆ.

ಶಾಲೆಯ ಮುಖ್ಯೋಪಾಧ್ಯಾಯರಾದ ಲೋಕಣ್ಣ ಮಾಗೋಡ್, ಇಂಗ್ಲಿಷ್ ಶಿಕ್ಷಕಿ ನಮಿತಾ ಎಂ.ಎನ್, ಜಿಲ್ಲಾ ಶಾಲಾಭಿವೃದ್ದಿ ಮತ್ತು ಉಸ್ತುವಾರಿ ಸಮಿತಿಗಳ ಒಕ್ಕೂಟದ ಜಿಲ್ಲಾ ಪತ್ರಿಕಾ ಕಾರ್ಯದರ್ಶಿ ರಮೇಶ್ ಸಿ. ದಾಸರ್ ಅವರು ಪಾರಿತೋಷಕ ಪದಕ ಪ್ರಶಸ್ತಿ ಪತ್ರ ನೀಡಿ, ಅಭಿನಂದನೆ ಸಲ್ಲಿಸಿದರು.

ದೈಹಿಕ ಶಿಕ್ಷಕಿ ಸುಜಾತ, ಶಿಕ್ಷಕಿಯರಾದ ಕಲ್ಪನ, ಸಂಪತ್ ಕುಮಾರಿ, ವಿಜಯಕುಮಾರಿ, ಜಯಶ್ರೀ, ಎಸ್.ಡಿ.ಎಂ.ಸಿ. ಸದಸ್ಯ ರಂಗನಾಥ ಸಿ. ಹಾಗೂ ಇತರರು ಉಪಸ್ಥಿತರಿದ್ದರು.

## ರಾಣೇಬೆನ್ನೂರಿನಲ್ಲಿ ಇಂದು ರೈತರ ಸಭೆ

ಹನುಮನಹಳ್ಳಿಯ ಬಳಿ ನಿರ್ಮಾಣಗೊಂಡಿರುವ ಗೋಲ್ಡನ್ ಹ್ಯಾಚರೀಜ್ (ಚಿಕನ್ ಫ್ಯಾಕ್ಟರಿ)ಗೆ ಸಂಬಂಧಿಸಿದಂತೆ ರೈತರ ಮತ್ತು ಉದ್ಯೋಗಾಕಾಂಕ್ಷಿಗಳ ಸಭೆಯನ್ನು ಇಂದು ಬೆಳಿಗ್ಗೆ 10 ಕ್ಕೆ ಫ್ಯಾಕ್ಟರಿಯ ಆವರಣದಲ್ಲಿ ಕರೆಯಲಾಗಿದೆ ಎಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಮತ್ತು ಜಿಲ್ಲಾಧ್ಯಕ್ಷ ಈರಣ್ಣ ಹಲಗೇರಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಫೋಟೋಗ್ರಾಫರ್ಸ್ ಸಭೆ

ದಾವಣಗೆರೆ ತಾಲ್ಲೂಕು ಫೋಟೋ ಮತ್ತು ವಿಡಿಯೋಗ್ರಾಫರ್ ಸಂಘದ ಸಭೆಯನ್ನು ಇಂದು ಮಧ್ಯಾಹ್ನ 12.30ಕ್ಕೆ ಶ್ರೀನಿವಾಸ್ ಕಾಸಲ್ ಶೆಟ್ಟಿ ನೀರಿನ ಟ್ಯಾಂಕ್ ಉದ್ಯಾನವನದಲ್ಲಿ ಕರೆಯಲಾಗಿದೆ.

# ಬಿಐಇಟಿಯಲ್ಲಿ ಇಂದು ಅಂತರಿಕ್ಷ ಸಪ್ತಾಹ

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಾಹಾವಿದ್ಯಾಲಯ ಹಾಗೂ ಇಸ್ರೋದ ಅಂಗ ಸಂಸ್ಥೆ ಯು.ಆರ್.ರಾವ್ ಸೆಟಲೈಟ್ ಸೆಂಟರ್ ಸಹಭಾಗಿತ್ವದಲ್ಲಿ ವಿಶ್ವ ಅಂತರಿಕ್ಷ ಸಪ್ತಾಹ ವನ್ನು ಬಿಐಇಟಿ ಕಾಲೇಜಿನಲ್ಲಿ ಇಂದು ಹಮ್ಮಿಕೊಳ್ಳಲಾಗಿದೆ.

ಕಾಲೇಜು ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 9.15 ಗಂಟೆಗೆ ನಡೆಯುವ ಉದ್ಘಾಟನಾ ಕಾರ್ಯಕ್ರಮದಲ್ಲಿ ಯು. ಆರ್.ರಾವ್ ಉಪಗ್ರಹ ಕೇಂದ್ರದ ನಿರ್ದೇಶಕ ರಾಮನಗೌಡ ವೆಂಕನಗೌಡ ನಾಡಗೌಡ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಡಾ.ರಾಘವೇಂದ್ರ ಬಿ. ಕುಲಕರ್ಣಿ, ಡಿಡಿಪಿಐ ಬಿ.ಕೊಟ್ರೇಶ್, ಬಿಐಇಟಿ ಪ್ರಾಂಶುಪಾಲ ಡಾ.ಹೆಚ್.ಬಿ. ಅರವಿಂದ್ ಉಪಸ್ಥಿತರಿರಲಿದ್ದಾರೆ.

ಸಮಾರಂಭದ ಅಂಗವಾಗಿ ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮ, ಆಶುಭಾಷಣ ಸ್ಪರ್ಧೆ ಹಾಗೂ ಸ್ಮರಣ ಶಕ್ತಿ ಪರೀಕ್ಷಾ ಸ್ಪರ್ಧೆಗಳನ್ನು ಇಸ್ರೋದ ಯು.ಆರ್.ರಾವ್ ಸೆಟಲೈಟ್ ಸೆಂಟರ್ ವಿಜ್ಞಾನಿಗಳು ಆಯೋಜಿಸಿದ್ದು, ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ.

# ವಿಶ್ವದ ಶ್ರೇಷ್ಠ ವಿಜ್ಞಾನಿಗಳ ಪಟ್ಟಿಯಲ್ಲಿ ನಗರದ ಎಂ.ಎಂ. ವಿದ್ಯಾಲಯದ ಹಿರಿಯ ವಿದ್ಯಾರ್ಥಿಗಳು

ದಾವಣಗೆರೆ, ಅ.6- ಅಮೇರಿಕಾದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯ ಅಕ್ಟೋಬರ್ 2023ರಲ್ಲಿ ಪ್ರಕಟಿಸಿರುವ ವಿಶ್ವದ ಮೊದಲ ಶೇ. 2ರಷ್ಟು ಶ್ರೇಷ್ಠ ವಿಜ್ಞಾನಿಗಳ ಪಟ್ಟಿಯಲ್ಲಿ ನಗರದ ಎಂ.ಎಂ. ಶಿಕ್ಷಣ ಮಹಾವಿದ್ಯಾಲಯದ ಇಬ್ಬರು ಹಿರಿಯ ವಿದ್ಯಾರ್ಥಿಗಳು ಸತತವಾಗಿ ಮೂರನೇ ಬಾರಿಗೆ ಸ್ಥಾನ ಪಡೆದಿದ್ದಾರೆ. ಇವರಿಬ್ಬರ ಹೆಸರುಗಳು ಅಕ್ಟೋಬರ್ 2021 ಹಾಗೂ 2022ರಲ್ಲಿ ಪ್ರಕಟವಾದ ಪಟ್ಟಿಯಲ್ಲಿಯೂ ಸಹ ಸೇರ್ಪಡೆಯಾಗಿದ್ದವು.

ವಿಶ್ವದ ಸಂಶೋಧಕರು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೈಗೊಂಡ ಸಂಶೋಧನಾ ಪ್ರಕಟಣೆಗಳು, ಸಂಶೋಧನಾ ಉಲ್ಲೇಖಗಳು, ಸಹ ಲೇಖನಗಳು, ಹೆಚ್ ಇಂಡೆಕ್ಸ್ ಐ-ಟೆನ್ ಸೇರಿದಂತೆ ಹಲವು ಸಂಯೋಜಿತ ವಿವಿಧ ಮಾನದಂಡಗಳನ್ನು ಆಧರಿಸಿ ಸಂಶೋಧನಾ ತಂಡವು ಜಾಗತಿಕವಾಗಿ ಎರಡು ಲಕ್ಷಕ್ಕಿಂತ ಹೆಚ್ಚು ವಿಜ್ಞಾನಿಗಳನ್ನು ಗುರುತಿಸಿ ದತ್ತಾಂಶ ಪ್ರಕಟಿಸಿದೆ.

ಎಲ್ಸೆವಿಯರ ಸಂಸ್ಥೆಯ ಸಹಯೋಗದಲ್ಲಿ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಸಂಶೋಧನಾ ತಂಡ ಶೇ. 2ರಷ್ಟು ವಿಜ್ಞಾನಿಗಳ ಮಾಹಿತಿ ಪಟ್ಟಿ ಬಿಡುಗಡೆ ಮಾಡಿದ್ದಾರೆ.

ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಜೆ. ಮಂಜಣ್ಣ ಅನೇಕ ವರ್ಷಗಳಿಂದ ಪ್ರತಿಷ್ಠಿತ ಅಂತರರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟಿಸಿದ ಸಂಶೋಧನಾ ಲೇಖನಗಳನ್ನು, ಪಡೆದಿರುವ ಪೇಟೆಂಟ್‌ಗಳನ್ನು, ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡಿದ ಮಾರ್ಗದರ್ಶನ ಹಾಗೂ ರಾಷ್ಟ್ರೀಯ ಮಟ್ಟದ ಸಮ್ಮೇಳನ ಮತ್ತು ಸೆಮಿನಾರ್‌ಗಳಲ್ಲಿ ವಿಷಯ ತಜ್ಞರಾಗಿ ಸಕ್ರಿಯವಾಗಿ ಭಾಗವಹಿಸಿದ್ದುದನ್ನು ಪರಿಗಣಿಸಿ, ಇವರ ಹೆಸರನ್ನು ವಿಶ್ವದ ವಿಜ್ಞಾನಿಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಈಗಾಗಲೇ ಇವರ ಮಾರ್ಗದರ್ಶನದಲ್ಲಿ 10 ವಿದ್ಯಾರ್ಥಿಗಳು ಪಿಹೆಚ್.ಡಿ ಪದವಿ ಪಡೆದುಕೊಂಡಿದ್ದಾರೆ. ಡಾ.ಜೆ. ಮಂಜಣ್ಣನವರು ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಹೆಚ್.ಜಿ. ಹಳ್ಳಿಯವರು.

ದಾವಣಗೆರೆ ವಿಶ್ವವಿದ್ಯಾಲಯದ ಗಣಿತ ವಿಭಾಗದ ಪ್ರಾಧ್ಯಾಪಕ ಬಿ.ಸಿ. ಪ್ರಸನ್ನಕುಮಾರ್ ಅವರು 15 ವರ್ಷಗಳಿಂದ ಕೈಗೊಂಡ ಬೋಧನೆ ಹಾಗೂ ಸಂಶೋಧನೆಯ ಫಲವಾಗಿ 150 ಲೇಖನಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಇವರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳ ವಿಷಯ ಮಂಡನೆ ಗೋಷ್ಠಿಯ ಅಧ್ಯಕ್ಷತೆ ವಹಿಸಿರುತ್ತಾರೆ. ಅನೇಕರ ಕೋರಿಕೆಯ ಮೇರೆಗೆ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಉಪನ್ಯಾಸಗಳನ್ನು ನೀಡಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಐದು ವಿದ್ಯಾರ್ಥಿಗಳು ಪಿಹೆಚ್.ಡಿ ಪದವಿ ಪಡೆದುಕೊಂಡಿದ್ದಾರೆ.

ಇವರಿಬ್ಬರ ಸಾಧನೆಯನ್ನು ಮೆಚ್ಚಿ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ, ಸಾಣೇಹಳ್ಳಿಯ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ, ಶ್ರೀ ತರಳಬಾಳು ಜಗದ್ಗುರು ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿಯವರು ಹಾಗೂ ಎಂ.ಎಂ. ಕಾಲೇಜಿನ ಅವರ ವಿದ್ಯಾಗುರುಗಳು, ಪ್ರಾಚಾರ್ಯರು, ಬೋಧಕ, ಬೋಧಕೇತರ ಸಿಬ್ಬಂದಿಯವರು ಅಭಿನಂದನೆ ಸಲ್ಲಿಸಿದ್ದಾರೆ.

## ಕನ್ನಡ ಭಾಷಾ ಸೂಕ್ತಿಗಳನ್ನು ಪರಿಚಯಿಸುವ ಕೆಲಸ ಆಗಬೇಕು : ಕಣ್ಣನ್



ಸಾಣೇಹಳ್ಳಿ,ಅ.6- ಹೆಸರಾಂತ ವಾಗ್ಮಿ ಹಿರೇಮಗಳೂರು ಕಣ್ಣನ್ ಅವರು ಇಲ್ಲಿನ ಶ್ರೀಮಠಕ್ಕೆ ಭೇಟಿ ನೀಡಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಮಾತನಾಡಿದ ಕಣ್ಣನ್, ಕನ್ನಡ ನಾಡು-ನುಡಿ, ಸಾಹಿತ್ಯ, ಸಂಸ್ಕೃತಿಯ ವಿಚಾರಧಾರಣೆ. ಕನ್ನಡ ಮನಮಿಡಿಯುವ ಭಾಷೆಯಾಗಿದೆ. ಪ್ರತಿಯೊಬ್ಬರಿಗೂ ಭಾಷಾಭಿಮಾನ ಹೊಂದಬೇಕು. ನಾವು ಆಗಾಗ ಕೆಲವು ಗಾದೆಗಳನ್ನು ನಾಣ್ಣುಡಿಗಳನ್ನು ನಮ್ಮ ಮಾತಿನ ಮಧ್ಯದಲ್ಲಿ ಬಳಸುತ್ತೇವೆ. ಆ ಸಮಯದಲ್ಲಿ ಹೆಚ್ಚಾಗಿ ಬಳಕೆ ಮಾಡುವುದು ಆಂಗ್ಲ ಭಾಷೆಯ ಸೂಕ್ತಿಗಳೇ ಆಗಿವೆ.

ನಮ್ಮ ಭಾಷಿಕರಲ್ಲಿ ಉತ್ತಮವಾದ ಸೂಕ್ತಿಗಳು, ಹಿತವಚನಗಳು ಇಲ್ಲವೆಂದು ನಮ್ಮ ತಿಳಿವಳಿಕೆ. ಆದರೆ ನಿಮಗೆ ತಿಳಿದಿದೆಯೋ, ಇಲ್ಲವೋ ನಮ್ಮ ಕನ್ನಡ ಭಾಷೆಯಲ್ಲಿ ಉತ್ತಮವಾದ ಸೂಕ್ತಿಗಳು ಇವೆ. ಇವುಗಳನ್ನು ಕನ್ನಡಿಗರಿಗೆ, ಕರ್ನಾಟಕದವರಿಗೆ ಕನ್ನಡದ ಸೊಗಡು, ಪರಂಪರೆ, ಸಂಸ್ಕೃತಿ, ಸಂಸ್ಕಾರವನ್ನು ಪರಿಚಯಸುವ ಕಾರ್ಯವನ್ನು ಮಾಡಬೇಕು ಎಂದು ಕಣ್ಣನ್ ಹೇಳಿದರು.

ಈ ಸಂದರ್ಭದಲ್ಲಿ ಅನೇಕ ಕನ್ನಡದ ಚುಟುಕುಗಳನ್ನು ಹಾಡಿದರು. ಚಿಕ್ಕಮಗಳೂರಿನ ಉಪನ್ಯಾಸಕಿ ನಾಗಶ್ರೀ ತ್ಯಾಗರಾಜ್, ತ್ಯಾಗರಾಜ್ ಉಪಸ್ಥಿತರಿದ್ದರು.

# 10 ರಿಂದ ಬಿಸಿಯೂಟ ತಯಾರಕರ ಅನಿರ್ದಿಷ್ಟಾವಧಿ ಧರಣಿ

ದಾವಣಗೆರೆ, ಅ. 6- ಬಿಸಿಯೂಟ ತಯಾರಕರು ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಇದೇ 10 ರಿಂದ ಬೆಂಗಳೂರು ಫ್ರೀಡಂ ಪಾರ್ಕ್ ನಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಲಿದ್ದಾರೆ ಎಂದು ಬಿಸಿಯೂಟ ತಯಾರಕರ ಫೆಡರೇಷನ್ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಆವರಗೆರೆ ಚಂದ್ರು ತಿಳಿಸಿದ್ದಾರೆ.

ಎಐಟಿಯುಸಿ ಸಂಯೋಜಿತ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಷನ್ ರಾಜ್ಯ ಸಮಿತಿ ನೇತೃತ್ವದಲ್ಲಿ ಈ ಧರಣಿ ನಡೆಯಲಿದೆ.

ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಬಿಸಿಯೂಟ ತಯಾರಕರಿಗೆ ಮಾಸಿಕ 6,000 ರೂ. ವೇತನ ನೀಡುವುದಾಗಿ 6ನೇ ಗ್ಯಾರಂಟಿಯಾಗಿ ಭರವಸೆ ನೀಡಿತ್ತು. ಕಳೆದ ಸಾಲಿನ ಬಜೆಟ್‌ನಲ್ಲಿ ಬಸವರಾಜ ಬೊಮ್ಮಾಯಿ ಸರ್ಕಾರ ಒಂದು ಸಾವಿರ ರೂ. ಹೆಚ್ಚಳ ಮಾಡಿ ಘೋಷಣೆ ಮಾಡಿತ್ತು. ಆ ವೇತನವನ್ನು ಕೂಡಲೇ ಜಾರಿಗೊಳಿಸಬೇಕು. ಎಸ್‌ಡಿಎಂಸಿ ಅಧ್ಯಕ್ಷರ ಮತ್ತು ಮುಖ್ಯೋಪಾಧ್ಯಾಯರ ಬ್ಯಾಂಕ್ ಜಂಟಿ ಖಾತೆ ಮಾಡಿಸುವ ಆದೇಶವನ್ನು ಕೂಡಲೇ ರದ್ದುಗೊಳಿಸಿ, ಮೊದಲಿದ್ದ ಹಾಗೆ ಮುಖ್ಯೋಪಾಧ್ಯಾಯರ ಮತ್ತು ಅಡುಗೆಯವರ ಜಂಟಿ ಬ್ಯಾಂಕ್ ಖಾತೆಯನ್ನು ಮುಂದುವರೆಸಬೇಕು. ನಿವೃತ್ತಿಯಾದ ಬಿಸಿಯೂಟ ತಯಾರಕರಿಗೆ ಎರಡು ಲಕ್ಷ ರೂ. ಇಡಿಗಂಟು ಕೊಡಬೇಕು ಮತ್ತು ಅಡುಗೆ ಮಾಡುವ ಸಮಯದಲ್ಲಿ ಅನಾಹುತಗಳಾಗಿ ಮೃತಪಟ್ಟ ಅಡುಗೆಯವರಿಗೆ 25 ಲಕ್ಷ ಪರಿಹಾರ ಕೊಡಬೇಕು ಎನ್ನುವುದು ಸೇರಿದಂತೆ, ಇತರೆ ಬೇಡಿಕೆಗಳ ಈಡೇರಿಕೆಗಾಗಿ ಬೆಂಗಳೂರು ಫ್ರೀಡಂ ಪಾರ್ಕ್ ನಲ್ಲಿ ಅನಿರ್ದಿಷ್ಟಾವಧಿ ಧರಣಿ ಮಾಡುವ ಮೂಲಕ ಸರ್ಕಾರಕ್ಕೆ ಒತ್ತಾಯಿಸಲಾಗುವುದು ಎಂದು ಸಂಘಟನೆಯ ರಾಜ್ಯ ಅಧ್ಯಕ್ಷ ಹೊನ್ನಪ್ಪ ಮರೆಮ್ಮನವರ, ರಾಜ್ಯ ಖಜಾಂಚಿ ರುದ್ರಮ್ಮ ಬೆಳಗೆರೆ ಮತ್ತಿತರೆ ಪದಾಧಿಕಾರಿಗಳು ತಿಳಿಸಿದ್ದಾರೆ.

# ನಗರದಲ್ಲಿ ಇಂದು ಕಾಂಗ್ರೆಸ್ ಪ್ರತಿಭಟನೆ

ರಾಷ್ಟ್ರೀಯ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಬಿಜೆಪಿ ರಾವಣನಂತೆ ಚಿತ್ರಿಸಿ, ಕ್ರೂರವಾಗಿ ಬಿಂಬಿಸಿದೆ ಎಂದು ದೂರಿರುವ ಜಿಲ್ಲಾ ಕಾಂಗ್ರೆಸ್ ಪಕ್ಷವು ಬಿಜೆಪಿ ವಿರುದ್ಧ ಇಂದು ಬೆಳಿಗ್ಗೆ 11 ಕ್ಕೆ ಜಯದೇವ ವೃತ್ತದಲ್ಲಿ ಅಧ್ಯಕ್ಷ ಹೆಚ್.ಬಿ.ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಪ್ರತಿಭಟನೆ ಯನ್ನು ಹಮ್ಮಿಕೊಂಡಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ದಸರಾ ಕ್ರೀಡಾಕೂಟ : ದಾವಣಗೆರೆಗೆ ಪ್ರಥಮ ಸ್ಥಾನ





ದಾವಣಗೆರೆ, ಅ. 6 - ಕರ್ನಾಟಕ ಕ್ರೀಡಾ ಪ್ರಾಧಿಕಾರ (ಬೆಂಗಳೂರು)ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ (ದಾವಣಗೆರೆ) ಇವರುಗಳ ಸಂಯುಕ್ತ ಆಶ್ರಯದಲ್ಲಿ ಬೆಂಗಳೂರು ಗ್ರಾಮಾಂತರ ವಿಭಾಗ ಮಟ್ಟದ ದಸರಾ ಕ್ರೀಡಾಕೂಟ 2023- 24 ಬಾಸ್ಕೆಟ್ ಬಾಲ್ ಪಂದ್ಯಾವಳಿಗೆ ಎಂಟು ಜಿಲ್ಲೆಗಳು ಆಗಮಿಸಿದ್ದವು.

ಮಹಿಳೆಯರ ವಿಭಾಗದಲ್ಲಿ ಫೈನಲ್ ಪಂದ್ಯ ದಾವಣಗೆರೆ ಹಾಗೂ ಶಿವಮೊಗ್ಗ ತಂಡದ ನಡುವೆ 29-15 ಅಂಕಗಳ ಅಂತರದಿಂದ ದಾವಣಗೆರೆ ತಂಡ ಪ್ರಥಮ ಸ್ಥಾನ ಪಡೆದಿರುತ್ತದೆ ಹಾಗೂ ಶಿವಮೊಗ್ಗ ತಂಡ ದ್ವಿತೀಯ ಸ್ಥಾನ ಪಡೆದಿರುತ್ತದೆ.

ಪುರುಷರ ವಿಭಾಗದಲ್ಲಿ ಫೈನಲ್ ಪಂದ್ಯ ದಾವಣಗೆರೆ ಹಾಗೂ ಬೆಂಗಳೂರು ಗ್ರಾಮಾಂತರ ನಡುವೆ 51-38 ಅಂಕಗಳ ಅಂತರದಿಂದ ದಾವಣಗೆರೆ ತಂಡ ಜಯಗಳಿಸಿದೆ. ತಂಡಗಳಿಗೆ ಬಹುಮಾನ ವಿತರಿಸಿದ ದಾವಣಗೆರೆ ಬಾಸ್ಕೆಟ್ ಬಾಲ್ ಕ್ಲಬ್ ಗೌರವಾಧ್ಯಕ್ಷ ರಾಮಮೂರ್ತಿ ಸಿ., ಅಧ್ಯಕ್ಷ ಕಿರಣ್ ಕುಮಾರ್, ಉಪಾಧ್ಯಕ್ಷರೂ ಆದ 38ನೇ ವಾರ್ಡಿನ ಕಾರ್ಪೊರೇಟರ್ ಗಡಿಗುಡಾಳ್ ಮಂಜುನಾಥ್, ಕಾರ್ಯದರ್ಶಿ ವೀರೇಶ್ ಆರ್., ಖಜಾಂಜಿ ಪ್ರಸನ್ನ, ತರಬೇತುದಾರ ದರ್ಶನ್ ಹಾಗೂ ಸಚಿನ್ ತಂಡಗಳಿಗೆ ಬಹುಮಾನಗಳನ್ನು ನೀಡಿದರು.

# ಸಮಾಜದ್ರೋಹಿಗಳನ್ನು ಕ್ಷಮಿಸುವ ಮೂಲಕ ಸಮಾಜಕ್ಕೇನು ಸಂದೇಶ?

ಬೆಂಗಳೂರು, ಅ.6 - ಕಾಂಗ್ರೆಸ್ ಸರ್ಕಾರ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ತಮಗೆ ಮತ ಕೊಡುವ ಸಮಾಜ ವಿದ್ರೋಹಿಗಳನ್ನು ಕ್ಷಮಿಸುವ ಮೂಲಕ ಸಮಾಜಕ್ಕೇನು ಸಂದೇಶ ಕೊಡುತ್ತಾರೆ? ಎಂದು ರಾಜ್ಯದ ಮಾಜಿ ಸಚಿವ ಆರಗ ಜ್ಞಾನೇಂದ್ರ ಅವರು ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲ ಮುಸ್ಲಿಮರು ಕೆಟ್ಟವರೆಂದು ನಾನು ಹೇಳುತ್ತಿಲ್ಲ, ಎಲ್ಲ ಹಿಂದೂಗಳು ಒಳ್ಳೆಯವರೆಂದು ಹೇಳುವುದಿಲ್ಲ. ಆದರೆ ಹಿಂದೂ-ಮುಸ್ಲಿಮರ ನಡುವಿನ ಅಂತರ ಜಾಸ್ತಿ ಆಗಲು ಇದೆಲ್ಲ ಕಾರಣ ಆಗಬಾರದು ಎಂದು ನುಡಿದರು.


ರಾಗಿಗುಡ್ಡದಲ್ಲಿ ಹಿಂದೂ ಕುಟುಂಬಗಳನ್ನು ಹುಡುಕಿ ಹುಡುಕಿ ಹಲ್ಲೆ ಮಾಡಿದ್ದಾರೆ, ಹೊಡೆದಿದ್ದಾರೆ ಎಂದ ಅವರು, ಹೆಣ್ಮಕ್ಕಳ ಜೊತೆ ಕೆಟ್ಟದಾಗಿ ಮಾತನಾಡಿದ್ದಾರೆ. ಹೊರಗೆ ಬಂದರೆ ಏನ್ಮಾಡ್ತೀವಿ ನೋಡಿ ಎಂದು ಬೆದರಿಸಿದ್ದಾರೆ. ಹಿಂದೂಗಳ ವಾಹನವನ್ನಷ್ಟೇ ಹಾನಿಗೀಡು ಮಾಡಿದ್ದು, ಪಕ್ಕದಲ್ಲೇ ಇದ್ದ ಮುಸ್ಲಿಮರ ವಾಹನಗಳಿಗೆ ಏನೂ ಮಾಡಿಲ್ಲ. ಇದು ಏನನ್ನು ತೋರಿಸುತ್ತದೆ? ನೀವ್ಯಾಕೆ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಕೇಳಿದರು.

ಸರ್ಕಾರ ಇವತ್ತು ಹಿಂದೂ-ಮುಸ್ಲಿಮರು ನೆಮ್ಮದಿಯಿಂದ ಬದುಕಲು ಬಿಡುತ್ತಿಲ್ಲ. ಗಲಭೆ ಆದ ಸ್ಥಳಕ್ಕೆ ಗೃಹ ಸಚಿವರು ತೆರಳಿ ಜನರಲ್ಲಿ ವಿಶ್ವಾಸ ಮೂಡಿಸಬೇಕಿತ್ತು. ನಾವಿದ್ದೇವೆ; ಕಾನೂನು ಕೈಗೆತ್ತಿಕೊಂಡವರನ್ನು ಶಿಕ್ಷಿಸುತ್ತೇವೆ ಎಂದು ಹೇಳಬೇಕಿತ್ತಲ್ಲವೇ? ಎಂದೂ ಕೇಳಿದರು. ಸರ್ಕಾರವು ಶಾಂತಿ, ಸುವ್ಯವಸ್ಥೆ ಕಾಪಾಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಲಿ ಎಂದು ಒತ್ತಾಯಿಸಿದರು.

**RS ENTERPRISES**
Near New DC Office, Karur Industrial Area Davangere.
Job Requirement for Accountant 2 Years experienced in Accounts and GST Filing, Tally. Male or Female
Job Requirement for Telecalling and Kannada Typing Minimum 2 years Experience only for female.
**Send Resume or whatsapp & Contact No. : 78999 27530**

**ಓದುಗರ ಪತ್ರ**

# ಉಚಿತ ಶಿಕ್ಷಣ ಮತ್ತು ಆರೋಗ್ಯ ಬಡಜನರ ಸುಸ್ಥಿರ ಅಭಿವೃದ್ಧಿಗೆ ಪೂರಕ



ಇತ್ತೀಚಿನ ದಿನಗಳಲ್ಲಿ ಬಡ ಕುಟುಂಬಗಳ ಉಳಿತಾಯ ಕಡಿಮೆಯಾಗಿ, ಸಾಲಗಳು ದುಪ್ಪಟ್ಟಾಗುತ್ತಿವೆ. ದುಡಿದ ಹಣದಲ್ಲಿ ಹೆಚ್ಚು ಆರೋಗ್ಯ ಮತ್ತು ಶಿಕ್ಷಣಕ್ಕೆ ಖರ್ಚು ಮಾಡಬೇಕಾಗುತ್ತಿದೆ. ಪ್ರಸ್ತುತ ಸರ್ಕಾರ ನೀಡಿರುವ ಗ್ಯಾರಂಟಿ ಯೋಜನೆಗಳಿಗೆ 60 ಸಾವಿರ ಕೋಟಿ ಹಣ ಖರ್ಚಾಗುತ್ತಿದೆ. ಬಸ್ಸಿನ ಪ್ರಯಾಣ ಉಚಿತವಾದ್ದರಿಂದ ಅನಾವಶ್ಯಕ ಸುತ್ತಾಟಗಳಾಗ ಬಹುದು. ಈ ಯೋಜನೆಗಳನ್ನು ಒಂದೆರಡು ವರ್ಷಗಳ ಕಾಲ ಮುಂದುವರೆಸಿ ನಂತರ ಈ ಯೋಜನೆಗಳ ಬದಲು 60 ಸಾವಿರ ಕೋಟಿ ಹಣವನ್ನು ಮೂಲಭೂತ ಅವಶ್ಯಕತೆಗಳಾದ ಶಿಕ್ಷಣ ಮತ್ತು ಆರೋಗ್ಯಕ್ಕೆ ವಿನಿಯೋಗಿಸಿದರೆ ಬಡವರಿಗೆ ಜೀವನದುದ್ದಕ್ಕೂ ಸಹಕಾರಿಯಾಗುತ್ತದೆ. ಓಟಿಗಾಗಿ ಗ್ಯಾರಂಟಿ ಸ್ಕೀಂ ಗಳು ಬೇಕೆನ್ನುವುದಾದರೆ ಇದಲ್ಲದೆ ಬೇರೆ 60 ಸಾವಿರ ಕೋಟಿಯನ್ನು ಆರೋಗ್ಯ ಮತ್ತು ಶಿಕ್ಷಣಕ್ಕಾಗಿಯೇ ಮೀಸಲಿಡಲು ಸರ್ಕಾರ ಮುಂದೆ ಹೆಜ್ಜೆ ಇಡಲಿ. 'ಆರೋಗ್ಯವೇ ಭಾಗ್ಯ' ಶಿಕ್ಷಣ ಬಾಳು ನಡೆಸುವ ಜ್ಯೋತಿ'. ದೇಶದ ಜನರು ಆರೋಗ್ಯ, ಸುಶೀಕ್ಷಿತವಾಗಿದ್ದರೆ ಮಾನವ ಶಕ್ತಿ ಹಾಳಾಗದೆ ಸಮಾಜಕ್ಕೆ ಸಹಕಾರಿ ಯಾಗುತ್ತದೆ. ಮುಂದುವರೆದ ದೇಶಗಳು ಆರೋಗ್ಯ, ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದ್ದರಿಂದ ಆ ದೇಶಗಳು ಮತ್ತಷ್ಟು ಅಭಿವೃದ್ಧಿ ಪಥದಲ್ಲಿ ಸಾಗಲು ಸಹಕಾರಿ ಯಾಗಿದೆ. ದೆಹಲಿಯ ಆಪ್ ಸರ್ಕಾರ ಎಲ್ಲರಿಗೂ ಉಚಿತ ಆರೋಗ್ಯ, ಶಿಕ್ಷಣ ನೀಡಿ ವಿಶ್ವವಿಖ್ಯಾತವಾಗಿದೆ. ಅಲ್ಲದೆ ಆ ಪಕ್ಷದ ನಿರಂತರ ಗೆಲುವಿಗೂ ಕಾರಣವಾಗಿದೆ. ತಮಿಳು ನಾಡು ರಾಜ್ಯದಲ್ಲಿ ಉಚಿತ ಔಷಧಿ ವಿತರಣೆ ಯಶಸ್ವಿಯಾಗಿ ಬಡ ಜನರಿಗೆ ಬಹಳ ಅನುಕೂಲವಾಗಿದೆ. ಅದರಂತೆ ನಮ್ಮ ರಾಜ್ಯದಲ್ಲೂ ಮೂಲಭೂತ ಅವಶ್ಯಕತೆಗಳಾದ ಶಿಕ್ಷಣ ಮತ್ತು ಆರೋಗ್ಯವನ್ನು ಉಚಿತವಾಗಿ ನೀಡಬೇಕು.

**- ಶಿವನಕೆರೆ ಬಸವಲಿಂಗಪ್ಪ**
ಕರುಣಾ ಟ್ರಸ್ಟ್. ದಾವಣಗೆರೆ.

## ನಗರದಲ್ಲಿ ಇಂದು ಜಿಲ್ಲಾ ಪ್ರಾಥಮಿಕ, ಪ್ರೌಢಶಾಲೆಗಳ ಕ್ರೀಡಾಕೂಟ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ 14 ರಿಂದ 17ವರ್ಷದ ವಯೋಮಿತಿ ಒಳಗಿನ ಜಿಲ್ಲಾಮಟ್ಟದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕ್ರೀಡಾಕೂಟದ ಉದ್ಘಾಟನಾ ಸಮಾರಂಭವನ್ನು ಇಂದು ಬೆಳಿಗ್ಗೆ 10.30 ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಸಮಾರಂಭವನ್ನು ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ ಸಿದ್ದೇಶ್ವರ, ಶಾಸಕ ಶಾಮನೂರು ಶಿವಶಂಕರಪ್ಪ, ವಿಧಾನ ಪರಿಷತ್ ಸದಸ್ಯ ಕೆ.ಅಬ್ದುಲ್ ಜಬ್ಬಾರ್, ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಜಿ.ಪಂ. ಸಿಇಒ ಸುರೇಶ್ ಬಿ. ಇಟ್ನಾಳ್ ಸೇರಿದಂತೆ ಇತರರು ಉಪಸ್ಥಿತರಿರುವರು.

# ನಗರದಲ್ಲಿ ಇಂದು 'ವಿಶೇಷ ಸಾಂಸ್ಕೃತಿಕ ಸಂಜೆ'

ದಾವಣಗೆರೆ, ಅ. 6- ಜಿಲ್ಲಾ ಯೋಗ ಒಕ್ಕೂಟ, ಹಿಂದೂ ಮಹಾಗಣಪತಿ ಟ್ರಸ್ಟ್ ಹಾಗೂ ನೂಪುರ ಕಲಾ ಸಂಸ್ಥೆ ಆಶ್ರಯದಲ್ಲಿ ನಾಳೆ ದಿನಾಂಕ 7ರ ಶನಿವಾರ ಸಂಜೆ 5 ಗಂಟೆಗೆ ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿರುವ ಮಹಾಗಣಪತಿ ವೇದಿಕೆಯಲ್ಲಿ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ್ ರಾಯ್ಕರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂಜೆ 5 ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸಂಜೆ 6.30 ಕ್ಕೆ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಒಕ್ಕೂಟದ ಗೌರವಾಧ್ಯಕ್ಷ ಬಿ.ಸಿ. ಉಮಾಪತಿ, ನೂಪುರ ಕಲಾ ಸಂಸ್ಥೆಯ ಅಧ್ಯಕ್ಷೆ ಬೃಂದಾ ಶ್ರೀನಿವಾಸ್, ಆಯುಷ್ ನಿವೃತ್ತ ಅಧಿಕಾರಿ ಡಾ. ಸಿದ್ದೇಶ್ ಮತ್ತಿತರರು ಆಗಮಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಹಿಂದೂ ಮಹಾಗಣಪತಿ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಜೊಳ್ಳಿ ಗುರು, ರಾಣೇಬೆನ್ನೂರಿನ ಆಯೋಧ್ಯಾ ಗಣಪತಿ ಟ್ರಸ್ಟ್ ಅಧ್ಯಕ್ಷ ಪ್ರಕಾಶ್ ಬುರುಡಿಕಟ್ಟೆ ಅವರನ್ನು ಸನ್ಮಾನಿಸಲಾಗುವುದು. ಇದೇ ವೇಳೆ ಅಂತರರಾಷ್ಟ್ರೀಯ ಯೋಗಪಟುಗಳಿಂದ ಯೋಗ ನೃತ್ಯ, ಗಣಪತಿ ವಂದನೆ, ಭರತನಾಟ್ಯ ಕಾರ್ಯಕ್ರಮವನ್ನೂ ಸಹ ಆಯೋಜಿಸಲಾಗಿದೆ.

ನಂತರ ಭದ್ರಾವತಿ ಬ್ರದರ್ಸ್ ಬಿ. ಲೋಕನಾಥ್ ತಂಡದವರಿಂದ ವಿಶೇಷ ಸಂಗೀತ ರಸದೌತಣ ನಡೆಯಲಿದೆ. ರಾಂ ಅಂಡ್ ಕೋ ವೃತ್ತದಿಂದ ಹೈಸ್ಕೂಲ್ ಮೈದಾನದವರೆಗೆ ಟ್ರ್ಯಾಕ್ಟರ್‌ನಲ್ಲಿ ಸುಮಾರು 12 ಅಡಿಯ ಹೂವಿನ ಹಾರದ ಮೆರವಣಿಗೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಡಾ. ಸಿದ್ದೇಶ್, ಪ್ರಕಾಶ್ ಬುರಡಿಕಟ್ಟಿ, ಜೊಳ್ಳಿ ಗುರು, ಕುಮಾರ್, ಜಯಣ್ಣ ಬಾದಾಮಿ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ ಶಾಲೆ ಶಿಕ್ಷಣ ಇಲಾಖೆ
**ಪ್ರಾಚಾರ್ಯರು ಹಾಗೂ ಪದನಿಮಿತ್ತ ಉಪ ನಿರ್ದೇಶಕರ(ಅಭಿವೃದ್ಧಿ)ಕಛೇರಿ, ಡಯಟ್, ದಾವಣಗೆರೆ.**
ಆ.ಶಾ.5/TALP/LAPTOP/AIO C/ಟೆಂಡರ್/21/2022-23
ದಿನಾಂಕ: 30-09-2023
**ಟೆಂಡರ್ ಪ್ರಕಟಣೆ**
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ದಾವಣಗೆರೆ ಜಿಲ್ಲೆ ಈ ಕಛೇರಿ ವತಿಯಿಂದ ಜಿಲ್ಲೆಯ 10 ಕೆ.ಪಿ.ಎಸ್. ಶಾಲೆಗಳಿಗೆ ಕಂಪ್ಯೂಟರೋಪಕರಣಗಳನ್ನು ಪೂರೈಸುವ ಸಂಬಂಧ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತ ಅರ್ಹ ಬಿಡ್‌ದಾರರು ದಿನಾಂಕ: 14–10–2023 ರೊಳಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಯನ್ನು ಇ–ಪೋರ್ಟಲ್ ನಲ್ಲಿ ವೀಕ್ಷಿಸಬಹುದಾಗಿದೆ. ಟೆಂಡರ್ ರೆಫರೆನ್ಸ್ ಸಂಖ್ಯೆಗಳು: DPI/2023-24/IND0087. ಟೆಂಡರ್‌ನ ಒಟ್ಟು ಮೊತ್ತ: 50,84,000=00
ವಾಸಾಇ/ಡಿವಿಜಿ/269/ಕೆಎಸ್‌ಎಂಸಿಎ/2023–24
ಸಹಿ/– ಪ್ರಾಚಾರ್ಯರು ಹಾಗೂ ಪದನಿಮಿತ್ತ ಉಪ ನಿರ್ದೇಶಕರ(ಅಭಿವೃದ್ಧಿ)ಕಛೇರಿ, ಡಯಟ್, ದಾವಣಗೆರೆ.

## ವಿಡಿಯೋ ಕಾನ್ಫರೆನ್ಸ್, ಹೈಬ್ರಿಡ್ ಸೌಲಭ್ಯ ನಿರಾಕರಿಸದಂತೆ ಸುಪ್ರೀಂ ಕೋರ್ಟ್ ಸೂಚನೆ

ನವದೆಹಲಿ, ಅ. 6 – ಯಾವುದೇ ಹೈಕೋರ್ಟ್ ವಿಡಿಯೋ ಕಾನ್ಫರೆನ್ಸ್ ಇಲ್ಲವೇ ಹೈಬ್ರಿಡ್ ಮಾರ್ಗದ ಮೂಲಕ ವಿಚಾರಣೆಗೆ ಅವಕಾಶ ನಿರಾಕರಿಸಬಾರದು ಎಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.


ಹೈಕೋರ್ಟ್‌ಗಳಲ್ಲಿ ಹೈಬ್ರಿಡ್ ಮಾರ್ಗದಲ್ಲಿ ವಿಚಾರಣೆ ನಡೆಸುವ ಆಯ್ಕೆ ಕನಿಷ್ಠ ಪ್ರಮಾಣದಲ್ಲಿ ಬಳಕೆಯಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ಆಕ್ಷೇಪಿಸಿದೆ.

ಈ ಆದೇಶ ಹೊರ ಬಿದ್ದ ಎರಡು ವಾರಗಳ ನಂತರ ಯಾವುದೇ ಹೈಕೋರ್ಟ್ ವಿಡಿಯೋ ಕಾನ್ಫರೆನ್ಸ್ ಸೌಲಭ್ಯ ಇಲ್ಲವೇ ಹೈಬ್ರಿಡ್ ಮೂಲಕ ವಿಚಾರಣೆ ನಡೆಸುವ ಆಯ್ಕೆಯನ್ನು ವಕೀಲರು ಮತ್ತು ಕಕ್ಷಿದಾರರಿಗೆ ನಿರಾಕರಿಸುವಂತಿಲ್ಲ ಎಂದು ಪೀಠ ಹೇಳಿದೆ.

ಹೈಬ್ರಿಡ್ ಹಾಗೂ ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಸಂಬಂಧಿಸಿದಂತೆ ನಾಲ್ಕು ವಾರಗಳಲ್ಲಿ ಮಾರ್ಗಸೂಚಿಗಳನ್ನು ಪ್ರಕಟಿಸಬೇಕು ಎಂದೂ ಹೈಕೋರ್ಟ್‌ಗಳಿಗೆ ಸೂಚನೆ ನೀಡಲಾಗಿದೆ.

ನ್ಯಾಯಮೂರ್ತಿಗಳಾಗಲು ಬಯಸುವವರು ತಂತ್ರಜ್ಞಾನ ಸ್ನೇಹಿಯಾಗಿರಬೇಕು. ತಂತ್ರಜ್ಞಾನ ಈಗ ಆಯ್ಕೆಗೆ ಬಿಟ್ಟ ವಿಷಯವಲ್ಲ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಹೇಳಿದ್ದಾರೆ.

## ಗಾಂಧಿನಗರದಲ್ಲಿ ಕಾಂತಾರ ಗಣಪ : ಅನ್ನ ಸಂತರ್ಪಣೆ



ದಾವಣಗೆರೆ - ಗಾಂಧಿನಗರದ ಮುಖ್ಯರಸ್ತೆ, ಪೊಲೀಸ್ ಠಾಣೆ ಎದುರಿನಲ್ಲಿ 10 ಅಡಿ ಎತ್ತರದ ಕಾಂತಾರ ಗಣೇಶ ಮೂರ್ತಿಯನ್ನು ಅಪ್ಪು ಬಳಗದ ವತಿಯಿಂದ ಪ್ರತಿಷ್ಠಾಪಿಸಲಾಗಿದ್ದು, ಗಣೇಶೋತ್ಸವ ವನ್ನು ಆಚರಿಸಲಾಗುತ್ತಿದೆ.

ಗಣೇಶ ಮೂರ್ತಿ ತುಂಬಾ ವಿಶೇಷವಾಗಿದ್ದು, ನಾಳೆ 8 ರಂದು ವಿಸರ್ಜನೆ ಮಾಡಲಾಗುತ್ತಿದೆ, ಈ ಪ್ರಯುಕ್ತ ಇಂದು ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

# ಶ್ರೀಮಂತಿಕೆ ಬದುಕಿನ ಹಪಾಹಪಿ ಎಲ್ಲರಲ್ಲೂ ಹೆಚ್ಚಾಗಿದೆ

### ಮುರುಘಾ ಮಠದಲ್ಲಿ ನಡೆದ ಸಾಮೂಹಿಕ ಕಲ್ಯಾಣ ಮಹೋತ್ಸವದಲ್ಲಿ ಶ್ರೀ ಬಸವಪ್ರಭು ಸ್ವಾಮೀಜಿ



ಚಿತ್ರದುರ್ಗ, ಅ. 6- ಆಧುನಿಕತೆಯ ಭರಾಟೆಯಲ್ಲಿ ಶ್ರೀಮಂತಿಕೆಯ ಬದುಕು ಸಾಗಿಸ ಬೇಕೆಂಬ ಹಪಾಹಪಿ ಎಲ್ಲರಲ್ಲೂ ಹೆಚ್ಚಾಗಿದೆ. ಇದರಿಂದಾಗಿ ವ್ಯಕ್ತಿಯ ಸಂಬಂಧಗಳಿಗೆ ಪೆಟ್ಟು ಬೀಳುತ್ತಿದೆ ಎಂದು ಮುರುಘಾ ಮಠದ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ ನುಡಿದರು.

ಶ್ರೀ ಮುರುಘರಾಜೇಂದ್ರ ಮಠದಲ್ಲಿ ಗುರುವಾರ ನಡೆದ ಮೂವತ್ತೂರನೇ ವರ್ಷದ ಹತ್ತನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದ ಅಧ್ಯಕ್ಷತೆ ವಹಿಸಿ ಶ್ರೀಗಳು ಮಾತನಾಡಿದರು.

ಸತಿ-ಪತಿಗಳ ಜೀವನ ಕೊನೆಯ ತನಕ ಇರುತ್ತದೆ. ಹೆಂಡತಿಯನ್ನು ಸೇವಕಿಯಾಗಿ ನೋಡುವ ಮನೋ ಭಾವದಿಂದ ಪತಿ ಹೊರಬರಬೇಕು. ಸಂಸಾರದಲ್ಲಿ ಪ್ರತಿಷ್ಠೆ ಇಣುಕಿ ಹಾಕಿದಾಗ ಜೀವನ ಕೆಡುತ್ತದೆ. ಮನಸ್ಸಿಗೆ ನೋವಾಗುವ ಪ್ರಸಂಗಗಳು ಘಟಿಸಬಾರದು. ದ್ವೇಷದ ಜಾಗದಲ್ಲಿ ಪ್ರೀತಿ ಅರಳಬೇಕು. ಅತ್ತೆ - ಮಾವ - ಸೊಸೆ ಮಧ್ಯೆ ಪ್ರೀತಿ ವಾತ್ಸಲ್ಯ ಇರಬೇಕು. ಹಾಗಾದಾಗ ಸಂಸಾರದ ಹಾದಿ ಸುಗಮವಾಗಿರಲು ಸಾಧ್ಯ ಎಂದರು.

ಶ್ರೀ ಬಸವ ಪ್ರಸಾದ ಸ್ವಾಮಿಗಳು ಮಾತನಾಡಿ, ಚಿತ್ರದುರ್ಗ ನಗರವು ಐತಿಹಾಸಿಕವಾದುದು. ಅತ್ಯಂತ ಪ್ರಾಚೀನ ಪರಂಪರೆ ಹೊಂದಿರುವ ಶ್ರೀಮಠವು ಅಂತರರಾಷ್ಟ್ರೀಯ ಖ್ಯಾತಿ ಪಡೆದಿದೆ. ಇದೊಂದು ತಾಯಿ ಹೃದಯದ ನೆಲೆ. ನೂರಾರು ಸಾಧಕರ ನೆಲೆವೀಡು. ಇಲ್ಲಿ ನಡೆಯುತ್ತಿರುವ ಸಾಮೂಹಿಕ ಕಲ್ಯಾಣ ಮಹೋತ್ಸವ ವಿಶ್ವ ದಾಖಲೆಯಾಗಿದೆ. ಶ್ರೀಮಠಕ್ಕೆ ಒದಗಿರುವ ಎಡರು ತೊಡರುಗಳು ಆದಷ್ಟು ಬೇಗ ನಿವಾರಣೆಯಾಗಲಿ. ನೂತನ ವಧು-ವರರಲ್ಲಿ ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛ ಇಟ್ಟುಕೊಳ್ಳುವತ್ತ ಕಾಳಜಿ ಇರಲಿ. ದುಶ್ಚಟಗಳಿಂದ ದೂರವಿರಿ. ಉತ್ತಮ ವಿಚಾರಗಳು ನಿಮ್ಮೊಳಗೆ ಸದಾ ಇರಲಿ ಎಂದು ಹಾರೈಸಿದರು.

ಶ್ರೀ ಅನ್ನದಾನಿ ಭಾರತೀ ಅಪ್ಪಣ್ಣ ಸ್ವಾಮಿಗಳು ಮಾತನಾಡಿ, ಮಾನವನ ಬದುಕು ಅರಳಬೇಕಿದೆ. ಗೃಹಸ್ಥಾಶ್ರಮ ಪವಿತ್ರವಾದುದು. ಇಂದಿನ ಯುವಪೀಳಿಗೆ ದುಶ್ಚಟಗಳಿಗೆ ದಾಸರಾಗದೆ ಮುಂದಿನ ಪೀಳಿಗೆಗೆ ಮಾರ್ಗದರ್ಶಕರಾಗಬೇಕು. ಮಕ್ಕಳಿಗೆ ಉತ್ತಮ ಭವಿಷ್ಯವನ್ನು ನೀಡಬೇಕೆಂದರು.

ಶ್ರೀ ಬಸವ ಕುಂಬಾರ ಗುಂಡಯ್ಯ ಸ್ವಾಮಿಗಳು ವೇದಿಕೆಯಲ್ಲಿದ್ದರು. ನಿಪ್ಪಾಣಿಯ ಶ್ರೀ ಬಸವ ಮಲ್ಲಿಕಾರ್ಜುನ ಸ್ವಾಮಿಗಳು, ಚಿತ್ರದುರ್ಗದ ಶ್ರೀ ಬಸವ ಮುರುಘೇಂದ್ರ ಸ್ವಾಮಿಗಳು, ಈಚಲ ನಾಗೇನಹಳ್ಳಿಯ ಶ್ರೀ ಗೋವಿಂದ ಸ್ವಾಮಿಗಳು, ಪೈಲ್ವಾನ್ ತಿಪ್ಪೇಸ್ವಾಮಿ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ತೋಟಪ್ಪ ಉತ್ತಂಗಿ ಸಂಗಡಿಗರು ಪ್ರಾರ್ಥಿಸಿದರು. ಟಿ.ಪಿ. ಜ್ಞಾನಮೂರ್ತಿ ಸ್ವಾಗತಿಸಿದರು. ಪ್ರಕಾಶ ದೇವರು ನಿರೂಪಿಸಿದರು.

# ದೇಶದ ಸಂಸ್ಕೃತಿ ಉಳಿಯಲು ಮಹಿಳೆಯರ ಪಾತ್ರ ಮುಖ್ಯ

### ರಾಣೇಬೆನ್ನೂರು ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಅರುಣಕುಮಾರ ಪೂಜಾರ



ರಾಣೇಬೆನ್ನೂರು, ಅ.6- ನಮ್ಮ ದೇಶದ ಧರ್ಮ, ಆಚಾರ-ವಿಚಾರಗಳು ಹಾಗೂ ಸಂಸ್ಕೃತಿ ಉಳಿಯಬೇಕಾದರೆ, ಮಹಿಳೆಯರ ಪಾತ್ರ ಬಹಳ ಮುಖ್ಯವಾಗಿದೆ ಎಂದು ಮಾಜಿ ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ಇಲ್ಲಿಯ ಬಸವನಗುಡಿ ನಗರದ ಶ್ರೀ ಪಾಂಡುರಂಗ ರುಕುಮಾಯಿ ಮಂದಿರದ ಸಭಾಭವನದಲ್ಲಿ ಶುಕ್ರವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟ ಮಾರುತಿ ನಗರದ ವಲಯದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ ಸಾಮೂಹಿಕ ವರಮಹಾಲಕ್ಷ್ಮಿ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮನೆಯೇ ಮೊದಲ ಪಾಠಶಾಲೆಯಾಗಿದ್ದು, ತಾಯಂದಿರಿಂದ ನಮ್ಮ ದೇಶದ ಧರ್ಮದ ಬಗ್ಗೆ ಮಕ್ಕಳಿಗೆ ತಿಳಿಸಿಕೊಡುವ ಕಾರ್ಯವಾಗಬೇಕು. ಇದರಿಂದಾಗಿ ಧರ್ಮದ ತಳಹದಿಯಲ್ಲಿ ನಮ್ಮ ಮುಂದಿನ ಪೀಳಿಗೆ ಜೀವನ ಸಾಗಿಸುವಂತಾಗುತ್ತದೆ ಎಂದರು.

ಸಂಘ, ಸಂಸ್ಥೆಗಳು ಮಹಿಳೆಯರ ಆರ್ಥಿಕಾಭಿವೃದ್ಧಿಗೆ ಪೂರಕವಾಗಿದೆ. ಇದರ ಜೊತೆಗೆ ಮಹಿಳೆಯರು ಏಳಿಗೆಯ ಜೊತೆಗೆ ನಮ್ಮ ದೇಶದ ಸಂಸ್ಕೃತಿ ಬಿಂಬಿಸುವ ಕೆಲಸವನ್ನು ಧರ್ಮಸ್ಥಳ ಸಂಘ ಮಾಡುತ್ತಿರುವುದು ಶ್ಲಾಘನೀಯವಾಗಿದೆ ಎಂದರು.

ನಗರಸಭೆ ಸದಸ್ಯ ಪ್ರಕಾಶ್ ಬುರಡಿಕಟ್ಟಿ ಮಾತನಾಡಿ, ಮಹಿಳೆ ಮನೆಗೆ ಮಾತ್ರ ಸೀಮಿತವಲ್ಲ, ಸಮಾಜದ ಎಲ್ಲಾ ವರ್ಗಗಳಲ್ಲಿ ಮಹಿಳೆಯರು ತಮ್ಮ ಛಾಪು ಮೂಡಿಸಬಹುದೆಂದು ಸಹಕಾರಿ ಸಂಘಗಳು ತೋರಿಸಿ ಕೊಟ್ಟಿವೆ ಎಂದರು.

ಶಹರ ಠಾಣೆ ಪಿಎಸ್ಐ ಗಡೆಪ್ಪ ಗುಂಜಟಗಿ ಮಾತನಾಡಿ, ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಸಂಘ-ಸಂಸ್ಥೆಗಳು ಸಹಕಾರಿಯಾಗಲಿವೆ. ಮಹಿಳೆಯರು ತಮ್ಮ ಮಕ್ಕಳಿಗೆ ನಮ್ಮ ದೇಶದ ಸಂಸ್ಕೃತಿ ಹಾಗೂ ಇತಿಹಾಸ ತಿಳಿಸುವ ಕಾರ್ಯ ಮಾಡಬೇಕು, ಸಂಸ್ಕೃತಿ ಹಾಗೂ ಧಾರ್ಮಿಕತೆಯನ್ನು ಮಕ್ಕಳಲ್ಲಿ ಬೆಳೆಸುವ ಕಾರ್ಯ ಮಾಡಿದಾಗ ಮಾತ್ರ, ಸಮಾಜದಲ್ಲಿ ಶಾಂತಿ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದರು.

ಶ್ರೀ ಬಸವಶ್ರೀ ಗ್ರಾಮೀಣ ಸಂಘದ ಅಧ್ಯಕ್ಷೆ ಭಾರತಿ ಜಂಬಗಿ, ಸಂಸ್ಥೆ ಯೋಜನಾಧಿಕಾರಿ ಮಂಜುನಾಥ ಗೌಡ, ಯೋಗ ಶಿಕ್ಷಕ ಪಾಂಡುರಂಗ ಪೂಜಾರಿ ಮಾತನಾಡಿದರು,

ಸ್ಥಳೀಯ ಹಿರೇಮಠದ ಶನೈಶ್ಚರ ಮಂದಿರದ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸ್ವಾಭಿಮಾನಿ ಕರವೇ ಅಧ್ಯಕ್ಷ ನಿತ್ಯಾನಂದ ಕುಂದಾಪುರ, ಶಶಿಕಲಾ ಗೌಡಶಿವಣ್ಣನವರ, ಮಂಜುನಾಥ ಹೊಸಪೇಟೆ, ವೀರೇಶ ಹೆದ್ದೇರಿ, ಸಂಯೋಜಕಿ ಲಕ್ಷ್ಮಿ ವೆಂಕಟೇಶ, ರಮೇಶ, ಸೇವಾ ಪ್ರತಿನಿಧಿ ತಾರಾ ಹಿರೇಮಠ, ಸಮನ್ವಯ ಅಧಿಕಾರಿ ಶೋಭಾ, ಉಮಾ, ಉಮಾ ಗೌಡಶಿವಣ್ಣನವರ, ಶಿವಲೀಲಾ, ಭೂಮಿಕಾ, ವೀಣಮ್ಮ ಮತ್ತಿತರರು ಉಪಸ್ಥಿತರಿದ್ದರು.

## ಹರಿಹರದಲ್ಲಿ ನಾಳೆ ಬೃಹತ್ ಶೋಭಾಯಾತ್ರೆ



ಹರಿಹರ, ಅ.6- ನಗರದ ಹಿಂದೂ ಮಹಾಗಣಪತಿ ಸೇವಾ ಸಮಿತಿ ಹಾಗೂ ಹಿಂದೂ ಜಾಗರಣ ವೇದಿಕೆ ವತಿಯಿಂದ ಶ್ರೀ ಪೇಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದಲ್ಲಿ ಪ್ರತಿಷ್ಠಾಪನೆ ಮಾಡಿರುವ ಶ್ರೀ ಗಣೇಶ ಮೂರ್ತಿಯನ್ನು ನಾಡಿದ್ದು ದಿನಾಂಕ 8 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಬೃಹತ್ ಶೋಭಾಯಾತ್ರೆ ಮೂಲಕ ತುಂಗಭದ್ರಾ ನದಿಯಲ್ಲಿ ವಿಸರ್ಜನೆ ಮಾಡಲಾಗುವುದು ಎಂದು ಹಿಂದೂ ಮಹಾಗಣಪತಿ ಸೇವಾ ಸಮಿತಿಯ ಅಧ್ಯಕ್ಷ ಎ.ಬಿ. ವಿಜಯಕುಮಾರ್ ತಿಳಿಸಿದ್ದಾರೆ.

ಶೋಭಾಯಾತ್ರೆಯಲ್ಲಿ ಪಂಚ ಮಸಾಲಿ ಗುರುಪೀಠದ ಶ್ರೀಗಳು, ಕನಕ ಗುರುಪೀಠದ ಶ್ರೀಗಳು, ವಾಲ್ಮೀಕಿ ಗುರುಪೀಠ ಶ್ರೀಗಳು, ನಂದಿಗುಡಿ ಗುರುಪೀಠದ ಶ್ರೀಗಳು, ವೇಮಾನಂದ ಗುರುಪೀಠ ಶ್ರೀಗಳು, ನೇಕಾರ ಗುರು ಪೀಠ ಶ್ರೀಗಳು ಸೇರಿದಂತೆ, ವಿವಿಧ ಸಮಾಜದ ಗುರು ಪೀಠಾಧ್ಯಕ್ಷರನ್ನು ಆಹ್ವಾನಿಸಲಾಗಿದೆ.

ಅಲ್ಲದೇ, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್, ಎಸ್. ರಾಮಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಬಿಜೆಪಿ ಪಕ್ಷದ ಮುಖಂಡ ಚಂದ್ರಶೇಖರ್ ಪೂಜಾರ್, ಕಾಂಗ್ರೆಸ್ ಪಕ್ಷದ ಮುಖಂಡ ನಂದಿಗಾವಿ ಶ್ರೀನಿವಾಸ್, ಹಿಂದೂ ಜಾಗರಣ ವೇದಿಕೆಯ ಪ್ರಾಂತ್ಯದ ಸಂಚಾಲಕ ಸತೀಶ್ ಪೂಜಾರ್ ಸೇರಿದಂತೆ, ಹಲವಾರು ಪ್ರಮುಖ ನಾಯಕರ ಸಮ್ಮುಖದಲ್ಲಿ ಶೋಭಾಯಾತ್ರೆಗೆ ಚಾಲನೆ ನೀಡಲಾಗುತ್ತದೆ.

ಮೆರವಣಿಗೆ ಪೇಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದಿಂದ ಆರಂಭಗೊಂಡು, ರಾಜ ಬೀದಿಗಳ ಮುಖಾಂತರ ಹಾದು ತುಂಗಭದ್ರಾ ನದಿಗೆ ಅಂತ್ಯ ಮಾಡಲಾಗುತ್ತದೆ ಎಂದರು.

ಮೆರವಣಿಗೆಯಲ್ಲಿ ಯುವಕರಿಗೆ ಮತ್ತು ಯುವತಿಯರಿಗೆ ಪ್ರತ್ಯೇಕವಾಗಿ 2 ಡಿ.ಜೆ. ಸೌಂಡ್ ಸಿಸ್ಟಮ್ ವ್ಯವಸ್ಥೆ ಮತ್ತು ಸ್ಥಳೀಯ ಕಲಾ ಮೇಳಗಳಾದ ಡೊಳ್ಳು, ಹಲಗೆ, ಸಮಾಳ, ನಂದಿಕೋಲು ಡ್ರಮ್ ಸೆಟ್ ಸೇರಿದಂತೆ, ಒಟ್ಟು 8 ಜಾನಪದ ಕಲಾ ಮೇಳಗಳು ಭಾಗವಹಿಸಿ ಮೆರವಣಿಗೆಗೆ ಮೆರಗನ್ನು ನೀಡಲಿವೆ.

ಗಾಂಧಿ ಮೈದಾನದಲ್ಲಿ ಸುಮಾರು 15 ಸಾವಿರಕ್ಕೂ ಹೆಚ್ಚು ಭಕ್ತರಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಸ್ಥಳೀಯವಾಗಿ 6 ಕ್ಕೂ ಹೆಚ್ಚು ಸೇವಾ ಸಂಸ್ಥೆಗಳು ಸ್ವಯಂ ಪ್ರೇರಿತರಾಗಿ ಮೆರವಣಿಗೆಯ ಆಯ ಕಟ್ಟಿನ ಸ್ಥಳದಲ್ಲಿ ಪ್ರಸಾದ ವ್ಯವಸ್ಥೆ ಮಾಡಲಿದ್ದಾರೆ.

ಈ ಸಂದರ್ಭದಲ್ಲಿ ಹಿಂದೂ ಮಹಾಗಣಪತಿ ಸೇವಾ ಟ್ರಸ್ಟ್ ಅಧ್ಯಕ್ಷ ಬಸವನಗೌಡ, ಹಿಂದೂ ಜಾಗರಣ ವೇದಿಕೆಯ ಸಂಚಾಲಕ ದಿನೇಶ್, ಕಾರ್ಯದರ್ಶಿ ಸಂತೋಷ ಗುಡಿಮನಿ, ಉಪಾಧ್ಯಕ್ಷ ಸ್ವಾತಿ ಹನುಮಂತಪ್ಪ, ಖಜಾಂಚಿ ಗಿರೀಶ್ ಗೌಡ, ರಟ್ಟಿಹಳ್ಳಿ ಮಂಜುನಾಥ್, ಚಂದ್ರಕಾಂತ, ಚಂದನ್ ಮೂರ್ಕಲ್, ಅದ್ವೈತ ಶಾಸ್ತ್ರಿ, ಶಿವಕುಮಾರ್, ಮಹೇಶ್, ಅರ್ಚಕರು ವೆಂಕಟೇಶ್ ಇತರರು ಹಾಜರಿದ್ದರು.

## ನಗರದಲ್ಲಿ ಸಿಂಪೋಲೋ ಸೆರಾಮಿಕ್ಸ್ ಶಾಪೆ ಉದ್ಘಾಟನೆ



ದಾವಣಗೆರೆ, ಅ.6- ನಗರದ ಪಿ.ಬಿ. ರಸ್ತೆಯಲ್ಲಿ ನೂತನವಾಗಿ ಆರಂಭವಾಗಿರುವ ಸಿಂಪೋಲೋ ಸೆರಾಮಿಕ್ಸ್ ಶಾಪೆಯನ್ನು ಗುರುವಾರ ಶಾಸಕ ಶಾಮನೂರು ಶಿವಶಂಕರಪ್ಪ ಉದ್ಘಾಟಿಸಿದರು. ಈ ವೇಳೆ ಹಿರಿಯ ಕೈಗಾರಿಕೋದ್ಯಮಿ ಅಥಣಿ ವೀರಣ್ಣ, ಅಂದನೂರು ಸೆರಾಮಿಕ್ಸ್ ಮಾಲೀಕರಾದ ಅಂದನೂರು ಬಾಬಣ್ಣ ಮತ್ತು ಅಂದನೂರು ಅಕ್ಷಯ್ ಹಾಗೂ ಕುಟುಂಬದವರು, ಎಂಜಿನಿಯರ್ ಅಸೋಸಿಯೇಷನ್, ಪ್ರಾಕ್ಟಿಸಿಂಗ್ ಅಂಡ್ ಫಾರಂ ಆಫ್ ಇಂಜಿನಿಯರಿಂಗ್ ಅಸೋಸಿಯೇಷನ್ ಪದಾಧಿಕಾರಿಗಳು ಈ ಸಂದರ್ಭದಲ್ಲಿದ್ದರು.

## ಸಾಕ್ಷರತಾ ಸಮಿತಿ ಕಾರ್ಯದರ್ಶಿ ಡಾ. ಐ.ಎ. ಲೋಕಾಪುರ ನಿಧನ



ಹರಿಹರ, ಅ. 6- ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಮಕ್ಕಳ ಸಾಹಿತ್ಯ ವೇದಿಕೆ ಕಾರ್ಯದರ್ಶಿ ಹಾಗೂ ಎರಡೂ ಜಿಲ್ಲೆಗಳ ಸಾಕ್ಷರತಾ ಸಮಿತಿಗಳ ಕಾರ್ಯದರ್ಶಿ ಡಾ. ಐ.ಎ. ಲೋಕಾಪುರ ಅವರು ಹಾವೇರಿಯಲ್ಲಿ ನಿನ್ನೆ ನಿಧನರಾದರು.

ಲೋಕಾಪುರ ಅವರ ಪೂರ್ಣ ಹೆಸರು ಈರಣ್ಣ ಅಮರಪ್ಪ ಲೋಕಾಪುರ ಆಗಿದ್ದು, ಅವರು ಸಾಕ್ಷರತಾ ಸಮಿತಿಯಲ್ಲಿ ಅಪಾರವಾಗಿ ಶ್ರಮಿಸಿದ್ದರು. ದಾವಣಗೆರೆ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಯಾಗಿಯೂ ಸೇವೆ ಸಲ್ಲಿಸಿದ್ದರು. ವಿವಿಧ ಜಿಲ್ಲೆಗಳ ಸಾಕ್ಷರತಾ ಪ್ರಗತಿ ಹೆಚ್ಚಿಸಲು ಹಾಗೂ ಆದಾಪುರ ಗ್ರಾಮ ಆದರ್ಶಪುರವಾಗಲು ಕಾರಣರಾಗಿದ್ದರು. ಲೋಕಾಪುರ ನಿಧನಕ್ಕೆ ಸಾಮಾಜಿಕ ಕಾರ್ಯಕರ್ತೆ ಆಲಿಸ್ ಸಾಲೋಮನ್, ಅಕ್ಷರ ಕಾರ್ಯಕರ್ತರಾದ ಎಚ್.ಎಂ.ಸದಾನಂದ, ಸಿದ್ದಯ್ಯ ಒಡೆಯರ್, ಎಂ. ಶಿವಕುಮಾರ್, ಲೀಲಾ, ಜಯಲಕ್ಷ್ಮಿ, ವಾಸನ ಜಗದೀಶ್, ಶಿವಮೂರ್ತಿಸಿಂಗ್, ಮಹಾರುದ್ರಪ್ಪ ಮೆಣಸಿನಕಾಯಿ, ಸುಬ್ರಮಣ್ಯ ನಾಡಿಗೇರ್, ಕೆಂಚವೀರಪ್ಪ, ಲೋಕಿಕೆರೆ ಅಂಜಿನಪ್ಪ, ಬಾನಪ್ಪ ಮತ್ತಿತರರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

## 17ರಂದು ನಗರದಲ್ಲಿ ದಾಂಡಿಯಾ ಗಾರ್ಬಾ

ದಾವಣಗೆರೆ, ಅ.6- ನಗರದ ಎಂ.ಸಿ.ಸಿ 'ಎ' ಬ್ಲಾಕ್‌ನಲ್ಲಿರುವ ಎ ಕ್ರೀವ್ ಡ್ಯಾನ್ಸ್ ಸ್ಟುಡಿಯೋ ವತಿಯಿಂದ ದಾಂಡಿಯಾ ಗಾರ್ಬಾ ಸೀಸನ್ -2 ಸ್ಪರ್ಧೆಯನ್ನು ಇದೇ ದಿನಾಂಕ 17 ರ ಮಂಗಳವಾರ ಸಂಜೆ 6 ಗಂಟೆಗೆ ಏರ್ಪಡಿಸಲಾಗಿದೆ.

ಈ ಸ್ಪರ್ಧೆಯಲ್ಲಿ ಸಂಗೀತ, ಲೈಫ್ ಡಿಜೆ, ಡಿಜೆ ನೈಟ್, ಸರ್ಪ್ರೈಜ್ ಗಿಫ್ಟ್, ಗೇಮ್ಸ್, ಫುಡ್ ಸ್ಟಾಲ್‌ಗಳೂ ಸಹ ವ್ಯವಸ್ಥೆ ಮಾಡಿರುತ್ತದೆ.

ಬೆಸ್ಟ್ ದಾಂಡಿಯಾ ಗ್ರೂಪ್‌ಗೆ (ಮೊದಲ ಮತ್ತು ಎರಡನೇ ಸ್ಥಾನ) ಪ್ರಶಸ್ತಿ, ಬೆಸ್ಟ್ ಕಾಸ್ಟ್ಯೂಂಗೆ (ಪುರುಷ ಮತ್ತು ಮಹಿಳೆ), ಬೆಸ್ಟ್ ಡ್ಯಾನ್ಸರ್ (ಪುರುಷ ಮತ್ತು ಮಹಿಳೆ) ಹಾಗೂ ಬೆಸ್ಟ್ ಕಪಲ್‌ಗಳಿಗೆ ನಗದು ಬಹುಮಾನವನ್ನು ನೀಡಲಾಗುವುದು.

ವಿವರಕ್ಕೆ : 95357-56278, 78997-58374 ಗೆ ಸಂಪರ್ಕಿಸುವುದು.

## ಶ್ರೇಷ್ಠ ವಿಜ್ಞಾನಿಗಳ ಪಟ್ಟಿಯಲ್ಲಿ ದಾವಿವಿ ನಾಲ್ವರು ಪ್ರಾಧ್ಯಾಪಕರು



ದಾವಣಗೆರೆ, ಅ. 6- ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯವು ಸಿದ್ಧಪಡಿಸಿದ ಜಾಗತಿಕ ಮಟ್ಟದ ಶ್ರೇಷ್ಠ ವಿಜ್ಞಾನಿಗಳ (2%) ಪಟ್ಟಿಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ನಾಲ್ವರು ಪ್ರಾಧ್ಯಾಪಕರು ಮತ್ತು ನಾಲ್ವರು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಗಣಿತಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಬಿ.ಸಿ. ಪ್ರಸನ್ನಕುಮಾರ, ಪ್ರೊ.ಪ್ರಕಾಶ್, ಪ್ರೊ.ಯು.ಎಸ್.ಮಹಾಬಲೇಶ್ವರ ಮತ್ತು ಸಂಶೋಧನಾ ವಿದ್ಯಾರ್ಥಿಗಳಾಗಿದ್ದ ಡಾ. ಆರ್.ಜೆ.ಪುನೀತ್ ಗೌಡ, ಆರ್. ನವೀನಕುಮಾರ, ಜೆ.ಕೆ.ಮಧುಕೇಶ್, ಆರ್.ಎಸ್.ವರುಣಕುಮಾರ್ ಹಾಗೂ ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ. ಗೋವಿಂದಪ್ಪ ಅವರು ಶ್ರೇಯಾಂಕ ಪಟ್ಟಿಯಲ್ಲಿ ಸೇರಿದ್ದಾರೆ.

## ನಗರದಲ್ಲಿ ಇಂದು ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಅಕ್ಕಿ ಸಮರ್ಪಣೆ

ಶ್ರೀ ಕ್ಷೇತ್ರ ಧರ್ಮಸ್ಥಳದ ಅನ್ನ ದಾಸೋಹಕ್ಕೆ ಅಕ್ಕಿ ಸಮರ್ಪಿಸುವ ಕಾರ್ಯಕ್ರಮವನ್ನು ಶ್ರೀ ಸೋಮೇಶ್ವರ ಸಮೂಹ ಸಂಸ್ಥೆಗಳ ಆಶ್ರಯದಲ್ಲಿ ಶ್ರೀ ಸೋಮೇಶ್ವರ ವಿದ್ಯಾಲಯದ ಆವರಣದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಸಾನ್ನಿಧ್ಯವನ್ನು ಹರಿಹರ ಶ್ರೀ ರಾಮಕೃಷ್ಣ ಮಿಷನ್ ಅಧ್ಯಕ್ಷರಾದ ಶ್ರೀ ಶಾರದೇಶಾನಂದ ಸ್ವಾಮೀಜಿ ವಹಿಸುವರು. ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಹೆಚ್.ಆರ್. ಅಶೋಕ ರೆಡ್ಡಿ, ಎಸ್.ಜೆ. ಶ್ರೀಧರ್, ಬಿಸಲೇರಿ ನಾಗರಾಜ್ ಆಗಮಿಸುವರು. ಸಹಕಾರ : ಶ್ರೀ ಸೋಮೇಶ್ವರ ಸಮೂಹ ಸಂಸ್ಥೆಗಳ ಸಿಬ್ಬಂದಿ ವರ್ಗ ಹಾಗೂ ಪೋಷಕರು.

# ಗಾಂಧೀಜಿ, ಶಾಸ್ತ್ರೀಜಿ ಸ್ಮರಣೆಯಲ್ಲಿ ದಾವಿವಿಯಿಂದ ಕುಗ್ರಾಮಗಳ ದತ್ತು

### ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ



ದಾವಣಗೆರೆ, ಅ. 6- ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ದಾವಣಗೆರೆ ವಿಶ್ವವಿದ್ಯಾನಿಲಯವು 'ಗಾಂಧಿ ಪ್ರೇರಣೆ' ವಿಶೇಷ ಕಾರ್ಯಕ್ರಮ ರೂಪಿಸಿ, ಅದರ ಮೂಲಕ ತನ್ನ ಕಾರ್ಯ ವ್ಯಾಪ್ತಿಯ ಕುಗ್ರಾಮಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಿದೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಬಿ.ಡಿ. ಕುಂಬಾರ ತಿಳಿಸಿದರು.

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಮಹಾತ್ಮ ಗಾಂಧಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದ ನಂತರ ನಡೆದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ 15ರಿಂದ 20 ಗ್ರಾಮಗಳನ್ನು ದತ್ತು ಪಡೆದು ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡುವುದು. ವಿಶ್ವವಿದ್ಯಾನಿಲಯದ ಪ್ರತಿಯೊಬ್ಬ ಪ್ರಾಧ್ಯಾಪಕರೂ ತಿಂಗಳಿಗೊಮ್ಮೆಯಾದರೂ ಗ್ರಾಮಕ್ಕೆ ಭೇಟಿ ನೀಡಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕೈ ಜೋಡಿಸುವರು. ಆ ಮೂಲಕ ಗ್ರಾಮಗಳಲ್ಲಿ ಶಿಕ್ಷಣ, ಆರೋಗ್ಯ, ಮೂಲಸೌಲಭ್ಯಗಳನ್ನು ದೊರಕಿಸಿಕೊಡುವ ಕೆಲಸವನ್ನು ಗಾಂಧಿ ಪ್ರೇರಣೆ ಕಾರ್ಯಕ್ರಮವನ್ನಾಗಿ ಆಚರಿಸಲಾಗುವುದು ಎಂದು ತಿಳಿಸಿದರು.

ಗಾಂಧೀಜಿ ಅವರ ಗ್ರಾಮ ಸ್ವರಾಜ್ಯವು ಎಲ್ಲರ ಸಹಭಾಗಿತ್ವ, ಸಹಕಾರದ ದುಡಿಮೆಯಿಂದ ನಿರ್ಮಾಣಗೊಳ್ಳುವುದು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜವಾಬ್ದಾರಿಯನ್ನು ಅರ್ಥ ಮಾಡಿಕೊಂಡು ಸತ್ಯ, ನಿಷ್ಠೆ, ಪ್ರಾಮಾಣಿಕತೆ, ನಿಸ್ವಾರ್ಥ ಹಾಗೂ ಸ್ವಾಭಿಮಾನದಿಂದ ಕೆಲಸ ಮಾಡಿದಾಗ ಸ್ವಾವಲಂಬಿ ಭಾರತವನ್ನು ಕಾಣಬಹುದು. ಗಾಂಧೀಜಿ ಅವರ ತತ್ವಾದರ್ಶಗಳ ಪಾಲನೆಗಾಗಿ ಪ್ರತಿಯೊಬ್ಬರೂ ಸಂಕಲ್ಪ ಮಾಡುವುದು ಅತ್ಯಗತ್ಯ ಎಂದು ವಿವರಿಸಿದರು.

'ಗಾಂಧೀಜಿ ಅವರ ಆದರ್ಶ, ತತ್ವ, ಸಂದೇಶಗಳನ್ನು ನಮಗೆ ಗೊತ್ತಿಲ್ಲದೇ ಹಲವಾರು ಸಂದರ್ಭದಲ್ಲಿ ಆಚರಿಸುತ್ತೇವೆ. ನ್ಯಾಯಕ್ಕಾಗಿ ಹೋರಾಟ ನಡೆದಾಗ ಗಾಂಧೀಜಿಯವರ ಸತ್ಯಾಗ್ರಹ, ಅಹಿಂಸಾ ತತ್ವ ಪಾಲನೆಯಾಗುತ್ತದೆ. ಆದರೆ ಗಾಂಧೀಜಿ ಮಾತ್ರ ವರ್ಷಕ್ಕೊಮ್ಮೆ ನೆನಪಾಗುತ್ತಿರುವುದು ವಿಪರ್ಯಾಸ' ಎಂದರು.

ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಸರಳ ಜೀವನ, ಭವ್ಯ ಭಾರತದ ಕಲ್ಪನೆ, ಕ್ರಿಯಾ ಶಕ್ತಿಗಳು ಯುವಜನರಿಗೆ ಪ್ರೇರಣೆಯಾಗಬೇಕು. ಅಹಿಂಸಾತ್ಮಕ ಹೋರಾಟದಿಂದ ಯಶಸ್ಸು ಸಾಧ್ಯ ಎಂಬುದನ್ನು ಇಬ್ಬರೂ ಮಹನೀಯರು ಸಾಬೀತುಪಡಿಸಿದ್ದಾರೆ. ಅವರ ಸರ್ವೋದಯ, ಅಹಿಂಸಾ, ಸತ್ಯ, ಸಾಮಾಜಿಕ ನ್ಯಾಯದ ತತ್ವಗಳು ಕೇವಲ ಹೇಳಿಕೆಗಷ್ಟೇ ಸೀಮಿತವಾಗದೆ ಕಾರ್ಯಪಾಲನೆಯಲ್ಲಿ ಜಾರಿಗೊಂಡಾಗ ರಾಮರಾಜ್ಯ ಪರಿಕಲ್ಪನೆಯ ಸದೃಢ ಗ್ರಾಮ ಭಾರತವನ್ನು ಕಾಣಬಹುದು ಎಂದು ಹೇಳಿದರು.

ಕಲಾ ನಿಕಾಯದ ಡೀನ್ ಪ್ರೊ. ವೆಂಕಟರಾವ್ ಪಲಾಟೆ ಅವರು ವಿಶೇಷ ಉಪನ್ಯಾಸ ನೀಡಿ, ಗಾಂಧೀಜಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜೀವನ ಶೈಲಿ, ಕಾರ್ಯ ವೈಖರಿಯಲ್ಲಿ ಸಾಮ್ಯತೆಯನ್ನು ಕಾಣಬಹುದು. ಇಬ್ಬರದೂ ಸರಳ ವ್ಯಕ್ತಿತ್ವ. ನೇರ ನಡೆಯ ಪ್ರಾಮಾಣಿಕ ವ್ಯಕ್ತಿಗಳು. ಅವರ ದೇಶಾಭಿಮಾನ, ಗ್ರಾಮೀಣ ಅಭಿವೃದ್ಧಿಯ ಯೋಜನೆಗಳು, ಸಾಮಾಜಿಕ ಚಿಂತನೆ, ಆರ್ಥಿಕ ಪರಿಕಲ್ಪನೆಗಳು ಸ್ವತಂತ್ರ ಭಾರತದ ಭದ್ರತೆಗೆ ಬುನಾದಿ ಹಾಕಿವೆ ಎಂದು ನುಡಿದರು.

ಹಳ್ಳಿಗಳನ್ನೇ ಹೆಚ್ಚಾಗಿ ಹೊಂದಿರುವ ಭಾರತದಲ್ಲಿ ಬೃಹತ್ ಕೈಗಾರಿಕೆಗಳಿಗಿಂತ ಗಾಂಧೀಜಿ ಅವರ ಸಲಹೆಯಂತೆ ಗುಡಿ ಕೈಗಾರಿಕೆಗಳು ಹೆಚ್ಚಬೇಕು. ದೇಶದ ಎಲ್ಲ ಜನರಿಗೂ ಕೆಲಸ ನೀಡುವ ಗುಡಿ ಕೈಗಾರಿಕೆಗಳು ನಿರುದ್ಯೋಗ, ಬಡತನ, ಅನಕ್ಷರತೆ ಸೇರಿದಂತೆ ಎಲ್ಲ ಸಮಸ್ಯೆಗಳಿಗೆ ಏಕೈಕ ಪರಿಹಾರ ಮಾರ್ಗವಾಗಿದೆ ಎಂದು ಹೇಳಿದರು.

ಕುಲಸಚಿವರಾದ ಬಿ.ಬಿ. ಸರೋಜ, ಪರೀಕ್ಷಾಂಗ ಕುಲಸಚಿವ ಡಾ.ಕೆ.ಶಿವಶಂಕರ್, ಹಣಕಾಸು ಅಧಿಕಾರಿ ಪ್ರೊ.ಆರ್.ಶಶಿಧರ್ ಮಾತನಾಡಿದರು. ಹಿಂದುಳಿದ ವರ್ಗಗಳ ಘಟಕದ ಸಂಚಾಲಕ ಡಾ.ನಾಗಭೂಷಣಗೌಡ ಸ್ವಾಗತಿಸಿದರು. ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿ.ಎಂ. ರೂಪಾ ಕಾರ್ಯಕ್ರಮ ನಿರೂಪಿಸಿದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಪೊಲೀಸ್ ಕ್ವಾರ್ಟಸ್, ಮುದ್ದಳ್ಳಿ ತೋಟ, ಪೊಲೀಸ್ ಕ್ವಾರ್ಟಸ್ ಎಮ್.ಎಸ್ ಬಿಲ್ಡಿಂಗ್, ಪೊಲೀಸ್ ಡಿ.ಎ.ಆರ್ ಆಫೀಸ್, ಜೊಳ್ಳಿ ಕಾಂಪೌಂಡ್, ವಿನೋಬ ನಗರ, 1ನೇ ಮೇನ್ ಚರ್ಚರಸ್ತೆ, ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಬೇಕಾಗಿದ್ದಾರೆ/ WANTED
ಟ್ಯಾಲಿ ಮತ್ತು ಎಕ್ಸೆಲ್ ಜ್ಞಾನ ಹೊಂದಿರುವ ಅಕೌಂಟೆಂಟ್ ಬೇಕಾಗಿದ್ದಾರೆ.
FULL TIME ACCOUNTANT WITH TALLY AND EXCEL KNOWLEDGE
ಸಂಪರ್ಕಿಸಿ : 98861 70950
CONTACT : 98861 70950

Gurudatt Academy
NEET-IITJEE-CET-NDA
Tuitions for Class 8th, 9th, 10th, 1st PUC, 2nd PUC, CBSC, ICSE, CET, NEET, IIT-JEE, NDA.
Physics, Chemistry, Maths, Biology
8th, 9th, 10th std - CBSE/ICSE, IIT, JEE/NEET
GURUDATT ACADEMY
Rangmahal, AVK College Road, Davangere.
Call : 97398 65711